ಸ್ವಾತಂತ್ರ್ಯ ಹೋರಾಟಗಾರ
ಸಿ.ಬಂದೀಗೌಡರ ಜೀವನ-ಸಾಧನೆ

(ಇತಿಹಾಸ ಎಂ.ಫಿಲ್ ಪದವಿಗಾಗಿ ಹಂಪಿ
ಕನ್ನಡ ವಿಶ್ವ ವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ :
ಮಹಾಂತೇಶ ಕುತನಿ
REGNO. KARSMH-00567

ಮಾರ್ಗದರ್ಶಕರು :
ಡಾ.ಎಸ್. ಶಿವರಾಮು
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ,-571 107. ಮೈಸೂರು ಜಿಲ್ಲೆ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ.
(ಕನ್ನಡ ವಿ.ವಿ.ಹಂಪಿ ಮಾನ್ಯತೆ ಪಡೆದಿದೆ)
2011-12

ಪ್ರಂ.ಶಿಂ.ಕ.ಅಣ್ಣಿಸ್.

985

REG. NO. KARSMH-00567

985

ಸ್ವಾತಂತ್ರ್ಯ ಹೋರಾಟಗಾರ ಸಿ.ಬಂದೀಗೌಡರ ಜೀವನ–ಸಾಧನೆ

(ಇತಿಹಾಸ ಎಂ.ಫಿಲ್ ಪದವಿಗಾಗಿ ಹಂಪಿ
ಕನ್ನಡ ವಿಶ್ವ ವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ :
ಮಹಾಂತೇಶ ಕುತನಿ
REG.NO. KARSMH-00567

ಮಾರ್ಗದರ್ಶಕರು :
ಡಾ.ಎಸ್.ಶಿವರಾಮು
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ,–571 107. ಮೈಸೂರು ಜಿಲ್ಲೆ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ.
(ಕನ್ನಡ ವಿ.ವಿ.ಹಂಪಿ ಮಾನ್ಯತೆ ಪಡೆದಿದೆ)
2011–12

ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2011-12ನೇ ಸಾಲಿಗೆ ಇತಿಹಾಸ ಎಂ.ಫಿಲ್., ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಸ್ವಾತಂತ್ರ್ಯ ಹೋರಾಟಗಾರ ಸಿ.ಬಂದೀಗೌಡರ ಜೀವನ-ಸಾಧನೆ" ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ.ಎಸ್.ಶಿವರಾಮು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತೇನೆ.

M.Y.Kutani

(ಮಹಾಂತೇಶ ಕುತನಿ)

ಸಂಶೋಧಕ, ಚರಿತ್ರೆ ವಿಭಾಗ,

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

ದಿನಾಂಕ : 22.6.12

ಸ್ಥಳ : ಮಂಡ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ಸ್ವಾತಂತ್ರ್ಯ ಹೋರಾಟಗಾರ ಸಿ.ಬಂದೀಗೌಡರ ಜೀವನ-ಸಾಧನೆ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ಚರಿತ್ರೆ ಎಂ.ಫಿಲ್ ಪದವಿಗಾಗಿ ಶ್ರೀಮಹಾಂತೇಶ ಕುತನಿ ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ.
ದಿನಾಂಕ : 22.6.12

ಡಾ. ಎಸ್.ಶಿವರಾಮು
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ,–571 107.
ಮೈಸೂರು ಜಿಲ್ಲೆ.

ಪರಿವಿಡಿ

	ಪುಟ ಸಂಖ್ಯೆ
ಅಧ್ಯಾಯ : ಒಂದು– ಪೀಠಿಕೆ	1–7
ಅಧ್ಯಾಯ : ಎರಡು– ಸಿ.ಬಂದೀಗೌಡರ ವ್ಯಕ್ತಿ ಜೀವನ	8–35
ಅಧ್ಯಾಯ : ಮೂರು –ಸ್ವಾತಂತ್ರ್ಯ ಹೋರಾಟಗಾರರಾಗಿ ಸಿ.ಬಂದೀಗೌಡರು	36–43
ಅಧ್ಯಾಯ : ನಾಲ್ಕು–ಸಮಾಜ ಸೇವಕರಾಗಿ ಸಿ.ಬಂದೀಗೌಡರು	44–55
ಅಧ್ಯಾಯ : ಐದು– ಉಪಸಂಹಾರ	56–60
I. : ಪರಮಾರ್ಶನ ಗ್ರಂಥಗಳು	61–65
II. : ವಂಶವೃಕ್ಷ	66

ಅಧ್ಯಾಯ : ಒಂದು

ಪೀಠಿಕೆ

ಕ್ರಿಯಾಶೀಲವಲ್ಲದ ಜೀವನ ಜಡವಾಗುತ್ತದೆ. ಕ್ರಿಯೆಯೇ ಬದುಕು. ಬದುಕೇ-ಕ್ರಿಯೇ. ಕ್ರಿಯೆ ನಿಂತಾಗ ಸಾವು ಸನ್ನಿಹಿತವಾದಂತೆಯೇ ಇಂತಹ ಕ್ರಿಯಾಶೀಲ ಬದುಕು ನಡೆಸಿದ ಮಹಾನ್ ವ್ಯಕ್ತಿಗಳನ್ನು ಗುರುತಿಸಿ ಅವರ ಜೀವನ ಸಾಧನೆ ಹಾಗೂ ಮೌಲ್ಯಗಳನ್ನು ಸಮಾಜಕ್ಕೆ ತಿಳಿಸಿ ಅವರ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಆ ವ್ಯಕ್ತಿಗಳನ್ನು ಗೌರವಿಸುವುದು. ನಾಗರೀಕ ಸಮಾಜದ ಆದ್ಯಕರ್ತವ್ಯವಾಗಿದೆ.[1] ಈ ಸಾಲಿನಲ್ಲಿ ನಿಲ್ಲಬಹುದಾದ ಪ್ರಮುಖ ವ್ಯಕ್ತಿಯೆಂದರೆ ಸ್ವಾತಂತ್ರ್ಯ ಹೋರಾಟಗಾರರಾದ ಡಾ.ಸಿ.ಬಂದೀಗೌಡರು.

ಬಂದೂಕದಬಲ ಹಾಗೂ ಒಡೆದು ಆಳುವ ನೀತಿಯಿಂದ ಬ್ರಿಟೀಷರು ಭಾರತೀಯರನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ಅಧಿಕಾರವನ್ನು ಸುಮಾರು 180 ವರ್ಷಗಳ ದೀರ್ಘ ಕಾಲದವರೆಗೆ ಉಳಿಸಿಕೊಂಡಿದ್ದರು. ಈ ವ್ಯವಸ್ಥೆಯ ವಿರುದ್ಧ ಭಾರತೀಯರು ಹೋರಾಡಿ ತ್ಯಾಗ ಬಲಿದಾನಗಳ ಮೂಲಕ ಸ್ವಾತಂತ್ರ್ಯವನ್ನು ಪಡೆಯಲು ಬಯಸಿದರು. ಅಂತಹ ಹೋರಾಟದಲ್ಲಿ ಕರ್ನಾಟಕ ತನ್ನದೇ ಆದ ಪಾತ್ರವನ್ನು ಹೊಂದಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರವು ಅಮೋಘವಾಗಿ ನಿಲ್ಲಬೇಕಾದರೆ ಅಂದು ಹೋರಾಟ ಮಾಡಿದ ಅನೇಕ ಮಹನೀಯರುಗಳ ಕೊಡುಗೆ ಪ್ರಮುಖ ಕಾರಣ.[2]

ಮಂಡ್ಯ ಜಿಲ್ಲೆಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ರಾಜಕಾರಣಿ. ಚಳುವಳಿಗಾರ, ವೈದ್ಯರಾಗಿಸಮಾಜಸೇವೆ, ಗಾಂಧೀಜಿಯ ಆಶಯದಂತೆ ಬದುಕನ್ನು ಸರಳೀಕರಣ ಗೊಳಿಸಿಕೊಂಡು ತನ್ನ ಸುತ್ತಲಿನ ಪರಿಸರವನ್ನು ಸತ್ಯ, ಅಹಿಂಸೆ, ಪ್ರಾಮಾಣಿಕತೆಗಳಿಂದ ಕೂಡಿರುವಂತೆ ಶ್ರಮಿಸುತ್ತಿರುವ ಬಂದೀಗೌಡರು ಈ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮದೇ ಆದ ಛಾಪೂ ಮೂಡಿಸಿದ್ದಾರೆ.

ಬಂದೀಗೌಡರು ಸ್ವಾತಂತ್ರ್ಯ ಚಳುವಳಿಯಲ್ಲಿ ನಿತ್ಯವಂದ್ಯರು ಹಾಗೂ ಪ್ರಾತಃಸ್ಮರಣೀಯರು ನಿಸ್ವಾರ್ಥ ಸೇವೆಯಿಂದ ಜನಮನ್ನಣೆಗಳಿಸಿದ್ದವರು. ಗಾಂಧೀಜಿಯವರ ಮೌಲ್ಯ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದ ಗೌಡರು ನೆರೆಹೊರೆಯ ಪರಿಸರವನ್ನು ಸುಧಾರಿಸಬೇಕೆಂಬ ಹಂಬಲ ಹೊಂದಿದ್ದಾರೆ. ಕುಯುಕ್ತಿ, ಕುತಂತ್ರ , ಪಿತೂರಿ ಶಬ್ದಗಳ ಅರಿವಿಲ್ಲದೇ ವೈಯಕ್ತಿಕ ಜೀವನದಲ್ಲಿ ನೇರವಾದ ಬದುಕನ್ನು ಅವಲಂಬಿಸಿದ ವ್ಯಕ್ತಿ ಬಂದೀಗೌಡರು.

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ಸಮೀಕ್ಷೆ :

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಕಿರುಹೊತ್ತಿಗೆಗಳು ಮಾತ್ರ

ಪ್ರಕಟವಾಗಿದೆ. ಸಿ.ಬಂದೀಗೌಡರ ದಿನಚರಿ ಹಾಗೂ ಹಲವು ದಾಖಲೆಗಳು ನಮ್ಮ ಸಂಶೋಧನೆಗೆ ಉಪಯುಕ್ತವಾಗಿದೆ.

ಬಂದೀಗೌಡರನ್ನು ಕುರಿತಂತೆ ನೇರವಾಗಿ ಸಂಬಂಧಿಸಿರದ ಹಲವು ಗ್ರಂಥಗಳಲ್ಲಿ ಅವರ ಹೋರಾಟದ ಬಗ್ಗೆ ವಿವರಣೆಯನ್ನು ಪಡೆಯಲಾಗಿದೆ. 1988 ರಲ್ಲಿ **ಹ.ಕ. ರಾಜೇಗೌಡರ** ಸಂಪಾದಕತ್ವದಲ್ಲಿ ಪ್ರಕಟಗೊಂಡ ಸಿಂಗಾರಿಗೌಡ ಗೌರವಗ್ರಂಥ **"ಸಿಂಗಾರ"** ಎಂಬ ಗ್ರಂಥದಲ್ಲಿ ಎಂ.ಕೆ. ಕೆಂಪೇಗೌಡರ ಲೇಖನ **"ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ"** ದಲ್ಲಿ ಗೌಡರು ತಾಲ್ಲೂಕಿನಲ್ಲಿ ನಡೆದ ಹಲವು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದುದರ ಬಗ್ಗೆ ವಿವರಣೆ ನೀಡಿದೆ. **ದೇ.ಜ.ಗೌ** ಸಂಪಾದಕತ್ವದಲ್ಲಿ ಮಂಡ್ಯದಲ್ಲಿ 1994 ರಲ್ಲಿ ನಡೆದ 63ನೇ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಪುಟ **"ಸಿರಿಯೊಡಲು"** ಗ್ರಂಥದಲ್ಲಿ ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಬಗ್ಗೆ ವಿವರಣೆ ನೀಡುವಾಗ ಬಂದೀಗೌಡರ ಬಗ್ಗೆಯೂ ಉಲ್ಲೇಖವಿದೆ. 1994 ರಲ್ಲಿ ದೇ.ಜ.ಗೌ. ಸಂಪಾದಕತ್ವದ **"ಸುವರ್ಣ ಮಂಡ್ಯ"** ಗ್ರಂಥದಲ್ಲೂ ಡಾ.ಸಿ.ಬಂದೀಗೌಡ" ರ ಬಗ್ಗೆ ಮಾಹಿತಿ ಇದೆ. **ಸಿ.ಪಿ.ನಾಗರಾಜ** ಅವರು ಬರೆದಿರುವ **"ಮೌನ ಸಾಧಕ"** ಎಂಬ ಕಿರುಹೊತ್ತಿಗೆಯು 2005 ರಲ್ಲಿ ಪ್ರಕಟಿಸಿದ್ದು, ಈ ಹೊತ್ತಿಗೆಯು ಗೌಡರ ಜೀವನ ಸಾಧನೆ ಕುರಿತಂತೆ ರಚಿಸಿರುವ ಏಕೈಕ ಕೃತಿಯಾಗಿದೆ. **ಸೂರ್ಯನಾಥಕಾಮತ್** ಸಂಪಾದಕತ್ವದ **"ಕರ್ನಾಟಕ ರಾಜ್ಯ ಗೆಜೆಟಿಯರ್ ಸಂಪುಟ 1.2** ಕೃತಿಗಳು ಕರ್ನಾಟಕದಲ್ಲಿ ನಡೆದಿರುವ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ವಿವರಣೆ ನೀಡುತ್ತದೆ. ಶಿವಪುರಧ್ವಜ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ ಮತ್ತು ಮೈಸೂರು ಚಲೋಚಳುವಳಿಯ ಬಗ್ಗೆ ವಿತರಣೆ ನೀಡಿದ್ದರೆ. **ದೊರೆಸ್ವಾಮಿ ಹೆಚ್.ಎಸ್.**ರವರ **"ಸ್ವಾತಂತ್ರ್ಯ ಸಂಗ್ರಾಮ –ಕರ್ನಾಟಕ "** ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಮಾಹಿತಿ ನೀಡುತ್ತದೆ. **ವೀರತ್ತಪ್ಪ ಕೆ.** ಅವರು ಬರೆದಿರುವ **"ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ"** ಕೃತಿಯು ಮೈಸೂರು ಸಂಸ್ಥಾನದಲ್ಲಿ ನಡೆದ ಹಲವು ಸ್ವಾತಂತ್ರ್ಯ ಸಂಗ್ರಾಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ವಿವರಿಸುತ್ತದೆ. ಕರ್ನಾಟಕ ಜನಪರವೇದಿಕೆಯವರು 2009 ರಲ್ಲಿ ಪ್ರಕಟಿಸಿರುವ **"ಸ್ವಾತಂತ್ರ್ಯದೆಡೆಗೆ ನಿಲ್ಲದನಡಿಗೆ"** ಎಂಬ ಕೃತಿಯು ಡಾ.ಸಿ.ಬಂದೀಗೌಡರ ಹೋರಾಟದ ಸಂದರ್ಶನವನ್ನು ತಿಳಿಸುತ್ತದೆ. ಇಷ್ಟೆಲ್ಲಾ ಕೃತಿಗಳು ಪ್ರಕಟಗೊಂಡಿದ್ದರೂ ಅವರ ಸಮಗ್ರ ಬದುಕಿನ ಚಿತ್ರಣವನ್ನು ನೀಡುವ ಕೃತಿ ರಚನೆಗೊಂಡಿಲ್ಲದಿರುವುದು ವಿಷಾದನೀಯ ಸಂಗತಿ. ಈ ಉದ್ದೇಶದಿಂದ ಸಿ.ಬಂದೀಗೌಡರ ಬಗ್ಗೆ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತದೆ. ಇದುವರೆಗೂ ಬಂದೀಗೌಡರ ಬಗ್ಗೆ ಪ್ರಕಟಗೊಂಡಿರುವ ಗ್ರಂಥಗಳ ಜೊತೆಗೆ ವೈಯಕ್ತಿಕ ಸಂದರ್ಶನ ನಡೆಸಿ ಅವುಗಳನ್ನು

ಆಧಾರವಾಗಿಟ್ಟುಕೊಂಡು ಸಿ.ಬಂದೀಗೌಡರ ಸಮಗ್ರ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗಿದೆ.

ಅಧ್ಯಯನ ವಿಷಯದ ಮಹತ್ವ :

ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ಜನರು ತಮ್ಮ ತ್ಯಾಗ ಬಲಿದಾನಗಳ ಮೂಲಕ ಭಾರತವನ್ನು ಸ್ವಾತಂತ್ರ್ಯಗೊಳಿಸಿದ್ದಾರೆ. ಅಂತಹ ನಿಸ್ವಾರ್ಥ ವ್ಯಕ್ತಿಗಳ ಬದುಕಿನ ವಿವಿಧ ಮಜಲುಗಳನ್ನು ತಿಳಿದು ಅವರ ಮಾರ್ಗದರ್ಶನ ಇಂದಿನ ಜನತೆಗೆ ಆದರ್ಶಮಯವಾಗಿದೆ. ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ರಾಷ್ಟ್ರಪ್ರೇಮ ಬೆಳೆಸಿಕೊಂಡು ಬಂದ ಬಂದೀಗೌಡರು ಗಾಂಧೀಜಿಯ ಆಶಯದಂತೆ ಬದುಕನ್ನು ಸರಳೀಕರಣಗೊಳಿಸಿಕೊಂಡು ತನ್ನ ಸುತ್ತಮುತ್ತಲಿನ ಪರಿಸರವನ್ನು ಸತ್ಯ, ಅಹಿಂಸೆ, ಪ್ರಾಮಾಣಿಕತೆಗಳಿಂದ ಕೂಡಿರುವಂತೆ ಶ್ರಮಿಸುತ್ತಿರುವವರು. ಸಾಮಾನ್ಯ ಜನರಿಗೆ ಕೈಗೆಟುಕುವ ವೈದ್ಯರಾಗಿ 'ಜನತಾವೈದ್ಯ' ಎಂಬ ಪ್ರೀತಿಗೆ ಪಾತ್ರರಾಗಿರುವವರು.[3]

ಗಾಂಧೀಜಿಯವರ ಸರಳ ಬದುಕಿಗೆ ಮಾರುಹೋದ ಗೌಡರು ಯಾವಾಗಲೂ ಖಾದಿ ಧಾರಿಯಾಗಿಯೇ ಇದ್ದಾರೆ. ಈ ಇಳಿವಯಸ್ಸಿನಲ್ಲೂ ವ್ಯಕ್ತಿತ್ವವನ್ನು ಪರಿಶುದ್ಧವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಇವತ್ತಿಗೂಆದರ್ಶ ಪ್ರಿಯರಾಗಿ ಬಾಳುತ್ತಿರುವ ಗೌಡರ ಸ್ವಚ್ಚ ಬದುಕು ಅನುಕರಣೀಯವಾದದ್ದು. ಸ್ವಾತಂತ್ರ್ಯ ಹೋರಾಟಗಾರರಾಗಿ ಶಿವಪುರ ಧ್ವಜಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಡಾ. ಬಂದೀಗೌಡರು ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಅಯ್ಕೆಗೊಂಡು ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿ 1945 ರಿಂದ 1950 ರವರೆಗೆ ಕಾರ್ಯನಿರ್ವಹಿಸಿದ್ದಾರೆ. 1947–50 ರವರೆಗೆ ಶ್ರೀರಂಗಪಟ್ಟಣದ ಮೊಟ್ಟ ಮೊದಲ ಪುರಸಭಾಧ್ಯಕ್ಷರಾಗಿ ಆಯ್ಕೆಗೊಂಡು ಹಲವು ರಚನಾತ್ಮಕ ಕಾರ್ಯಗಳನ್ನು ಮಾಡಿದ್ದಾರೆ.[4] ಶಿಕ್ಷಕರ ಕ್ಷೇತ್ರದಿಂದ 1964–1970 ರಲ್ಲಿ ವಿಧಾನಪರಿಷತ್ತಿಗೆ ಆಯ್ಕೆಗೊಂಡು ಹಲವರು ಜನಪರ ಕಾರ್ಯಗಳ ಬಗ್ಗೆ ಸದನದ ಗಮನ ಸೆಳೆದಿದ್ದಾರೆ.

ಗಾಂಧೀವಾದಿಯಾದ ಬಂದೀಗೌಡರು ಅವರ ಪ್ರಭಾವಕ್ಕೆ ಒಳಗಾಗಿ ಹಲವು ಹರಿಜನೋದ್ಧಾರ ಕಾರ್ಯಗಳನ್ನು ಶ್ರೀರಂಗಪಟ್ಟಣದಲ್ಲಿ ನಡೆಸಿದ್ದಾರೆ. 1975 ರಲ್ಲಿ ಪ್ರಧಾನಿ ಇಂದಿರಾಗಾಂಧಿಯವರು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ ಸಂದರ್ಭದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾದ ನಿರಂಕುಶ ಆಡಳಿತವನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷದಿಂದ ಹೊರಬಂದರು. ಅನಂತರ ಜಯಪ್ರಕಾಶ್ ನಾರಾಯಣ ಅವರ ರಾಜಕೀಯ ಮತ್ತು ಸಾಮಾಜಿಕ ಆಂದೋಲನದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ ಜನತಾ ಪಕ್ಷಕ್ಕೆ ಸೇರಿದರು. 1979

ರಿಂದ 1985 ರವರೆಗೆ ಮಂಡ್ಯ ಜಿಲ್ಲೆಯ ಜನತಾ ಪಕ್ಷದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ರಾಜ್ಯಮಟ್ಟದ ಜನತಾ ಪಕ್ಷದಲ್ಲಿ ಪದಾಧಿಕಾರದಲ್ಲಿದ್ದ ಕೆಲವು ವ್ಯಕ್ತಿಗಳ ಊಳಿಗಮಾನ್ಯ ವ್ಯವಸ್ಥೆಯ ಮನೋಧರ್ಮದ ನಡೆ-ನುಡಿಗಳನ್ನು ಪ್ರತಿಭಟಿಸಿ, 1985 ರಲ್ಲಿ ಜನತಾ ಪಕ್ಷವನ್ನು ತೊರೆದು, ಸಕ್ರಿಯ ರಾಜಕಾರಣದಿಂದ ದೂರ ಸರಿದರು.[5]

ಡಾ. ಸಿ.ಬಂದೀಗೌಡರು ಸ್ವಾತಂತ್ರ್ಯ ಹೋರಾಟಗಾರರಾಗಿ, ಜನಪ್ರಿಯ ವೈದ್ಯರಾಗಿ, ರಾಜಕಾರಣಿಯಾಗಿ, ಗಾಂಧೀವಾದಿಯಾಗಿ, ಸಮಾಜ ಸೇವಕರಾಗಿ ಕರ್ನಾಟಕದ ಚರಿತ್ರೆಯಲ್ಲಿ ವಿಶಿಷ್ಟಸ್ಥಾನವನ್ನು ಗಳಿಸಿಕೊಂಡಿದ್ದಾರೆ. ವಿಶೇಷವಾಗಿ ಮಂಡ್ಯ ಜಿಲ್ಲೆಯಲ್ಲಿ ಇವರ ಕೊಡುಗೆ ಈ ಎಲ್ಲಾ ರಂಗದಲ್ಲೂ ಅಪಾರವಾದುದು. ಈ ಎಲ್ಲಾ ಕಾರಣಗಳಿಂದಾಗಿ ಸಿ.ಬಂದೀಗೌಡರ ಬಗ್ಗೆ ಅಧ್ಯಯನ ನಡೆಸುವುದು ಬಹಳ ಸೂಕ್ತವೆನಿಸಿದೆ.

ಆಧಾರಗಳು :

ಸಿ.ಬಂದೀಗೌಡರ ಬಗ್ಗೆ ಸಂಶೋಧನಾ ಪ್ರಬಂಧ ರಚಿಸಲು ಪ್ರಮುಖವಾಗಿ ಮೂಲ ಹಾಗೂ ಅನುಷಂಗಿಕ ಆಧಾರಗಳನ್ನೇ ಅವಲಂಬಿಸಬೇಕಾಗಿದೆ. ಏಕೆಂದರೆ, ಬಂದೀಗೌಡರಿಗೆ ಪತ್ರವ್ಯವಹಾರಗಳನ್ನು ಸಂಗ್ರಹಿಸುವ ಚಾಳಿ ಇರಲಿಲ್ಲ. ಸಂಗ್ರಹ ಬುದ್ಧಿಯಾಗಲಿ, ಪ್ರದರ್ಶನೇಚ್ಛೆಯಾಗಲಿ ಅವರ ಜಾಯಮಾನಕ್ಕೆ ಹೊಂದಿಕೊಂಡಿಲ್ಲ. ಆದ್ದರಿಂದ ಅವರ ಜೀವನ ಅಧ್ಯಯನ ಸಂಬಂಧವುಳ್ಳ ಯಾವ ದಾಖಲೆಯೂ ದೊರೆಯುವುದಿಲ್ಲ.

ಶಾಸನಸಭೆಯ ನಡಾವಳಿ ಹಾಗೂ ಸರ್ಕಾರಿ ದಾಖಲೆಗಳೇ ಬಹುಮುಖ್ಯವಾದ ಮೂಲ ಆಧಾರಗಳಿವೆ. 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬಂದೀಗೌಡರು ಭಾಗವಹಿಸಿ ತಮ್ಮ ರಾಷ್ಟ್ರಪ್ರೇಮ ಮೆರೆದಿದ್ದಾರೆ. ಬಂದೀಗೌಡರು 1945 ರಿಂದ 1950 ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದು, ಆ ವೇಳೆಯಲ್ಲಿ ಶಾಸನಸಭೆಯಲ್ಲಿ ಹಲವಾರು ಬಾರಿ ಹಲವಾರು ವಿಷಯಗಳ ಬಗ್ಗೆ ಮಾತನಾಡಿ ದ್ದಾರೆ. ಆಗ ವಿಧಾನಮಂಡಲದಲ್ಲಿ ಸಂಗ್ರಹವಾದ **"Proceedings of the Mysore Representative Assembly debates- 1945-1950"**[6] ಯಲ್ಲಿ ಗೌಡರ ಸುದೀರ್ಘವಾದ ಭಾಷಣಗಳಿಂದ ರಾಜ್ಯ ರೈತರು, ಆಹಾರ ಸಮಸ್ಯೆಗಳು, ಬೆಲ್ಲದ ತಯಾರಿಕಾ ಸಮಸ್ಯೆ ಮೊದಲಾದ ವಿಷಯಗಳ ಬಗ್ಗೆ ಗೌಡರಿದ್ದ ಪೂರ್ವಾಲೋಚನೆಯು ತಿಳಿದು ಬರುತ್ತದೆ.

ಬಂದೀಗೌಡರು 1964 ರಿಂದ 1970 ರ ಅವಧಿಯಲ್ಲಿ ಶಿಕ್ಷಕರ ಕ್ಷೇತ್ರದಿಂದ ರಾಜ್ಯ ವಿಧಾನಪರಿಷತ್‌ಗೆ ಆಯ್ಕೆಗೊಂಡು ಕರ್ತವ್ಯ ನಿರ್ವಹಿಸಿದ್ದಾರೆ. ಅವರು ವಿಧಾನಪರಿಷತ್ ಸದಸ್ಯರಾಗಿದ್ದಾಗ ವಿಧಾನ ಮಂಡಲದಲ್ಲಿ ನಡೆದ ಹಲವಾರು

ಚರ್ಚೆಗಳ ಸಮಗ್ರ ವಿವರಣೆಯು **"Mysore legislative council debates-1964-1970"**.[7] ನ ಮೂಲಕ ತಿಳಿಯುವುದು.

ಸರ್ಕಾರಿ ಪ್ರಕಟಣೆಯ ಜೊತೆಗೆ 1945 ರಿಂದ ಇವರೆಗಿನ ಪಾಲ್ಗೊಂಡ ಚಳುವಳಿ ಹೋರಾಟ ಸಮಾಜ ಸುಧಾರಣೆ ಮೊದಲಾದ ಸಾಧನೆಗಳ ವಿವರಣೆಯು ರಾಜ್ಯದ ಹಲವಾರು ದೈನಂದಿನ ಪತ್ರಿಕೆಗಳ ಸುದ್ದಿಯು ಗೌಡರ ಬಗ್ಗೆ ವಿವರಣೆ ನೀಡುತ್ತವೆ. ಬಂದೀಗೌಡರ ಬಗ್ಗೆ ಈ ಮೇಲ್ಕಂಡ ಮೂಲಾಧಾರಗಳಲ್ಲದೇ ಅವರ ಕುಟುಂಬ ಸದಸ್ಯರಾದ ಅವರ ಮಕ್ಕಳಾದ ಡಾ.ಸೃಜನ್‌ಕುಮಾರ್, ಪ್ರೇಮಕುಮಾರ್, ಜೋತ್ಸ್ನಾ ಮೊದಲಾದವರಿಂದ ಗೌಡರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಪ್ರೌಢ ಪ್ರಬಂಧ ರಚಿಸಲಾಗಿದೆ.

ಸಂಶೋಧನ ವಿಧಾನ :

ಡಾ. ಸಿ.ಬಂದೀಗೌಡರ ವ್ಯಕ್ತಿಚರಿತ್ರೆಯ ಸಂಶೋಧನಾ ವಿಷಯದಲ್ಲಿ ಹಲವಾರು ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ವಿಮರ್ಶಾತ್ಮಕ ಮತ್ತು ವಿಶ್ಲೇಷಣಾ ಮಾರ್ಗ, ಬಂದೀಗೌಡರಿಗೆ ಸಂಬಂಧಿಸಿದ ಪ್ರಕಟಿತ ಮತ್ತು ಅಪ್ರಕಟಿತ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅಲ್ಲದೇ ಬಂದೀಗೌಡರಿಗೆ ಸಂಬಂಧಿಸಿದಂತೆ, ಇರುವ ಹೇಳಿಕೆಯಲ್ಲಿ ಹೊಗಳಿಕೆ ಮತ್ತು ತೆಗಳಿಕೆಗಳೆಡರನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ಸತ್ಯಾಂಶವನ್ನು ಪರಾಮರ್ಶಿಸಲಾಗಿದೆ. ಗೌಡರ ಸಮಕಾಲೀನರು ಹಾಗೂ ಅವರ ಸಮಕಾಲೀನ ಸಾಹಿತ್ಯಾಧಾರಗಳಿಂದ ಸತ್ಯಾಂಶವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಅನಂತರ ಸಿ.ಬಂದೀಗೌಡರ ಜೀವನ ಸಾಧನೆಗಳನ್ನು ಕುರಿತು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಲಾಗಿದೆ. ಅಧ್ಯಯನದ ದೃಷ್ಟಿಯಿಂದ ಈ ಸಂಶೋಧನಾ ವಿಷಯವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

: ಅಧ್ಯಾಯಗಳ ವರ್ಗೀಕರಣ :

ಅಧ್ಯಾಯ ಒಂದು : ಪೀಠಿಕೆ

ಈ ಅಧ್ಯಾಯದಲ್ಲಿ ಸಿ.ಬಂದೀಗೌಡರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ನಂತರ ಪ್ರಸ್ತುತ ಸಂಶೋಧನಾ ವಿಷಯದ ಮಹತ್ವವನ್ನು ಚರ್ಚಿಸಿದೆ. ಗೌಡರು ಸ್ವಾತಂತ್ರ್ಯ ಹೋರಾಟಗಾರರಾಗಿ, ಪ್ರಖ್ಯಾತ ವೈದ್ಯರಾಗಿ, ಗಾಂಧೀವಾದಿಯಾಗಿ, ರಾಜಕಾರಣಿಯಾಗಿ ಗಣನೀಯ ಸಾಧನೆಗೈದು ವ್ಯಕ್ತಿ ಚರಿತ್ರೆಯ ಇತಿಹಾಸದಲ್ಲಿ ಒಂದು ಶಾಶ್ವತವಾದ ಸ್ಥಾನ ಗಳಿಸಿದ್ದಾರೆ. ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ ಸಿ.ಬಂದೀಗೌಡರ ಬಗ್ಗೆ ಹಲವಾರು ಗ್ರಂಥಗಳೂ ಲಭ್ಯವಾದರೂ ಯಾವುದೊಂದು ಗ್ರಂಥವೂ ಇದುವರೆಗೂ ಅವರ ವ್ಯಕ್ತಿತ್ವದ ಎಲ್ಲಾ ರಂಗದ ಸಾಧನೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡುವುದಿಲ್ಲ. ಈ ಅಧ್ಯಾಯದಲ್ಲಿ

ಸಿ.ಬಂದೀಗೌಡರ ಬಗ್ಗೆ ಪ್ರಕಟವಾಗಿರುವ ಹಾಗೂ ಅಪ್ರಕಟಿತ ಗ್ರಂಥಗಳ ಪರಿಚಯವನ್ನು ಮಾಡಲಾಗಿದೆ. ಈ ಪ್ರೌಢ ಪ್ರಬಂಧವನ್ನು ರಚಿಸಲು ಉಪಯೋಗಿಸಿದ ಮೂಲಾಧಾರಗಳ ಬಗ್ಗೆಯೂ ಹಾಗೂ ಈ ಪ್ರಬಂಧವನ್ನು ಸಿದ್ದಪಡಿಸಲು ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ಚರ್ಚಿಸಲಾಗಿದೆ.

ಅಧ್ಯಾಯ ಎರಡು : ಸಿ.ಬಂದೀಗೌಡರ್ರ ವ್ಯಕ್ತಿ ಜೀವನ

ಎರಡನೇ ಅಧ್ಯಾಯದಲ್ಲಿ ಸಿ.ಬಂದೀಗೌಡರ ವ್ಯಕ್ತಿ ಜೀವನದ ಸಮಗ್ರ ವಿವರಣೆಯನ್ನು ನೀಡಲಾಗಿದೆ. ಗೌಡರ ಜನನ, ಬಾಲ್ಯ, ವಿದ್ಯಾಭ್ಯಾಸ, ವೈದ್ಯಕೀಯ ವಿದ್ಯಾಭ್ಯಾಸ, ವೈವಾಹಿಕ ಜೀವನ, ವೈದ್ಯರಾಗಿ ವೃತ್ತಿಜೀವನ ಪ್ರಾರಂಭ, ಸಮಾಜ ಸೇವಾ ಕಾರ್ಯಾರಂಭದ ಮೂಲಕ ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಇದಲ್ಲದೇ ಪುರಸಭಾ ಅಧ್ಯಕ್ಷರಾಗಿ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಇವರ ಕಾರ್ಯಗಳು, ವಿಧಾನ ಪರಿಷತ್ ಸದಸ್ಯರಾಗಿ ಕೈಗೊಂಡ ಕಾರ್ಯಗಳ ಬಗ್ಗೆ ವಿವರಣೆ ನೀಡಲಾಗಿದೆ.

ಅಧ್ಯಾಯ ಮೂರು : ಸ್ವಾತಂತ್ರ್ಯ ಹೋರಾಟಗಾರರಾಗಿ ಸಿ.ಬಂದೀಗೌಡರು.

ಮೂರನೇ ಅಧ್ಯಾಯದಲ್ಲಿ ಸಿ.ಬಂದೀಗೌಡರು ಸ್ವಾತಂತ್ರ್ಯ ಚಳುವಳಿಯಲ್ಲಿ ಅಂದರೆ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಸ್ವಯಂ ಸೇವಕರಾಗಿ ಇವರು ವಹಿಸಿದ್ದ ನಾಯಕತ್ವದ ಬಗ್ಗೆ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರ ಬಗ್ಗೆ, ಸೇವಾ ಕಾರ್ಯಾರಂಭದ ಮೂಲಕ ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯ ನಾಲ್ಕು : ಸಮಾಜ ಸೇವಕರಾಗಿ ಸಿ.ಬಂದೀಗೌಡರು.

ನಾಲ್ಕನೇ ಅಧ್ಯಾಯದಲ್ಲಿ ಬಂದೀಗೌಡರು ವೈದ್ಯರಾಗಿ ಮಾಡಿದ ಸೇವೆಯನ್ನು ವಿವರಿಸಲಾಗಿದೆ. ಜನಪರ ಹೋರಾಟಗಾರರಾಗಿ ಬಂದೀಗೌಡರು ಗೇಣಿ ಶಾಸನವನ್ನು ಶ್ರೀರಂಗಪಟ್ಟಣದಲ್ಲಿ ಜಾರಿಗೊಳಿಸಿದ್ದರ ಹಾಗೂ ಕೋಮುಸೌಹಾರ್ದತೆ, ಸರ್ವೋದಯ ಸಮಾವೇಶ, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಸವಿವರವಾದ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯ ಐದು : ಉಪ ಸಂಹಾರ

ಈ ಅಧ್ಯಾಯದಲ್ಲಿ ಪ್ರಸ್ತುತ ಪ್ರೌಢಪ್ರಬಂಧದ ಫಲಿತಾಂಶದ ವಿವರಣೆಗಳನ್ನು ನೀಡಲಾಗಿದೆ. ಬಂದೀಗೌಡರು ಸ್ವಾತಂತ್ರ್ಯ ಹೋರಾಟಗಾರರಾಗಿ, ರಾಜಕಾರಣಿಯಾಗಿ ಗಾಂಧೀವಾದಿಯಾಗಿ ಹಾಗೂ ಜನಪ್ರಿಯ ಹೋರಾಟಗಾರರಾಗಿ ದುಡಿದು ಕೀರ್ತಿ ಗಳಿಸಿದ್ದಾರೆ.

ಅಡಿ ಟಿಪ್ಪಣಿಗಳು.

1. ಗೋಪಾಲ್ ಆರ್.(ಸಂ.) ಮಂಡ್ಯ ಜಿಲ್ಲೆಯ ಇತಿಹಾಸ & ಪುರಾತತ್ವ–ಪುಟ 594
2. ವೆಂಕಟಪ್ಪಗೌಡ, ಕೋಣಂದೂರು–ನವಮೈಸೂರು ಶಿಲ್ಪಿ ಕೆಂಗಲ್ ಹನುಮಂತಯ್ಯ 1985– ಪುಟ–34
3. ಸಿ.ಪಿ.ನಾಗರಾಜು, ಮೌನ ಸಾಧಕ ಡಾ.ಸಿ.ಬಂದೀಗೌಡ ಪು–23
4. ಸಾಧ್ವಿ ಪತ್ರಿಕೆ ದಿನಾಂಕ : 11–08–1947
5. ಸಿ.ಪಿ.ನಾಗರಾಜು–ಪೂರ್ವೋಕ್ತ ಪು–44
6. Proceedings of the Mysore representative Assembly debates -1945-1950.
7. Mysore legislative council debates.1964-1970.

ಅಧ್ಯಾಯ–ಎರಡು

ಸಿ.ಬಂದೀಗೌಡರ ವ್ಯಕ್ತಿ ಜೀವನ :

ಭಾರತ ದೇಶವು 1947 ಆಗಸ್ಟ್ 15 ರಂದು ಸ್ವಾತಂತ್ರ್ಯವಾಯಿತು. ಈ ಸ್ವಾತಂತ್ರ್ಯಕ್ಕಾಗಿ ಎಷ್ಟೋ ಜನ ಮಹನೀಯರು ತಮ್ಮ ಪ್ರಾಣದ ಹಂಗನ್ನು ತೊರೆದು, ತಮ್ಮ ಮನೆ ಮಠ ಹೆಂಡತಿ–ಮಕ್ಕಳು ಬಂಧು ಭಾಗನಿಯರನ್ನು ಮರೆತು ದೇಶಕ್ಕಾಗಿ ಸೇವೆಯನ್ನು ಸಲ್ಲಿಸಿದರು. ಇಂತಹ ಸ್ವಾಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ ಜನರಲ್ಲಿ ಯಾವುದೇ ಸ್ವಾರ್ಥ, ಸ್ವ–ಹಿತಾಸಕ್ತಿ ಇರಲಿಲ್ಲ. ಕೇವಲ ಒಂದೇ ಗುರಿ ದೇಶ ಸ್ವತಂತ್ರವಾಗಬೇಕು. ಪರಕೀಯರ ಹಿಡಿತದಿಂದ, ಸಂಕೋಲೆಗಳಿಂದ ನಮ್ಮ ದೇಶ ಮುಕ್ತವಾಗಬೇಕು ಎಂಬುದಾಗಿತ್ತು. ನನಗೂ ನಾಯಕತ್ವ ಬೇಕು, ನಾನು ನಾಯಕ ಎನ್ನಿಸಿಕೊಳ್ಳಬೇಕು, ನನಗೂ ಪ್ರಚಾರಬೇಕು ಎನ್ನುವ ಯಾವುದೇ ಮನೋಭಾವ ಅವರಲ್ಲಿ ಇರದೇ ಕೆಲವು ಹಿರಿಯ ನಾಯಕರುಗಳ ಮಾರ್ಗದರ್ಶನದಲ್ಲಿ ದುಡಿದವರು ಎಷ್ಟೋ ಜನ. ಇಂತಹ ನಿಸ್ವಾರ್ಥ ಮನೋಭಾವನೆಯ ಕೆಚ್ಚದೆಯ ಯುವಕರಿಂದ, ಹಿರಿಯರಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿತು.

ಸ್ವಾತಂತ್ರ್ಯ ನಂತರ, ಗಾಂಧೀಜಿ ಯುಗದ ನಂತರ, ಇಂತಹ ವ್ಯಕ್ತಿಗಳು ಸಂಪೂರ್ಣವಾಗಿ ಮರೆಯಾಗತೊಡಗಿದರು. ಗಾಂಧೀ ತತ್ವಗಳಿಗೆ ಅನುಗುಣವಾಗಿ ಬದುಕು ಸಾಗಿಸುವವರು ದೇಶದಾದ್ಯಂತ ಕಡಿಮೆಯಾಗ ತೊಡಗಿದರು. ಹಾಗೂ ವಿರಳವಾಗ ತೊಡಗಿದರು. ಇಷ್ಟೆಲ್ಲಾ ಪರಿಸ್ಥಿತಿ ಒತ್ತಡಗಳ ಮಧ್ಯೆ ಕಲುಷಿತ ವಾತಾವರಣದ ಮಧ್ಯೆಯೂ ಕೆಸರಲ್ಲಿ ಅರಳಿದ ಕಮಲದಂತೆ, ನಮ್ಮ ಕಣ್ಣೆದುರಿಗೆ ಇಂದು ಕಂಡು ಬರುವ ಮಹಾನ್ ವ್ಯಕ್ತಿಯೆಂದರೆ ಸಿ.ಬಂದೀಗೌಡರು. ಇಂತಹ ಕಾಲದಲ್ಲೂ ಇಂತಹ ಮಹಾನ್ ವ್ಯಕ್ತಿಗಳು ಇದ್ದಾರೆ ಎಂದರೆ ಆಶ್ಚರ್ಯವಾಗುವುದು ಸಹಜ.

ಜನನ ಮತ್ತು ಬಾಲ್ಯ :–

ಮಂಡ್ಯ ಜಿಲ್ಲೆಯು ಹಲವಾರು ಮಹಾನ್ ವ್ಯಕ್ತಿಗಳನ್ನು ದೇಶಕ್ಕಾಗಿ ನೀಡಿದೆ. ಸಕ್ಕರೆ ನಾಡಾದ ಇದು ತನ್ನ ಮಡಿಲಲ್ಲಿ ಸಕ್ಕರೆಯಂತಹ ಹಲವಾರು ಅಕ್ಕರೆಯ ವ್ಯಕ್ತಿಗಳನ್ನು ನೀಡಿದೆ. ಇಂತಹ ನಾಡಿನಲ್ಲಿ ಅಪ್ರತಿಮ ದೇಶಭಕ್ತ ಟಿಪ್ಪುಸುಲ್ತಾನನ ಕರ್ಮಭೂಮಿ. ಶ್ರೀರಂಗಪಟ್ಟಣ ಶ್ರೀರಂಗಪಟ್ಟಣದ ಕೆ.ಶೆಟ್ಟಹಳ್ಳಿ ಹೋಬಳಿಗೆ ಸೇರಿದ ಶ್ರೀನಿವಾಸ ಅಗ್ರಹಾರ ಎಂಬ ಹಳ್ಳಿಯಲ್ಲಿ ದಿನಾಂಕ 02 ಮಾರ್ಚ್ 1917 ರಂದು ಸಿ.ಬಂದೀಗೌಡರು ಜನಿಸಿದರು.

ಕಾವೇರಿ ನದಿಯ ಉಪನದಿ ಲೋಕಪಾವನಿ ನದಿಯು ಕಾವೇರಿಯನ್ನು ಸೇರುವ ಸಂಗಮ ಸ್ಥಳದ ಹತ್ತಿರದಲ್ಲಿ ಸುಂದರ ರಮಣೀಯ ಸ್ಥಳ ಕರಿಘಟ್ಟ ಪಕ್ಕದಲ್ಲಿ ಶ್ರೀನಿವಾಸ ಅಗ್ರಹಾರವಿದೆ. ಇಂತಹ ಊರಿನಲ್ಲಿ ಬಂದೀಗೌಡರು ಶ್ರೀಮಂತ ಜಮೀನ್ದಾರರಾದ ಶ್ರೀಯುತ ಚಿಕ್ಕಣ್ಣ ಮತ್ತು ದೇವಮ್ಮ ದಂಪತಿಗಳ ಮಗನಾಗಿ ಜನಿಸಿದರು. ಬಂದೀಗೌಡ

ಎಂಬ ಹೆಸರು ಹೇಗೆ ಬಂದಿತು ಎಂಬುದನ್ನು ನೋಡಲಾಗಿ ಶ್ರೀಯುತ ಚಿಕ್ಕಣ್ಣನವರ ಮನೆದೇವರು ಶ್ರೀರಂಗಪಟ್ಟಣ ಬಳಿ ಇರುವ ಹುರಳೀಕ್ಯಾತನಹಳ್ಳಿಯ ಶ್ರೀ ಬಂಧುಕಾರಲಿಂಗೇಶ್ವರ ಈ ಮನೆದೇವರ ಹೆಸರನ್ನೇ ತಮ್ಮ ಸುಪುತ್ರನಿಗೆ ಇಟ್ಟರು. ಇದೇ ಬಂದೀಗೌಡರ ನಾಮಕರಣಕ್ಕೆ ಕಾರಣವಾಯಿತು. ಇವರಿಗೆ ಒಬ್ಬ ಸಹೋದರನಿದ್ದು, ಅವರ ಹೆಸರು ಜವರೇಗೌಡ.[1]

ವಿದ್ಯಾಭ್ಯಾಸ :–

ಶ್ರೀಮಂತ ಜಮೀನ್ದಾರರಾಗಿದ್ದ ಚಿಕ್ಕಣ್ಣನವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರಲ್ಲಿ ತುಂಬಾ ಆಸಕ್ತಿ ವಹಿಸಿದರು. ಕಾರಣ ಇಷ್ಟೆ. ಚಿಕ್ಕಣ್ಣನವರು ಪ್ರಾಥಮಿಕ ಶಾಲೆಯತನಕ ಓದಿದ್ದರು. ತಾಯಿ ಕಲ್ಯಾಣಮ್ಮನವರಂತೂ ಶಾಲೆಗೆ ಹೋಗಲು ಅವಕಾಶವೂ ಸಿಗದೇ ಅಕ್ಷರಾಭ್ಯಾಸ ಮಾಡಲು ಆಗಲೇ ಇಲ್ಲ, ಹೀಗಾಗಿ ತಮ್ಮ ಮಕ್ಕಳು ಚೆನ್ನಾಗಿ ಓದಲಿ, ವಿದ್ಯಾಭ್ಯಾಸ ಪಡೆದು ಜವಾಬ್ದಾರಿಯುತ ವ್ಯಕ್ತಿಗಳಾಗಿ ಬೆಳೆಯಲಿ ಎಂಬ ಮಹಾನ್ ಆಸೆಯನ್ನು ಹೊಂದಿದ್ದರು. ಹೀಗಾಗಿ ಶ್ರೀಯುತ ಚಿಕ್ಕಣ್ಣನವರು ಶ್ರೀನಿವಾಸ ಅಗ್ರಹಾರದ ಮಾರಿಗುಡಿಯಲ್ಲಿ ನಡೆಸಲಾಗುತ್ತಿದ್ದ ಕೂಲಿ ಮಠಕ್ಕೆ ಬಂದೀಗೌಡರನ್ನು ಅಕ್ಷರಾಭ್ಯಾಸಕ್ಕೆ ಸೇರಿಸಿದರು. ಬಾಲ್ಯದ ಗುರುಗಳು ಭಾಷ್ಯಂ ಅಯ್ಯಂಗಾರ್ ರವರು ಇವರ ಕೈಯಲ್ಲಿ ತಮ್ಮ ಪ್ರಾಥಮಿಕ ಹಂತದ ಅಕ್ಷರಾಭ್ಯಾಸವನ್ನು ಮುಗಿಸಿದರು. ಇದಾದ ನಂತರ ತಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ತಮ್ಮ ಗ್ರಾಮದಿಂದ 2 ಮೈಲಿ ದೂರದಲ್ಲಿರುವ ಶ್ರೀರಂಗಪಟ್ಟಣದ ಸರ್ಕಾರಿ ಮಾಧ್ಯಮಿಕ ಶಾಲೆಗೆ 1926 ರಲ್ಲಿ ಸೇರಿದರು. ಪ್ರತಿದಿನವೂ ಶಾಲೆಗೆ ನಡೆಯುತ್ತಾ ಹೋಗಿ ಬಂದು ತಮ್ಮ ವಿದ್ಯಾರ್ಜನೆ ಮಾಡತೊಡಗಿದರು.

ಮಾಧ್ಯಮಿಕ ಶಾಲೆಯಲ್ಲಿ ಇರುವಾಗಲೇ ನಡೆದ ಎರಡು ಘಟನೆಗಳು ಬಂದೀಗೌಡರ ಜೀವನದ ಮೇಲೆ ಅಚ್ಚಳಿಯದ ಛಾಪನ್ನು ಮಾಡಿಸಿದವು. ಹಾಗೂ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದವು. ಆ ಎರಡು ಘಟನೆಗಳಲ್ಲಿ ಮೊದಲನೆಯದ್ದು 1927 ರಲ್ಲಿ ನಡೆಯಿತು. ಆಗ ಮಹಾತ್ಮ ಗಾಂಧೀಜಿಯವರು ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದರು. ಆ ಸಮಯದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿ ಏರುಗತಿಯಲ್ಲಿ ಸಾಗುತ್ತಿದ್ದ ಕಾಲ. ಗಾಂಧೀಜಿಯವರನ್ನು ನೋಡುವುದಕ್ಕಾಗಿ ಶ್ರೀ ಚಿಕ್ಕಣ್ಣನವರು 10 ವರ್ಷದ ಬಂದೀಗೌಡರನ್ನು ಕರೆದುಕೊಂಡು ಹೋಗಿ ಗಾಂಧೀಜಿ ಯವರ ದರ್ಶನ ಮಾಡಿಸಿದರು. ಅಂದಿನ ಸಭೆಯಲ್ಲಿ ಗಾಂಧೀಜಿಯವರು ಸುಮಾರು ಇಪ್ಪತ್ತು ನಿಮಿಷಗಳ .ಕಾಲ ಭಾಷಣ ಮಾಡಿದರು. ಗಾಂಧೀಜಿಯವರು ತುಂಡು ಬಟ್ಟೆ, ಕೈಯಲ್ಲಿಯ ಒಂದು ಕೋಲು ಅಲ್ಲಿ ಅವರನ್ನು ನೋಡುವುದಕ್ಕಾಗಿ ಸೇರಿದ ಜನ ಸಮೂಹ ಇವೆಲ್ಲವೂ ಕಂಡ ಬಾಲಕ ಬಂದೀಗೌಡರಿಗೆ ಏನೂ ಅರಿವಾಗಲಿಲ್ಲ. ಆಗ ತಂದೆಯವರು "ಮಗು ಗಾಂಧೀಜಿಯವರನ್ನು ಕಂಡರೆ ದೇಶ ದಲ್ಲಿರುವ ಜನತೆಗೆ ಬಹಳ

ಗೌರವ ಇದೆ. ಅವರು ದೇಶಕ್ಕೆ ಅತಿ ದೊಡ್ಡೋರು. ಅವರು ದೇಶಕ್ಕೆ ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ.' ಎಂದು ಅಷ್ಟೇ ಸೂಚ್ಯವಾಗಿ ವಿವರಿಸಿದರು.

ಇದಾದ ಒಂದೇ ತಿಂಗಳ ಅವಧಿಯಲ್ಲಿ ಅಂದಿನ ಭಾರತದ ವೈಸರಾಯ್ ಲಾರ್ಡ್ ಇರ್ವಿನ್‌ರು ಶ್ರೀರಂಗಪಟ್ಟಣಕ್ಕೆ ಆಗಮಿಸುವವರಿದ್ದರು. ಅವರನ್ನು ಸ್ವಾಗತಿಸಿಕೊಳ್ಳುವುದಕ್ಕಾಗಿ ಸಂಪೂರ್ಣ ಶ್ರೀರಂಗಪಟ್ಟಣವೇ ಅಲಂಕಾರಗೊಂಡಿತ್ತು. ಬಾಲಕ ಬಂದೀಗೌಡರ ಗುರುಗಳು ಒಳ್ಳೆಯ ಬಟ್ಟೆ ಧರಿಸಿಕೊಂಡು ಬರಬೇಕೆಂದು ತಿಳಿಸಿದರು, ಈ ವಿಷಯವನ್ನೇ ತಂದೆಗೆ ತಿಳಿಸುತ್ತಾ 'ಅಪ್ಪಾ ನಾಳೆ ನಮ್ಮ ದೇಶವನ್ನು ಆಳುತ್ತಿರುವ ಇರ್ವಿನ್ ಸಾಹೇಬರು ಶ್ರೀರಂಗಪಟ್ಟಣಕ್ಕೆ ಬರುತ್ತಾರಂತೆ ನಾವೆಲ್ಲಾ ಉತ್ತಮ ಬಟ್ಟೆ ಹಾಕಿಕೊಂಡು ಬರಲಿಕ್ಕೆ ಗುರುಗಳು ಹೇಳಿದ್ದಾರೆ. ನೀನು ಸಹ ಬಾರಪ್ಪ ಅವರನ್ನು ನೋಡುವಿಯಂತೆ' ಎಂದು ಹೇಳಿದಾಗ ತಂದೆಯವರಾದ ಶ್ರೀ ಚಿಕ್ಕಣ್ಣನವರು ಪ್ರತಿಕ್ರಿಯಿಸುತ್ತಾ ನೀನೊಬ್ಬನೇ ನೋಡು ನಾನೇನೂ ಅವರನ್ನು ನೋಡಬೇಕಾಗಿಲ್ಲ ಎಂದು ತಿಳಿಸಿದರು.[2]

ಮರುದಿನ ಇರ್ವಿನ್‌ರನ್ನು ರಾಜಉಡುಗೆಯಲ್ಲಿ ನೋಡಿದ ಅವರಿಗೆ ಮನಸ್ಸು ಪ್ರಶ್ನಿಸತೊಡಗಿತು. ಸರಳ ಉಡುಪಿನಲ್ಲಿ ಬಂದಿರುವ ಗಾಂಧೀಜಿಯವರನ್ನು ಭಕ್ತಿ-ಗೌರವಗಳಿಂದ ಕಂಡ ತಂದೆಯವರು ಇಂತಹ ಅದ್ದೂರಿ ವೇಷ-ಭೂಷಣ ಧರಿಸಿದ ಲಾರ್ಡ್ ಇರ್ವಿನ್‌ರನ್ನು ನೋಡಲಿಕ್ಕೆ ಏಕೆ ಬರಲಿಲ್ಲ ಎಂಬುದು ದೊಡ್ಡ ಪ್ರಶ್ನೆಯಾಗಿ ಅವರ ಮನಸ್ಸಿನಲ್ಲಿ ಉಳಿಯಿತು. ಈ ಘಟನೆ ಎಲ್ಲೋ ಒಂದು ಕಡೆ ಬಂದೀಗೌಡರಿಗೆ ಪ್ರೇರಣೆಯಾಯಿತು ಎಂಬುದರಲ್ಲಿ ಸಂದೇಹವಿಲ್ಲ.

ಮಾಧ್ಯಮಿಕ ಶಾಲಾ ಶಿಕ್ಷಣ ಪಡೆದ ನಂತರ ಪ್ರೌಢಶಿಕ್ಷಣ ಪಡೆಯುವುದಕ್ಕಾಗಿ ಮೈಸೂರಿನ ವೆಸ್ಲಿಯನ್ ಪ್ರೌಢಶಾಲೆ ಸೇರಿದರು. ಎಲ್ಲಾ ಹುಡುಗರಂತೆ ನಗರವು ಇವರನ್ನು ಆಕರ್ಷಿಸಿತು. ಜೊತೆಗೆ ಸಿನಿಮಾದ ಮೋಡಿಗೂ ಒಳಗಾದರು. ಹೀಗಾಗಿ ಮೇಲಿಂದ ಮೇಲೆ ಸಿನಿಮಾ ನೋಡಿದ್ದೇ ನೋಡಿದ್ದು, ಇದರ ಪರಿಣಾಮ ಎಂಟನೇ ತರಗತಿಯಲ್ಲಿ ಅನುತ್ತೀರ್ಣ. ಆಗ ವಿಚಾರಕ್ಕೆ ಬಿದ್ದರು ಬಾಲಕ ಬಂದೀಗೌಡರು. ನನ್ನನ್ನು ಓದಿಸಿ ಉತ್ತಮ ನಾಗರೀಕನನ್ನಾಗಿ ಮಾಡಲು ಹಾಗೂ ಉತ್ತಮ ವಿದ್ಯಾಭ್ಯಾಸಕ್ಕಾಗಿ ನನ್ನ ತಂದೆಯವರು ಅಗಮ್ಯ ಆಸೆಯಿಂದ ಇಲ್ಲಿ ಕಳಿಸಿದರೆ ನಾನು ಚಲನಚಿತ್ರ (ಸಿನಿಮಾ)ದ ಆಕರ್ಷಣೆಗೆ ಬಿದ್ದು ಅವರ ಆಸೆಗೆ ತಣ್ಣೀರು ಎರಚುತ್ತಿದ್ದೇನೆ. ಈ ಕೆಟ್ಟ ಚಾಳಿಗೆ ಬಿದ್ದು ನನ್ನ ವಿದ್ಯಾಭ್ಯಾಸ ಹಾಳು ಮಾಡಿಕೊಳ್ಳುತ್ತಿದ್ದೇನೆ. ಎಂದು ತಿಳಿದು ಇನ್ನು ಮುಂದೆ ಚೆನ್ನಾಗಿ ಓದಬೇಕು ಎಂದು ನಿರ್ಧರಿಸಿ ತಪ್ಪದೇ ತರಗತಿಗಳಿಗೆ ಹಾಜರಾಗಲಿಕ್ಕೆ ಪ್ರಾರಂಭ ಮಾಡಿ, ಒಳ್ಳೆ ರೀತಿಯಿಂದ ಅಭ್ಯಾಸ ಮಾಡತೊಡಗಿದರು. ಪರಿಣಾಮ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರೊಂದಿಗೆ ಶಾಲೆಗೆ ಅತಿ ಹೆಚ್ಚು

ಅಂಕಗಳಿಸಿದ ವಿದ್ಯಾರ್ಥಿಯಾಗಿ ಹೊರಹೊಮ್ಮಿದರು. ಜೊತೆಗೆ ಮುಖ್ಯೋಪಾಧ್ಯಾಯರ ಮತ್ತು ಉಪಾಧ್ಯಾಯರ ಮೆಚ್ಚುಗೆಗೆ ಪಾತ್ರರಾದರು.[3]

ಇದಾದ ನಂತರ ಇಂಟರ್ ಮೀಡಿಯಟ್‌ಗಾಗಿ ಬಂದೀಗೌಡರು ಮೈಸೂರಿನ ಯುವರಾಜ ಕಾಲೇಜು ಸೇರಿದರು. ಇಲ್ಲಿ ಇವರಿಗೆ ಗುರುಗಳಾಗಿ ಬಂದವರು ಜ್ಞಾನಪೀಠ ಪ್ರಶಸ್ತಿ ವಿಜೇತ ಕುವೆಂಪುರವರು. ಕುವೆಂಪುರವರು ತರಗತಿಯಲ್ಲಿ ಹೇಳುತ್ತಿದ್ದ ಪಾಠಗಳು ಇವರ ಆದರ್ಶಗಳನ್ನು ಗಟ್ಟಿ ಮಾಡಿದವು. ಅಂದು ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರಿಗೆ ಮನೆ ಪಾಠಹೇಳಲು ಒಪ್ಪದ 'ಬೇಕಾದರೆ ಕಾಲೇಜಿಗೆ ಸೇರಿ, ಕ್ಲಾಸಿಗೆ ಬಂದು ಓದಿರಿ ಎಂದು ಉತ್ತರಿಸಿದವರು ಇವರಾಗಿದ್ದರು. ಗುರುವಿನಂತೆ ಶಿಷ್ಯ ಎಂಬಂತೆ ಕುವೆಂಪು ಅವರ ಸ್ವಾಭಿಮಾನ, ಆತ್ಮಗೌರವ ಗುರುವಿನ ಮಹತ್ವ, ಎಲ್ಲರೂ ಸಮಾನರು ಎಂಬ ತತ್ವ ಇವರ ಮನಸ್ಸಿಗೆ ಹೆಚ್ಚು ಹಿಡಿಸಿತು. ಮುಂದೆ ಇದೇ ಯಾರಿಗೂ ತಲೇಬಾಗದೇ ಸ್ವಾಭಿಮಾನಿಯಾಗಿ ಬದುಕಬೇಕು ಎಂಬ ಛಲವು ಮನದಲ್ಲಿ ಮೂಡಿತು.[4]

ವೈದ್ಯಕೀಯ ವಿದ್ಯಾಭ್ಯಾಸ ;

ಇದಾದ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿಯನ್ನು ಮುಗಿಸಿದರು. ನಂತರ ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಅಧ್ಯಯನ ಪ್ರಾರಂಭಿಸಿದರು. ಆಗ 1942 ರ ವೇಳೆ ಬ್ರಿಟೀಷರೇ ಭಾತತ ಬಿಟ್ಟು ತೊಲಗಿ ಚಳುವಳಿ ದೇಶದಾದ್ಯಂತ ಹಬ್ಬಿತ್ತು. ಈ ಚಳುವಳಿಯಲ್ಲಿ ಗಾಂಧೀಜಿಯವರ ಕರೆಗೆ ಓಗೊಟ್ಟು ಲಕ್ಷಾಂತರ ಮಂದಿ ಭಾರತೀಯರು ತಮ್ಮ ಮನೆ ಮಠ ಬಿಟ್ಟು, ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ತೊರೆದು ಚಳುವಳಿಗೆ ಧುಮುಕಿದರು. ಈ ಚಳುವಳಿಯ ಕಾವು ವೈದ್ಯಕೀಯ ವಿದ್ಯಾರ್ಥಿಗಳನ್ನು ಬಿಡಲಿಲ್ಲ, ಚಳುವಳಿಯಲ್ಲಿ ಭಾಗವಹಿಸಬೇಕೆಂದು ತರಗತಿಗಳನ್ನು ತ್ಯಜಿಸತೊಡಗಿದರು. ಆಗ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರು ಆ ವಿದ್ಯಾರ್ಥಿಗಳನ್ನು ತಡೆದು ಇಂತಹ ಚಳುವಳಿಯಲ್ಲಿ ಭಾಗವಹಿಸಬೇಡಿ ಇದರಿಂದ ನಿಮ್ಮ ಭವಿಷ್ಯ ಹಾಳಾಗುತ್ತದೆ. ನಿಮ್ಮ ತಂದೆ-ತಾಯಿಯವರಿಗೆ ನಿರಾಶೆ ಮಾಡಬೇಡಿ. ಜೊತೆಗೆ ಈ ಚಳುವಳಿಯಲ್ಲಿ ಭಾಗಹಿಸುವವರಿಂದ ನಿಮಗೆ ಏನೂ ಒಳ್ಳೆಯದಾಗುವುದಿಲ್ಲ. ಗಾಂಧೀಜಿಯವರು ಬ್ರಿಟೀಷರಿಗೆ ಕೊಟ್ಟ ಮಾತನ್ನು ಪಾಲಿಸದೇ ಬ್ರಿಟೀಷರ ಬೆನ್ನಿಗೆ ಚೂರಿ ಹಾಕಿದ್ದಾರೆ ಎಂದಾಗ ಅಂದಿನ ವೈದ್ಯಕೀಯ ವಿದ್ಯಾರ್ಥಿ ಬಂದೀಗೌಡರಿಗೆ ಸಿಟ್ಟು ಬಂದು 'Sir Please don't comment on Gandhiji. He is our leader' ಎಂದು ಆರ್ಭಟಿಸಿದರು.[5] ಅವರ ಮಾತಿಗೆ ಹೆದರಿದ ಪ್ರಾಂಶುಪಾಲರು 'ಆಯ್ತು ನಿಮಗೆ ತಿಳಿದ ಹಾಗೆ ನಿಮ್ಮ ಇಷ್ಟದಂತೆ ಮಾಡಿಕೊಳ್ಳಿ' ಎಂದರು.

ವಿದ್ಯಾರ್ಥಿಗಳೆಲ್ಲರೂ ಚಳುವಳಿಗೆ ಧುಮುಕಿದರು. ಸ್ವದೇಶಿ ಚಳುವಳಿ ನಡೆದಾಗ ಬಂದೀಗೌಡರು ತಮ್ಮ ಬಣ್ಣದ ಟೋಪಿಯನ್ನು ಬೆಂಕಿಗೆ ಹಾಕಿ, ಖಾದಿ ಅಂಗಿ ಫೈಜಾಮ

ಹಾಕಲು ನಿರ್ಣಯಿಸಿ ಚಳುವಳಿಯಲ್ಲಿ ಸಂಪೂರ್ಣವಾಗಿ ಧುಮುಕಿದರು. ಆದರೆ ಇವರು ಚಳುವಳಿಯಲ್ಲಿ ಧುಮುಕಿದ್ದು, ತಂದೆಯವರಾದ ಚಿಕ್ಕಣ್ಣನವರಿಗೆ ಸರಿಕಾಣಿಸಲಿಲ್ಲ. ಅವರು ಬಂದೀಗೌಡರನ್ನು ಕರೆಸಿ ಬುದ್ದಿ ಮಾತು ಹೇಳಿದರು. 'ಈಗ ನೀನು ಓದದಿದ್ದರೆ ಮುಂದೆ ಓದುವುದಕ್ಕೆ ಸಾಧ್ಯವಿಲ್ಲ, ಖಾದಿ ಧರಿಸುವುದು ಸರಿ. ಚಳುವಳಿಗೆ ಮೆಚ್ಚುಗೆ ಇರಲಿ, ಓದುವುದು ಮುಖ್ಯ, ಅಭ್ಯಾಸ ಬಿಟ್ಟು ಚಳುವಳಿ ಮಾಡುವುದು ಸರಿ ಅಲ್ಲ" ಎಂದು ತಿಳಿಸಿದರು.[6] ತಂದೆ ಮಾತಿಗೆ ಬೆಲೆ ಕೊಟ್ಟು ತಮ್ಮ ಅಭ್ಯಾಸ ಮುಗಿಸಿ ಎಂ.ಬಿ.ಬಿ.ಎಸ್. ಪದವಿ ಪಡೆದರು.

ಇದರೊಂದಿಗೆ ಕೆಲವೊಂದು ಕೃತಿಗಳೂ ಬಂದೀಗೌಡರ ಮನಸ್ಸಿನ ಮೇಲೆ ಅಂದು ಹೆಚ್ಚು ಪ್ರಭಾವ ಬೀದಿರವು. ಅದರಲ್ಲಿ ಮುಖ್ಯವಾದವುಗಳು.[7]

1. ಗಾಂಧೀಜಿಯವರ ಆತ್ಮಕಥೆ, ನನ್ನ ಸತ್ಯಾನ್ವೇಷಣೆ.
2. ಗುರುಗಳಾಗಿದ್ದ ಕುವೆಂಪುರವರ ' ಸ್ವಾಮಿ ವಿವೇಕಾನಂದರವರ ಜೀವನ ಚರಿತ್ರೆ'
3. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರು ತಾವು ನಡೆಸಿದ ಸತ್ಯಾಗ್ರಹ ಸಾಧನೆಗಳನ್ನು ಕುರಿತು ಬರೆದ 'A Great son of India', ಎಂಬ ಆಂಗ್ಲ ಕೃತಿ.
4. ಕುವೆಂಪುರವರ ಬರೆದ ಸುಗ್ಗಿ ಬರುತ್ತಿದೆ ಎಂಬ ಕವನ.

ಈ ಎಲ್ಲಾ ಚಟುವಟಿಕೆಗಳು, ಪುಸ್ತಕಗಳು ಬಂದೀಗೌಡರನ್ನು ಪರಿಪೂರ್ಣ ವ್ಯಕ್ತಿಗಳನ್ನಾಗಿ ರೂಡಿಸಿದವು.

ವೃತ್ತಿ ಜೀವನ ಹಾಗೂ ಸೇವಾ ಕಾರ್ಯಾರಂಭ :-

ಮುಂದೆ ವೈದ್ಯಕೀಯ ಪದವಿ ಪಡೆದ ನಂತರ ಸರ್ಕಾರಿ ಕೆಲಸ ಬೇಡ ಎಂದು ನಿರ್ಧರಿಸಿ ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ತಮ್ಮ ವೈದ್ಯ ವೃತ್ತಿ ಪ್ರಾರಂಭಿಸಿದರು. ಆಗಿನ ಕಾಲದಲ್ಲಿ ಜನರನ್ನು ಹೆಚ್ಚು ಕಾಡಿಸುತ್ತಿದ್ದ ಪ್ಲೇಗು, ಸಿಡುಬು, ಮಲೇರಿಯಾಗಳಿಗೆ ಸೂಕ್ತವಾದ ಚಿಕಿತ್ಸೆ ನೀಡ ತೊಡಗಿದರು. ಅಂದಿನ ಹಳ್ಳಿಗಳಲ್ಲಿ ಚಿಕಿತ್ಸೆಗಾಗಿ ವೃದ್ದರಿಗಾಗಿ ಹಂಬಲಿಸುತ್ತಿರುವ ವೇಳೆಯಲ್ಲಿ ನಗರಗಳಲ್ಲಿ ದುಡಿಯದೇ ಹಳ್ಳಿಯತ್ತ ಮುಖ ಮಾಡಿದವರು ಶ್ರೀ ಬಂದೀಗೌಡರು. ಇದೇ ವೇಳೆಗೆ ಅವರ ಏಕೈಕ ತಮ್ಮ ಜವರೇಗೌಡರು ಅಕಾಲ ಮರಣಕ್ಕೆ ತುತ್ತಾದರು. ಆವಾಗ ಇವರು ತಮ್ಮ ಸ್ವಗ್ರಾಮಕ್ಕೆ ಬಂದು ತದನಂತರ 1944 ರಲ್ಲಿ ತಮ್ಮ ತಾಯಿಯವರ ಸವಿನೆನಪಿನಲ್ಲಿ ಅವರ ಸ್ಮರಣೆಗೋಸ್ಕರ ಅವರ ಹೆಸರಲ್ಲಿ 'ಕಲ್ಯಾಣ ಚಿಕಿತ್ಸಾಲಯ' ವನ್ನು ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿದರು.

ಚಿಕಿತ್ಸಾಲಯಕ್ಕೆ ಬರುತ್ತಿದ್ದ ರೋಗಿಗಳನ್ನು ಮಾತೃ ಹೃದಯದಿಂದ ಉಪಚರಿಸ ತೊಡಗಿದರು. ರೋಗಿಗಳಿಗೆ ನಾನಾ ಬಗೆಯ ರಾಸಾಯನಿಕ ವಸ್ತುಗಳಿಂದ ತಯಾರಿಸಿದ ಔಷಧಗಳನ್ನು ತಯಾರಿಸಿ ನೀಡುತ್ತಿದ್ದರು. ಕಾರಣ ಅಂದು ಈಗಿನಂತೆ ಔಷಧಿ ಮಾರುವ

ಅಂಗಡಿಗಳು ಇರಲಿಲ್ಲ. ಇದಕ್ಕೆಲ್ಲಾ ಗೌಡರು ತೆಗೆದುಕೊಳ್ಳುತ್ತಿದ್ದ ಫೀ ಕೇವಲ ಒಂದಾಣಿ ಮಾತ್ರ. ಅಂದಿನ ಕಾಲದಲ್ಲಿ ಎಲ್ಲಾ ಬಡವರ ಕೈಗೆ ಎಟಕುತ್ತಿದ್ದ ಬೆಲೆ ಅದಾಗಿತ್ತು. ಹೀಗಾಗಿ ಅವರ ಚಿಕಿತ್ಸಾಲಯದ ಎದುರು ಜನ ಜಾತ್ರೆಯೇ ಸೇರುತ್ತಿತ್ತು. ಬಡವರ ಗುಂಪೇ ಅಲ್ಲಿ ಕಾಣ ಸಿಗುತ್ತಿತ್ತು. ಬಡವರಾಗಲೀ, ಶ್ರೀಮಂತರಾಗಲೀ ಎಲ್ಲರೂ ತಮ್ಮ ಸರದಿಯಲ್ಲಿ ನಿಂತು ಡಾ॥ ಬಂದೀಗೌಡರಿಂದ ಚಿಕಿತ್ಸೆಯನ್ನು ಪಡೆಯಬೇಕಾಗಿತ್ತು. ಯಾರೇ ಶ್ರೀಮಂತರು ಬಂದರೂ ತಮ್ಮ ಸರದಿ ಬರುವವರೆಗೆ ಕಾಯಬೇಕಾಗಿತ್ತು. ಕೆಲವೊಮ್ಮೆ ಆಸ್ಪತ್ರೆಗೆ ಬರಲಾರದ ,ಹೆಚ್ಚು ಕಾಯಿಲೆಯಿಂದ ನರಳುತ್ತಿದ್ದ ರೋಗಿಗಳನ್ನು ಉಪಚರಿಸಲು ಅಂದು ಸೈಕಲ್ ಮೇಲೆ ಹಳ್ಳಿಗಳಿಗೆ ಹೋಗಿ ಉಪಚಾರ ಮಾಡಿ ಬರುತ್ತಿದ್ದರು. ಯಾವುದೇ ರೀತಿಯ ಉಪಚಾರ ಮಾಡಿದರೂ ಇವರು ಸ್ವೀಕರಿಸುತ್ತಿದ್ದ ಶುಲ್ಕ ಕೇವಲ 'ಒಂದಾಣಿ' ಮಾತ್ರ ಹೀಗಾಗಿ ಮುಂದೆ ಇವರು 'ಒಂದಾಣೆ ಡಾಕ್ಟರ್' ಎಂದೇ ಜನ ಪ್ರಸಿದ್ಧಿಯಾದರು.

ವೈವಾಹಿಕ ಜೀವನ :–

ಚಿಕಿತ್ಸಾಲಯ ಪ್ರಾರಂಭಿಸಿದ ಎರಡು ವರ್ಷಗಳಾದ ಮೇಲೆ ಮನೆಯಲ್ಲಿ ಇವರಿಗೆ ಮದುವೆ ಮಾಡಬೇಕೆಂಬ ವಿಚಾರ ತಂದೆ-ತಾಯಿಗಳ ಮನಸ್ಸಿನಲ್ಲಿ ಪ್ರಾರಂಭವಾಯಿತು. ಮೊದಲೇ ಜನಪ್ರಿಯ ವೈದ್ಯರು ಪ್ರಸಿದ್ಧ ಒಂದಾಣೆ ಡಾಕ್ಟರು ಹೀಗಾಗಿ ಬಹಳಷ್ಟು ಸಿರಿವಂತ ಕುಟುಂಬಗಳು ನಾವೇ ನಮ್ಮ ಮಗಳನ್ನು ಕೊಡುತ್ತೇವೆ ಎಂದು ಮುಂದೆ ಮುಂದೆ ಬಂದರು. ಆದರೆ ಬಂದೀಗೌಡರಿಗೆ ಸಿರಿವಂತೆಗಿಂತ ವಿದ್ಯಾವಂತೆಯಾಗಿರುವ ಹುಡುಗಿಯ ಕೈಹಿಡಿಯಬೇಕು ಎಂಬ ದೊಡ್ಡ ಅಸೆ ಅವರಲ್ಲಿತ್ತು. ಇಂತಹ ಹುಡುಗಿಯ ಹುಡುಕಾಟದಲ್ಲಿದ್ದಾಗ ಕೊಡಗಿನ ವಿರಾಜಪೇಟೆಯ ಬಳಿ ಇರುವ ಪುಟ್ಟಗ್ರಾಮ ಹಾತೂರಿನಲ್ಲಿರುವ ದೊಡ್ಡ ಮನೆ ಅಣ್ಣಯ್ಯ ಮತ್ತು ಕಾಳಮ್ಮನವರ ಮಗಳು ರುಕ್ಮಿಣಿ ಇವರ ಗಮನಕ್ಕೆ ಬಂದರು. ದೊಡ್ಡಮನೆ ಅಣ್ಣಯ್ಯನವರು ಕೊಡುಗು ಪ್ರಾಂತ್ಯದ ಎಂ.ಎಲ್.ಸಿ.ಯಾಗಿದ್ದವರು. ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಕಲಿಯುವುದೇ ಅಪರೂಪವಾದ ಕಾಲದಲ್ಲಿ ರುಕ್ಮಿಣಿಯವರು ಬೋರ್ಡಿಂಗ್ ಶಾಲೆಗಳಲ್ಲಿ ಇದ್ದು ಕಲಿತವರು. ಇವರು ಬಂದೀಗೌಡರಿಗೆ ಸೂಕ್ತ ಕನ್ಯೆಯಾಗಿ ದೊರೆತಂತಾಯಿತು.[8]

ಹೆಣ್ಣು ಮತ್ತು ಗಂಡಿನ ಮನೆಗಳಿಬ್ಬರಿಗೂ ಹುಡುಗ-ಹುಡುಗಿ ಒಪ್ಪಿಗೆಯಾದರು. ನಂತರ ಹಿರಿಯರು 1946 ಮಾರ್ಚ್ 21 ರಂದು ಶ್ರೀರಂಗಪಟ್ಟಣದಲ್ಲಿರುವ ಕೃಷ್ಣಮೂರ್ತಿ ಬಂಗಲೆಯಲ್ಲಿ ಮದುವೆ ನಿಶ್ಚಯವಾಯಿತು. ಅಂದಿನ ಒಂದು ಘಟನೆ ಎಲ್ಲರಿಗೂ ಮಾದರಿಯಾಗುವಂತದ್ದು, ಮಧುಮಗಳಿಗೆ ಅಂದು ಅವರ ತಂದೆಯವರು ಬೆಲೆ ಬಾಳುವ ರೇಷ್ಮೆ ಸೀರೆಯನ್ನು ಉಡಿಸಿ ಮಧುಮಗಳನ್ನು ಕರೆದುಕೊಂಡು ಬರುತ್ತಿರುವಾಗ ಮಧುಮಗನ ಕಡೆಯಿಂದ ಒಂದು ಬೇಡಿಕೆ ಬಂತು. ನನ್ನದೊಂದು ಆಸೆ ಈಡೇರಿಸಬೇಕು ಎಂದು ತಿಳಿಸಿದರು. ಹೆಣ್ಣಿನ ಕಡೆಯ ಎಲ್ಲರೂ ಗಲಿಬಿಲಿ, ದಿಗ್ಭ್ರಮೆ. ಈ

ವೇಳೆಯಲ್ಲಿ ಮದುಮಗನ ಕಡೆಯಿಂದ ಯಾವ ಬೇಡಿಕೆ ಇರಬಹುದು ಎಂದು. ಅಣ್ಣಯ್ಯನವರಂತೂ ಗಾಬರಿಗೊಂಡಾಗ ಬಂದೀಗೌಡರ ತಂದೆಯವರಾದ ಚಿಕ್ಕಣ್ಣನವರು ನಮ್ಮ ಹುಡುಗ ನಿಮ್ಮಿಂದ ಒಡವೆ ಕೇಳ್ತಾ ಇಲ್ಲ. ಹಣ ಕೇಳ್ತಾ ಇಲ್ಲ, ನಿಮ್ಮ ಮಗಳಿಗೋಸ್ಕರ ನಂಜನಗೂಡು ಸಮೀಪ ಇರುವ ಬದನವಾಳು ಖಾದಿ ಕೇಂದ್ರದಿಂದ ಖಾದಿ ಸೀರೆ ತಂದಿದ್ದಾನೆ. ಅದನ್ನು ಉಟ್ಟುಕೊಂಡು ಹಸೆಮಣೆ ಏರಬೇಕು ಎಂಬುದು ಆತನ ಆಸೆ. ನಮ್ಮ ಹುಡುಗ ಗಾಂಧೀ ತತ್ವಗಳಿಗೆ ಮಾರು ಹೋದವ ಎಂದಾಗ" ಅಣ್ಣಯ್ಯನವರು ಸಮ್ಮತಿಸಿದರು. ಇದಕ್ಕೆ ರುಕ್ಮಿಣಿಯವರು ಸಹಮತವೂ ದೊರಯಿತು.[9] ಅಂದಿನಿಂದ ಪ್ರಾರಂಭವಾದ ಅವರ ವೈವಾಹಿಕ ಜೀವನದ ಪ್ರತಿಯೊಂದು ಹಂತದಲ್ಲಿಯೂ ಬಂದೀಗೌಡರ ಜೀವನದ ಆದರ್ಶಗಳಿಗೆ ಚ್ಯುತಿ ಬಾರದಂತೆ ನಡೆದುಕೊಂಡರು.

ರುಕ್ಮಿಣಿಯವರು ಮುಂದೆ ಗಂಡನಿಗೆ ಯಾವುದೇ ಬೇಡಿಕೆಗಳನ್ನು ಯಾವುದೇ ಹಂತದಲ್ಲಿ ಕೇಳದೆ ಸುಖ ಸಂಸಾರವನ್ನು ನಡೆಸಿದರು. ಇವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಮಗಳಿದ್ದಾಳೆ. ಮೊದಲನೆಯವರು ಬಿ.ಪ್ರೇಮಕುಮಾರ್, ಎಲ್.ಎಲ್.ಬಿ, ಮುಗಿಸಿ, ವಕೀಲಿ ವೃತ್ತಿಯಲ್ಲಿದ್ದಾರೆ. ಎರಡನೆಯವರು ಡಾ॥ ಬಿ.ಸುಜಯ ಕುಮಾರ್ ರವರು ಇವರು ಸಹ ಎಂ.ಬಿ.ಬಿ.ಎಸ್. ಓದಿದ್ದು, ಸರ್ಕಾರಿ ನೌಕರಿಗಾಗಿ ಆಸೆ ಪಡದೇ ತಂದೆಯವರೊಂದಿಗೆ ಕೈ ಜೋಡಿಸಲು ನಿರ್ಧರಿಸಿ ಕಾಕತಾಳಿಯವೋ ಎಂಬಂತೆ ಗಾಂಧೀಜಿಯವರ ಜನ್ಮ ದಿನದಂದೇ ಅಂದರೆ ಅಕ್ಟೋಬರ್–2 1979 ರಂದು ತಮ್ಮ ವೃತ್ತಿ ಜೀವನಕ್ಕೆ ಕಾಲಿಟ್ಟರು. ತಂದೆಗೆ ತಕ್ಕ ಮಗನಾಗಿ ಯಾವುದೇ ಕಮೀಷನ್‌ಗಳಿಗೆ ಆಸೆ ಪಡೆದೆ ಅವರಂತೆ ವೈದ್ಯ ಸೇವೆ ಸಲ್ಲಿಸುತ್ತಿದ್ದಾರೆ. ತಂದೆಯವರು ಅಂದು ಬಂದ ರೋಗಿಗಳ ಹೆಸರು ಅವರಿಗಿದ್ದ ಕಾಯಿಲೆ, ಅವರಿಗೆ ಕೊಟ್ಟ ಚಿಕಿತ್ಸೆ ವಿವರಗಳು ಅಚ್ಚುಕಟ್ಟಾಗಿ ಸುಂದರ ಕೈಬರಹದಿಂದ ರಿಜಿಸ್ಟರ್ ನಿರ್ವಹಿಸುತ್ತಿದ್ದದನ್ನು ಇಂದಿನವರೆಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಕೊನೆಯವರು ಜೋತ್ಸ್ನಾ ಅನಿಲ್ ಕುಮಾರ್ ಇಂಗ್ಲೀಷ್ ಪ್ರಾಧ್ಯಾಪಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಮೂವರು ಮಕ್ಕಳು ತಂದೆಯ ಆಶೋತ್ತರಗಳಿಗೆ ಯಾವುದೇ ಚ್ಯುತಿ ಬರದಂತೆ, ಸಮಾಜದಲ್ಲಿ ಗೌರವಯುತವಾಗಿ ಜೀವನ ಸಾಗಿಸುತ್ತಿದ್ದಾರೆ. ಮುಂದೆ ಬಂದೀಗೌಡರು ತಮ್ಮ ವೈದ್ಯಕೀಯ ವೃತ್ತಿಯನ್ನು 1996 ರ ವರೆಗೆ ನಿರ್ವಹಿಸಿದರು. ಬಂದೀಗೌಡರವರೊಂದಿಗೆ ಪರಿಪೂರ್ಣ ಜೀವನ ನಡೆಸಿದ ರುಕ್ಮಿಣಿಯಮ್ಮನವರಂತೂ ಅವರ ಪ್ರತಿಯೊಂದು ಕಾರ್ಯಗಳಿಗೆ ಕೈ ಜೋಡಿಸಿದರು. ಗಾಂಧೀ ಚಿತಾ ಭಸ್ಮ ವಿಸರ್ಜನೆ ನೆನಪಿನ ಪಶ್ಚಿಮ ವಾಹಿನಿ ಕಾರ್ಯಕ್ರಮಕ್ಕೆ ಒಂದು ದಿನ ಮುಂಚಿತವಾಗಿ ಬರುವ ಅತಿಥಿಗಳಿಗಾಗಿ ಹಿಂದಿನ ದಿನದಿಂದಲೇ ಊಟ, ಚಹಾ, ಪಾನೀಯಗಳ ವ್ಯವಸ್ಥೆ ಸಂಪೂರ್ಣವಾಗಿ ರುಕ್ಮಿಣಿಯಮ್ಮನವರದೇ ಆಗಿತ್ತು. ಗಂಡನಿಗೆ ಸೈ ಎನ್ನುವಂತೆ

ಕಾರ್ಯನಿರ್ವಹಿಸುತ್ತಿದ್ದರು. ಮಕ್ಕಳಿಗೂ ಇದ್ದುದರಲ್ಲೇ ತೃಪ್ತಿಕರ ಜೀವನ ನಡೆಸುವುದು ಹೇಗೆ ಎಂಬುದನ್ನು ರೂಢಿಸಿದರು. ಮಕ್ಕಳಿಗೂ ಆದರ್ಶರಾಗಿ ಜೀವನ ನಡೆಸುವಂತೆ ಪ್ರೋತ್ಸಾಹಿಸಿದರು. ಇಂತಹ ರುಕ್ಮಿಣಿಯವರು ದಿನಾಂಕ 23 ಸೆಪ್ಟಂಬರ್ 2007 ರಂದು ವಿಧಿವಶರಾದರು.[10] ತಮ್ಮ ಧರ್ಮಪತ್ನಿ ರುಕ್ಮಿಣಿಯವರ ಸಾವು ಬಂದೀಗೌಡರಿಗೆ ತುಂಬಲಾರದ ನಷ್ಟವನ್ನುಂಟು ಮಾಡಿತು. ತಮ್ಮ ಭಾರವಾದ ಹೃದಯದಿಂದ ಎಲ್ಲವನ್ನೂ ಮರೆತು ತಮ್ಮ ಸೇವಾ ಕಾರ್ಯಾರಂಭವನ್ನು ಮಾಡಿದರು.

ಸೇವಾಕಾರ್ಯಾರಂಭ

ಮೈಸೂರು ಪ್ರಜಾಪ್ರತಿನಿಧಿಯ ಸಭೆಯ ಸದಸ್ಯರಾಗಿ ಸಿ.ಬಂದೀಗೌಡರು.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯು ಭಾರತ ಉಪಖಂಡದಲ್ಲೇ ಮೊಟ್ಟಮೊದಲನೆಯದು ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ಇದು 1881 ರಲ್ಲೇ ಅಸ್ತಿತ್ವಕ್ಕೆ ಬಂತು. ಭಾರತದ ಆಡಳಿತಕ್ಕೆ ಸಂಬಂಧಿಸಿದಂತೆ, 1861 ರಲ್ಲಿ ಒಂದು ಕಾಯ್ದೆಯನ್ನು ಬ್ರಿಟೀಷ್ ಸರ್ಕಾರ ಜಾರಿಗೆ ತಂದಿತು. ಇದರ ಮೇರೆಗೆ ಗರ್ವನರ್ ಜನರಲ್ಲರು, ಪ್ರಾಂತ್ಯಗಳ ಗರ್ವನರುಗಳು ಮತ್ತು ಸಂಸ್ಥಾನದ ಅಧಿಪತಿಗಳು ತಮ್ಮ ತಮ್ಮ ಸಮರ್ಪಕವಾದ ಅಡಳಿತ ನಿರ್ವಹಣೆಗೆ ಸಲಹೆ ನೀಡಲು ಕೌನ್ಸಿಲ್‌ಗಳು ಅಥವಾ ಸಲಹಾ ಸಮಿತಿಗಳನ್ನು ರಚಿಸಿಕೊಳ್ಳಲು ಅವಕಾಶ ಒದಿಗಿಸಿತು. ಈ ಅವಕಾಶವನ್ನು ಬಳಸಿಕೊಂಡು ಮೈಸೂರಿನ ಮಹಾರಾಜರು 1881 ರಲ್ಲಿ ಕೌನ್ಸಿಲನ್ನು ರಚಿಸಿಕೊಂಡರು. 1881 ರಲ್ಲಿ ಬ್ರೀಟಿಷರಿಂದ ಪುನಃ ಅಧಿಕಾರವಹಿಸಿಕೊಂಡ ಮೈಸೂರಿನ ಮಹಾರಾಜ ಚಾಮರಾಜೇಂದ್ರ ಒಡೆಯರ್ ರವರು ತಮ್ಮ ಆಡಳಿತದ ಬಗ್ಗೆ ಆಗಾಗ್ಗೆ ಪ್ರಜಾಪ್ರಮುಖರ ಅಭಿಪ್ರಾಯಗಳನ್ನು ತಿಳಿಯವುದು ಉತ್ತಮವೆಂದು ಭಾವಿಸಿ ಆಗಿನ ದಿವಾನರಾಗಿದ್ದ ಸಿ.ರಂಗಾಚಾರ್ಲು ಅವರ ಸಲಹೆಯ ಮೇರೆಗೆ ಪ್ರಜಾ ಪ್ರತಿನಿಧಿ ಸಭೆಯನ್ನು ರಚಿಸಲು ಯೋಜಿಸಿದರು. ರಂಗಾಚಾರ್ಲು ಅವರಿಗೂ ಜನಾಭಿಪ್ರಾಯಕ್ಕೆ ಅನುಗುಣವಾಗಿ ರಾಜ್ಯಡಳಿತ ನಡೆಯಬೇಕೆಂಬ ಗಾಢವಾದ ನಂಬಿಕೆ ಇದ್ದಿತು.

ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳಿಂದ ಸದಸ್ಯರನ್ನು ಆರಿಸಲಾಗಿದ್ದಿತು. ಪ್ರತಿ ತಾಲ್ಲೂಕಿನಿಂದಲೂ ಒಬ್ಬರು ಅಥವಾ ಇಬ್ಬರು ಭೂ ಮಾಲೀಕರನ್ನು ಜಿಲ್ಲಾಧಿಕಾರಿಯು ನೇಮಕ ಮಾಡುತ್ತಿದ್ದರು. ಈ ರೀತಿಯಾಗಿ ಪ್ರಜಾ ಪ್ರತಿನಿಧಿ ಆರಿಸಲ್ಪಟ್ಟವರು ತಮ್ಮ ಸ್ಥಳದಲ್ಲಿ ತಿಳುವಳಿಕೆಸ್ಥರೂ, ಪ್ರಭಾವಶಾಲಿಗಳೂ ಆಗಿರಬೇಕಾಗಿದ್ದಿತು.[11]

ಡಾ.ಸಿ.ಬಂದೀಗೌಡರು ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಆಯ್ಕೆಗೊಂಡು 1945 ರಿಂದ 1950 ರವರೆಗೆ ಕಾರ್ಯನಿರ್ವಹಿಸಿದ್ದಾರೆ. ಗೌಡರು 1946 ನೇಯ ಇಸವಿ ಮೇ 29ನೇ ತಾರೀಖು ಬುಧವಾರ ಮೈಸೂರು ಪ್ರಜಾಪ್ರತಿನಿಧಿಯ ಸದಸ್ಯರಾಗಿ ಶ್ರೀರಂಗಪಟ್ಟಣ ತಾಲ್ಲೂಕಿನಿಂದ ರಾಜಭಕ್ತಿ ಪ್ರಮಾಣ ವಚನ ಸ್ವೀಕರಿಸಿದರು.[12] ಮಂಡ್ಯ ಜಿಲ್ಲೆಯ ರೈತಾಪಿ ಜನರ ಹಲವು

ಜ್ವಲಂತ ಸಮಸ್ಯೆಗಳನ್ನು ನಿಲುವಳಿ ಸೂಚನೆಯ ಮೇಲೆ ಚರ್ಚಿಸುತ್ತಾ ಸಭೆಯ ಗಮನ ಸೆಳೆದಿದ್ದರು. ಸಭೆಯಲ್ಲಿ ಗೌಡರು ಮಾಡಿದ ಭಾಷಣದ ಸಾರಾಂಶವೆಂದರೆ ಮಂಡ್ಯ ಜಿಲ್ಲೆಯ ಸುಮಾರು 454 ಗ್ರಾಮಗಳಲ್ಲಿ ಕಬ್ಬನ್ನು ಬೆಲ್ಲ ಮಾಡಕೂಡದೆಂದು ಆಜ್ಞೆ ಮಾಡಿದರು. ಇದರಿಂದ ಸಾವಿರಾರು ಜನರಿಗೆ ತೊಂದರೆಯಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲು ಈ ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಇದಕ್ಕೆ ಮೊದಲು ಎಂದರೆ ಯುದ್ಧ ನಡೆಯುತ್ತಿದ್ದಾಗ ಇದೇ ರೀತಿಯ ಆಜ್ಞೆಯನ್ನು ಹೊರಡಿಸಿದ್ದರು. ಆಗ ಭಾರತ ರಕ್ಷಣಾ ನಿಯಮಾವಳಿಯ 81 (2)ನೇ ನಿಬಂಧನೆಯ ಪ್ರಕಾರ ಅಧಿಕಾರವನ್ನು ಉಪಯೋಗಿಸಿ ಕೊಂಡು ಸರ್ಕಾರದವರು ಮಂಡ್ಯ ಜಿಲ್ಲೆಯಲ್ಲಿ ಕಬ್ಬನ್ನು ಬೆಳೆಯತಕ್ಕ ರೈತರು ಅದರಿಂದ ಬೆಲ್ಲವನ್ನು ತಯಾರು ಮಾಡಕೂಡದೆಂದು ಆಜ್ಞೆಯನ್ನು ಮಾಡಿದರು. ಆ ರೀತಿ ಮಾಡಬಾರದೆಂದು ಯಾವ ಆಜ್ಞೆಯಲ್ಲೂ ಮುಂಚಿತವಾಗಿ ಸೂಚಿಸಿರಲಿಲ್ಲ. ನಮಗೆ ತಿಳಿದಿರುವ ಮಟ್ಟಿಗೆ ಕಬ್ಬನ್ನು ಬೆಳೆಯುವವರೆಲ್ಲರೂ ಬೆಲ್ಲವನ್ನು ಮಾಡಬೇಕು. ಇಲ್ಲದಿದ್ದರೆ ಸಕ್ಕರೆ ಕಂಪನಿಗೆ ಕೊಡಬೇಕಾಗಿದೆ. ಈಗ ಬೆಲ್ಲ ಮಾಡಕೂಡದೆಂದು ಆಜ್ಞೆ ಮಾಡಿದ್ದರಿಂದ ಸಕ್ಕರೆ ಮಾಡುವುದಕ್ಕೆ ಹೆಚ್ಚು ಅವಕಾಶ ಕೊಡಬೇಕೆಂದು ಸರ್ಕಾರದವರ ಅಭಿಪ್ರಾಯವಿರಬಹುದು. ಈ ರೀತಿ ಬೆಲ್ಲ ಮಾಡುವುದರಿಂದ ಭಾರತ ರಕ್ಷಣಾ ಕಾನೂನಿನ ಪ್ರಕಾರ ದಕ್ಕೆ ಬರುತ್ತದೆ ಎನ್ನುವುದರಲ್ಲಿ ಎಷ್ಟರಮಟ್ಟಿಗೆ ನಿಜಾಂಶವಿದೆ ಎನ್ನುವುದನ್ನು ಯೋಚಿಸಬೇಕು. ದೇಶದಲ್ಲಿ ಅನೇಕ ಭಾಗಗಳಲ್ಲಿ ಬೆಲ್ಲವನ್ನು ತಿನ್ನುವುದಿಲ್ಲ. ಯುದ್ಧಕಾಲದಲ್ಲಿ ಯಾಂಕಿ, ಟಾಮಿ ಇವರುಗಳು ಸಕ್ಕರೆಯನ್ನು ತಿಂದು ಜೀವಿಸುತ್ತಾರೆ. ಆದುದರಿಂದ ಅವರ ಉಪಯೋಗಕ್ಕೆ ಸಕ್ಕರೆ ಬಹಳವಾಗಿ ಬೇಕು ಎಂದು ಹೇಳಬಹುದು. ಅವರಿಗೂ ಕಷ್ಟವಿರಬಹುದು. ಆದರೆ ನಮಗೆ ಅದಕ್ಕಿಂತ ಎರಡರಷ್ಟು ಕಷ್ಟಗಳಿರಲಿಲ್ಲವೇ? ಆದರೂ ಆಗ ಯುದ್ಧ ಪರಿಸ್ಥಿತಿಯಿದ್ದುದರಿಂದ ಆ ಕಷ್ಟಗಳನ್ನೇಲ್ಲಾ ನಮ್ಮ ಜನರು ಸಹಿಸಿಕೊಂಡು ಇದ್ದರು. ಅನಂತರ 1945 ರಲ್ಲಿ ಜರ್ಮನಿ, ಜಪಾನ್ ರಾಷ್ಟ್ರಗಳು ಸೋತು ಹೋಗಿ ಯುದ್ಧವು ಮುಗಿಯಿತು. 1945ನೇ ಸೆಪ್ಟೆಂಬರ್ ತಿಂಗಳಲ್ಲಿ ಬೆಲ್ಲವನ್ನು ತಯಾರಿಸಬಾರದೆಂದು ಸರ್ಕಾರದವರು ಒಂದು ಆಜ್ಞೆಯನ್ನು ಜಾರಿಗೆ ತಂದರು. ಮಂಡ್ಯ ಜಿಲ್ಲೆಯ ಸುಮಾರು 400 ಹಳ್ಳಿಗಳಿಗೆ ಆ ಅಜ್ಞೆಯು ಅನ್ವಯಿಸುವಂತೆ ಮಾಡಿದ್ದಾರೆ. ಯುದ್ಧವು ಆಗತಾನೇ ಮುಗಿದು ಇನ್ನೂ ಶಾಂತ ಪರಿಸ್ಥಿತಿ ಬಂದಿರಲಿಲ್ಲ. ಆ ಸಲುವಾಗಿ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಮನಸ್ಸು ಬಂದಿರಬಹುದು. ಅದಕ್ಕೆ ಬದಲಾಗಿ ಈ ವರ್ಷ ಸೆಪ್ಟೆಂಬರ್ 18ನೇ ತಾರೀಖಿನಲ್ಲಿ ಹೊಸ ಆಜ್ಞೆ ಒಂದನ್ನು ಜಾರಿಗೆ ತಂದಿದ್ದಾರೆ. ಅದರ ಪ್ರಕಾರ ಮುಂಚೆ ಇದ್ದುದಕ್ಕಿಂತಲೂ ಹಳ್ಳಿಗಳ ಸಂಖ್ಯೆಯನ್ನು ಹೆಚ್ಚಿಸಿದ್ದಾರೆ.

ಆಹಾರ ಶೇಖರಣೆ ಮತ್ತು ಸರಬರಾಜು ವಿಚಾರದಲ್ಲಿ ಕೆಲವು ವಾದ ಮಾಡಬಹುದು. ಆದರೆ ಬೆಲ್ಲವನ್ನು ಆ ರೀತಿ ಶೇಖರಿಸಿ ಕೆಲವು ಕಾಲ ಇಡುವುದಕ್ಕೆ ಆಗುವುದಿಲ್ಲ. ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸಾಗಿಸುವುದಕ್ಕೆ ತೊಂದರೆಯಾಗುತ್ತದೆ. ಸಕ್ಕರೆಯಾದರೆ ಸುಲಭವಾಗಿ ಸಾಗಿಸಬಹುದು ಎಂದು ಕೆಲವು ಹೇಳಬಹುದು. ಆದರೆ ಅದಕ್ಕೆ ಆಸ್ಪದವಿಲ್ಲ. ಸಕ್ಕರೆ ಅಭಾವವು ಎಷ್ಟಿದೆಯೋ ಬೆಲ್ಲದ ಅಭಾವವೂ ಅಷ್ಟೇ ಇದೆ. ದೇಶದಲ್ಲಿ ಸಕ್ಕರೆ ಮತ್ತು ಬೆಲ್ಲ ಜನಗಳಿಗೆ ಒದಗುತ್ತಾ ಇಲ್ಲದೇ ಇರುವುದರಿಂದ ಕಬ್ಬಿನ ಬೆಳೆಯನ್ನು ಹೆಚ್ಚು ಮಾಡಬೇಕಾಗಿ ಬಂದಿದೆ. ಅಂಥಾದ್ದರಲ್ಲಿ ರೈತರು ಬೇಕಾದಷ್ಟು ಬೆಳೆದಾಗ್ಯೂ ಸಹ ಸಾಕಾದಷ್ಟು ಸಿಕ್ಕದೇ ಇರುವಾಗ, ಆ ಪದಾರ್ಥಗಳನ್ನು ಯಾರು ಒದಗಿಸಬೇಕು? ಬೆಲ್ಲ ಸಕ್ಕರೆಗಿಂತ ಉತ್ತಮವಾದ ಆಹಾರ ವಸ್ತು ಎಂದು ಅನೇಕರ ಅಭಿಪ್ರಾಯವಾಗಿದೆ. ಬೆಲ್ಲದಲ್ಲಿ ಇಲ್ಲದೇ ಇರುವಂಥ ಅಂಶಗಳು ಸಕ್ಕರೆಯಲ್ಲಿ ಏನೂ ಇಲ್ಲ. ಬೆಲ್ಲವೂ ಸಕ್ಕರೆಗಿಂತ ಹೆಚ್ಚು ಉಪಯೋಗಕರವಾದದ್ದು. ಅಂಥಾದ್ದರಲ್ಲೂ ಕೂಡ ಮಂಡ್ಯದ ರೈತರಿಗೆ ತೊಂದರೆ ಕೊಟ್ಟು ಬಹಳ ಅನಾನುಕೂಲವಾಗಿರುವ ಈ ಆಜ್ಞೆಯನ್ನು ಜಾರಿಗೆ ತಂದಿರುವುದು ಬಹಳ ಸೋಜಿಗವಾಗಿದೆ. ನಮ್ಮ ಮಾನ್ಯ ಮಿತ್ರರು ಆಗಲೇ ರಕ್ಷಣೆ ಕೊಡುವುದಕ್ಕೋಸ್ಕರವಾಗಿ ರೈತರಿಗೆ ಒಂದು ನಿರ್ಬಂಧವನ್ನು ಹಾಕಿದ್ದಾರೆ ಎಂಬುದು ಒಂದೇ ಕಾರಣ. ಈ ರೀತಿ ಏಕೆ ಸಕ್ಕರೆ ಕಂಪನಿಯವರಿಗೆ ಸಹಾಯ ಮಾಡಬೇಕು ಎಂಬುದು ನನಗೆ ಅರ್ಥವಾಗಿಲ್ಲ. ಎಸ್.ಸಿ. ಮಲ್ಲಯ್ಯನವರು ಹೇಳಿರುವ ಹಾಗೆ ಹಿಂದೆ ರೈತರು ಕಷ್ಟಕ್ಕೆ ಸಿಕ್ಕಿದಾಗ ಯಾವ ದಾಕ್ಷಿಣ್ಯವೂ ಇಲ್ಲದೇ ಹೆಚ್ಚಾಗಿದ್ದಂಥ 12 ಸಾವಿರ ಕಬ್ಬನ್ನು ಬೆಂಕಿಗೆ ಹಾಕಿ ಸುಟ್ಟು ಬಿಡಿ ಎಂದು ಸಕ್ಕರೆ ಕಂಪನಿಯವರು ಹೇಳಿದ್ದಾರೆ. ಅಂಥ ಕಠಿಣ ಮನಸ್ಸನ್ನು ಹೊಂದಿರತಕ್ಕದವರಿಗೆ ಯಾವ ಸಹಾಯವನ್ನು ಮಾಡಬೇಕಾಗಿಲ್ಲ. ಮಂಡ್ಯ ಜಿಲ್ಲೆಯ ಇರ್ವಿನ್ ನಾಲಾ ಬಯಲಿನಲ್ಲಿ ರೈತರು ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದಾರೆ. ಇರ್ವಿನ್ ನಾಲೆಯು ಆಗುವುದಕ್ಕೆ ಮುಂಚೆ ಅಲ್ಲಿನ ರೈತರು ಆರೋಗ್ಯವಂತರಾಗಿಯೂ ಧೃಢಕಾಯರಾಗಿಯೂ ಇದ್ದರು. ಶ್ರಮಜೀವಿಗಳಾಗಿದ್ದು, ಹರಕಲು ಅಂಗಿಯನ್ನು ತೊಟ್ಟಿದ್ದರೂ ಸಹ ಅವರ ಮಕ್ಕಳು ಮೊಮ್ಮಕ್ಕಳು ಆರೋಗ್ಯವಂತರಾಗಿದ್ರು. ಇರ್ವಿನ್ ನಾಲೆ ಬಂದ ಮೇಲೆ ಮಲೇರಿಯಾದ ಹಾವಳಿ ಹೆಚ್ಚಾಯಿತು. ಅಲ್ಲಿ ವಾಸಮಾಡತಕ್ಕದವರಲ್ಲಿ ರಕ್ತಹೀನತೆ ಬಂದು ಅನೇಕ ಕಡೆ ಹೆಂಗಡಸರಿಗೆ ಗರ್ಭಸ್ರಾವಗಳುಂಟಾಗುತ್ತಾ ಬಂದಿತು. ಗಂಡಸರಿಗೂ ಕೂಡ ಮಲೇರಿಯಾ ಗಡ್ಡೆಯೂ ದೊಡ್ಡದಾಗಿ ಬೆಳೆದು ಪುರುಷ ಗರ್ಭವಾಯಿತು. ಈಗಲೂ ಕಣ್ಣಾರೆ ಕೊರೆಯುವ ದೃಶ್ಯ. ಇಂದು ಸಾವಿರಾರು ಜನ ರೈತರಿಗೆ ಕೆಲಸ ಮಾಡಲು ಚೈತನ್ಯವಿಲ್ಲದೆ ಇದ್ದಾರೆ. ಹೀಗೆ ಚೈತನ್ಯವಿಲ್ಲದೇ ಇರತಕ್ಕಂಥವರಿಂದ ಪ್ರತಿಫಲವನ್ನು ನಿರೀಕ್ಷಿಸುವುದಾದರೆ ಅದು ಬಹಳ ವಿಷಾದಕರ, ನಮ್ಮ ಮಕ್ಕಳೇ ಮೂರು ನಾಲ್ಕು ಕಾಸು ಸಂಪಾದನೆ ಮಾಡಲಿ ಎಂಬ ಒಳ್ಳೆಯ ಮನಸ್ಸನ್ನು

ಕೊಟಿಲ್ಲ ಎಲ್ಲರೂ ಮನೆಕಟ್ಟಿಕೊಂಡು ಬಾಳಿ ಎಂಬ ಒಳ್ಳೆಯ ಮನಸ್ಸನ್ನು ಕೊಟ್ಟಿಲ್ಲ. ಎಲ್ಲರೂ ಮನೆಕಟ್ಟಿಕೊಂಡು ಬಾಳಲಿ, ಚನ್ನಾಗಿ ವಿದ್ಯಾವಂತರಾಗಿ ಮುಂದೆ ಬರಲಿ ಎಂದು ಒಂದು ಉದ್ದೇಶದಿಂದ ಅವರಿಗೆ ಹಣವನ್ನು ಒದಗಿಸಿದ್ದಲ್ಲಿ ಆ ಆಸೆಯಿಂದಲಾದರೂ ಹೆಚ್ಚು ಹೆಚ್ಚು ಉತ್ಸಾಹದಿಂದ ಅವರ ಮನೆ ಮಕ್ಕಳೆಲ್ಲರೂ ಸೇರಿ ಕಬ್ಬನ್ನು ಬೆಳೆಯುತ್ತಾರೆ. ಈ ರೀತಿ ಮಾಡದೆ ಅವರಿಗೆ ಬರತಕ್ಕ ಮೂರು ಕಾಸಿಗೂ ಕಲ್ಲು ಹಾಕತಕ್ಕದ್ದು ಸರಿಯೇ? ಅನ್ಯಾಯವಲ್ಲವೇ? ಅದೂ ಅಲ್ಲದೇ ಸರ್ಕಾರದವರು ಆ ಆಜ್ಞೆಯನ್ನು ಹೊರಡಿಸುವಾಗ ಮಂಡ್ಯ ಜಿಲ್ಲೆಯ ಇರ್ವಿನ್ ನಾಲಾ ಪ್ರದೇಶಗಳಿಗೆ ಮಾತ್ರ ಅನ್ವಯಿಸುವಂತೆ ಮಾಡದೆ ಶ್ರೀರಂಗಪಟ್ಟಣದ ಇನ್ನೂ ಅನೇಕ ತಾಲ್ಲೂಕುಗಳಿಗೂ ಇರ್ವಿನ್ ನಾಲಾ ಬಯಲಿನಲ್ಲಿರತಕ್ಕ ಚಿಕ್ಕದೇವರಾಯಸಾಗರ ನಾಲಾ ಪಕ್ಕದಲ್ಲಿ ವ್ಯವಸಾಯ ಮಾಡತಕ್ಕ ಜಮೀನುಗಳಿಗೂ ಈ ಆಜ್ಞೆಯನ್ನು ಅನ್ವಯಿಸುವಂತೆ ಜಾರಿ ಮಾಡಿದ್ದಾರೆ. ಹೀಗೆ ಆ ಆಜ್ಞೆಯನ್ನು ಅನ್ವಯಿಸದೆ ಇರುವಂತೆ ಇರ್ವಿನ್ ನಾಲಾ ಪ್ರದೇಶದಲ್ಲಿಯೂ ಮತ್ತು ಶ್ರೀರಂಗಪಟ್ಟಣದಲ್ಲಿ ಚಿಕ್ಕದೇವರಾಯಸಾಗರ ನಾಲಾ ಪ್ರದೇಶದಲ್ಲಿಯೂ ಅವಕಾಶವಿಲ್ಲದ ಹಾಗೆ ಮಾಡುತ್ತಾರೆ ಎಂದು ವರ್ತಮಾನವಿದೆ. ಆದರೆ ಇನ್ನು ಕೆಲವು ಕಡೆ ರೈತರಿಗೆ ಬಹಳ ಅನ್ಯಾಯವಾಗಿದೆ. ಆಯಾ ಗ್ರಾಮದ ಜಮೀನಿನಲ್ಲಿ ಕಬ್ಬನ್ನು ಬೆಳೆದವರು ತಾವು ಇಷ್ಟು ಬೆಳೆದಿದ್ದೇವೆ ಎಂಬುದಾಗಿ ತೋರ್ಪಡಿಸಿದ್ದೇ ಆದರೆ ಕೈ ತೋರಿಸಿದರೆ ಹಸ್ತ ನುಂಗುವ ರೀತಿಯಲ್ಲಿ ಸಕ್ಕರೆ ಕಂಪನಿಯವರು ಆ ಕಬ್ಬನ್ನೆಲ್ಲಾ ವಶಪಡಿಸಿಕೊಂಡುಬಿಡುತ್ತಾರೆ. ಕೆಲವರು ಬೆಲ್ಲವನ್ನು ಹೆಚ್ಚು ದರಕ್ಕೆ ಮಾರುತ್ತಿದ್ದಾರೆ. ಈ ರೀತಿ ಅಕ್ರಮವಾಗಿ ಲಾಭ ಪಡೆಯುವುದನ್ನು ತಪ್ಪಿಸಿ ಹತೋಟಿಗೆ ತರಬೇಕೆಂಬ ಅಭಿಪ್ರಾಯ ಸರ್ಕಾರ ದವರಿಗೆಯೆಂದು ಅವರ ಹೇಳಿಕೆಯಿಂದ ಗೊತ್ತಾಗುತ್ತದೆ.

ರೈತರು ಕಬ್ಬನ್ನು ಗಾಣ ಆಡಬೇಕಾದರೆ ಆಹಾರದ ಇಲಾಖೆಯ ಡೈರೆಕ್ಟರ್‌ರವರ ಅನುಮತಿಪಡೆದು ಮಾಡಬಹುದೆಂದಿದೆ. ಇದನ್ನು ಎಂಥ ಸಂದರ್ಭದಲ್ಲಿ ಮಾಡಬಹುದೆಂದರೆ ಕಾರ್ಖಾನೆಯಿಂದ ದೂರವಾಗಿದ್ದು, ಲಾರಿಯಿಂದ ಅಥವಾ ರೈಲ್ವೇ ಮುಖಾಂತರ ಸಾಗಿಸುವುದಕ್ಕೆ ಅನುಕೂಲವಿಲ್ಲದಿದ್ದರೆ ಅಂಥ ಕಡೆಗೆ ಅನ್ವಯಿಸಬೇಕು. ಇದರಿಂದ ಒಂದು ತೊಂದರೆಯಿಂದ ಈ ರಿಯಾಯಿತಿಯನ್ನು ದೊರಕಿಸಿಕೊಳ್ಳುವುದಕ್ಕೆ ಲಂಚರುಷುವತ್ತುಗಳನ್ನು ಕೊಟ್ಟು ಅದನ್ನು ಪಡೆಯಲು ಅವಕಾಶವಾದಂತಾಗುತ್ತದೆ. ಅದಕ್ಕೆ ದಾರಿ ಇಲ್ಲದ ಹಾಗೆ ಸರ್ಕಾರದವರು ಬೆಲ್ಲ ಮಾಡಿದವರಿಗೆ ಹೆಚ್ಚು ಹಣ ಸಿಕ್ಕುವಂತೆ ಏರ್ಪಾಡು ಮಾಡಬೇಕು.[13]

ಬಂದೀಗೌಡರು ರೈತ ಪರ ಕಾಳಜಿವುಳ್ಳವರು. ಬಡವರ ರೈತರ ಸಂಕಷ್ಟಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದರು. ಬಡಜನರ ಆಹಾರ ಸಮಸ್ಯೆಗಳ ಬಗ್ಗೆ ಒಮ್ಮೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸುಧೀರ್ಘವಾದ ಚರ್ಚೆಯನ್ನು ನಡೆಸಿದರು. ಬಂದೀಗೌಡರ ಪ್ರಕಾರ ಮೈಸೂರು ಸಂಸ್ಥಾನದ ಜನರೆಲ್ಲರ

ಅವಶ್ಯಕತೆಯನ್ನು ಪೂರೈಸಬೇಕಾದರೆ ಆಹಾರ ಪದಾರ್ಥಗಳ ಬೆಳೆ ಜಾಸ್ತಿಯಾಗಬೇಕು. ಮೊದಲಿನಿಂದಲೂ ನಮ್ಮ ಸಂಸ್ಥಾನ ಆಹಾರದ ವಿಷಯದಲ್ಲಿ ಅಭಾವ ಪ್ರದೇಶ. ಅದರಲ್ಲೂ ಈ ವರ್ಷ ಈಗತಾನೇ ಮಾನ್ಯ ಗೃಹ ಸಚಿವರು ವಿವರಿಸಿರುವಂತೆ ಮಳೆ ಬೆಳೆ ಸಾಕಾದಷ್ಟು ಆಗಿಲ್ಲದೇ ಇರುವುದರಿಂದ ಪರಿಸ್ಥಿತಿ ಅಸಮರ್ಪಕವಾಗಿ ಇನ್ನೂ ಹೆಚ್ಚಿನ ಕೊರತೆ ಪ್ರದೇಶವಾಗಿದೆ. ಈ ಸಂದರ್ಭದಲ್ಲಿ ಭಾರತ ಸರ್ಕಾರದಿಂದ ನಮಗೆ ಯಾವ ರೀತಿಯ ಅನುಜ್ಞ ಬರಲಿ. ಬರದೇ ಇರಲಿ ಪರಿಸ್ಥಿತಿ ಇನ್ನೂ ಹೆಚ್ಚಿನ ಕಳವಳಕ್ಕೆ ಕಾರಣವಾಗದಂತೆ ನೋಡಿಕೊಳ್ಳುವುದು. . ನಮ್ಮ ಸರ್ಕಾರದ ಕರ್ತವ್ಯವಾಗಿದೆ. ನಮ್ಮ ಸಂಸ್ಥಾನದಲ್ಲಿ ಯಾವಾಗ ಸಾಕಾದಷ್ಟು ಬೆಳೆ ಬೆಳೆಯಲಿಲ್ಲವೋ ಆಗ ಹೊರಗಿನಿಂದ ನಮಗೆ ಬೇಕಾಗುವಷ್ಟು ಧಾನ್ಯ ತರಿಸಿಕೊಳ್ಳಬೇಕಾದದ್ದು ಅಗತ್ಯ. ನಮ್ಮ ದೇಶದಲ್ಲಿ ಸಾಕದಷ್ಟು ಬೆಳೆ ಆಗದೇ ಇರುವುದರಿಂದ ನಾವು ಪರಾವಲಂಬಿಗಳಾಗಿ ಸಾಮಾನ್ಯ ಸಂದರ್ಭದಲ್ಲಿ ಸಹ ನೆರೆಹೊರೆ ಪ್ರಾಂತ್ರಗಳ ಸಹಾಯವನ್ನು ನಿರೀಕ್ಷಿಸುವುದು ಸ್ವಾಭಾವಿಕವಾಗಿದೆ. ಈಗಿನ ಪರಿಸ್ಥಿತಿ ಏನಾಗಿದೆಯೆಂದರೆ ನಮ್ಮ ಸುತ್ತಮುತ್ತ ಇರತಕ್ಕ ಮದರಾಸು ಬೊಂಬಾಯಿ ಪ್ರಾಂತಗಳಲ್ಲೂ ಸಹ ಒಂದಲ್ಲ ಒಂದು ರೀತಿಯಲ್ಲಿ ಹತೋಟಿ ಆಜ್ಞೆ ಜಾರಿಗೆ ಬಂದಿದೆ ಅಥವಾ ಬರುವುದರಲ್ಲಿದೆ. ಆದ್ದರಿಂದ ಅಲ್ಲಿರತಕ್ಕ ಹೆಚ್ಚಿನ ಧಾನ್ಯವನ್ನು ನಾವು ನಿರೀಕ್ಷಿಸುವಂತಿಲ್ಲ, ನಮ್ಮ ಸಂಸ್ಥಾನದ ಧಾನ್ಯಗಳ ಬೆಲೆಗಳಿಗಿಂತಲೂ ಹೆಚ್ಚಿನ ಧಾರಣೆ ನೆರೆಹೊರೆ ಪ್ರಾಂತ್ಯದಲ್ಲಿ ದೊರೆಯುತ್ತಿರುವುದರಿಂದ ನಿಮ್ಮಲ್ಲಿದ್ದ ಅಲ್ಪ ಸ್ವಲ್ಪ ಧಾನ್ಯವೂ ಸಹ ಹೊರಪ್ರಾಂತ್ಯಗಳಿಗೆ ಹೋಗಿ, ವಿಶೇಷ ಪರಿಸ್ಥಿತಿಯುಂಟಾಗಿ ಅದನ್ನು ಹತೋಟಿಗೆ ತೆಗೆದುಕೊಳ್ಳಬೇಕಾದ ಅನಿವಾರ್ಯ ಪ್ರಸಂಗ ಒದಗಿದೆ. ನಮ್ಮ ದೇಶದಿಂದ ದವಸ ಧಾನ್ಯಗಳು ಹೊರಗೆ ಹೋಗದಂತೆ ಮಾಡಬೇಕಾದರೆ ಸರ್ಕಾರದವರೂ, ಸಾರ್ವಜನಿಕರೂ ಎಚ್ಚರಿಕೆಯ ಕಾರ್ಯಕ್ರಮ ಕೈಗೊಳ್ಳಬೇಕು. ಸಾಲದೆ ಬಂದಿರುವಷ್ಟು ಧಾನ್ಯವನ್ನು ಭಾರತ ಸರ್ಕಾರದವರಿಗೆ ತಿಳಿಸಿ ಅದನ್ನು ಒದಗಿಸಿಕೊಳ್ಳುವುದಕ್ಕೆ ಸಾಹಸ ಪಡಬೇಕು. ಇಂಡಿಯಾ ಸರ್ಕಾರದವರು ಈಗ ಹಾಕಿ ಕೊಟ್ಟಿರತಕ್ಕ ನೀತಿಯಂತೆ ಹೋಗಬೇಕಾದ್ದು ಅಗತ್ಯ. ಕೇವಲ ಬೇರೆ ಪ್ರಾಂತ್ಯಗಳಲ್ಲಿ ಆಚರಣೆಯಲ್ಲಿರತಕ್ಕ ನೀತಿಯನ್ನು ಅನುಸರಿಸಿಕೊಂಡು ಹೋಗಬೇಕೆಂಬ ನಿರ್ಬಂಧವೇನೂ ಇಲ್ಲ. ನಮ್ಮ ದೇಶದ ಹಿತದೃಷ್ಟಿಯಿಂದಲೂ ಈಗಿರತಕ್ಕ ಆಹಾರಭಾವದ ಪರಿಸ್ಥಿತಿಯಿಂದಲೂ ಇದು ತೀರಾ ಅಗತ್ಯವಾಗಿದೆ. ತಾವು ಆಹಾರ ಪದಾರ್ಥಗಳನ್ನು ಅವರನ್ನು ಕೇಳಿಕೊಳ್ಳಬೇಕಾದ ಪರಿಸ್ಥಿತಿ ಇರುವುದರಿಂದ ಅವರು ಹಾಕಿಕೊಟ್ಟಿರತಕ್ಕ ಮಾರ್ಗವನ್ನು ಅನಸುರಿಸುವುದು ಕಲ್ಯಾಣದಾಯಕವಾದುದರು.[14]

ಶ್ರೀರಂಗಪಟ್ಟಣ ಪುರಸಭಾ ಅಧ್ಯಕ್ಷರಾಗಿ ಸಿ.ಬಂದೀಗೌಡರು (1948–1950)

ಸಿ.ಬಂದೀಗೌಡರುಸಮಾಜದ ಕೆಳಸ್ತರದ ವರ್ಗದವರಿಗೂ ಅಧಿಕಾರ ವಿಕೇಂದ್ರೀಕರಣವಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ ಆಶಯ

ಹೊಂದಿದ್ದರು. ಗಾಂಧಿಯವರ ಸರ್ವೋದಯ ತತ್ವದಲ್ಲಿ ಗೌಡರಿಗೆ ಅಪಾರ ನಂಬಿಕೆ, ತುಳಿತಕ್ಕೊಳಗಾದ ಸಮುದಾಯದ ಸರ್ವೋತೋಮುಖ ಅಭಿವೃದ್ಧಿಗೆ ದುಡಿಯಲು ಹಗಲಿರಳು ಶ್ರಮಿಸುತ್ತಿದ್ದರು.

1939 ರಲ್ಲಿ ಮಂಡ್ಯ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡಿತು. ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾದ ಶ್ರೀರಂಗಪಟ್ಟಣವು ಮೊದಲಿನಿಂದಲೂ ಜನಸಂದಣಿಯ ಒಂದು ಕೇಂದ್ರವಾಗಿತ್ತು. ಸ್ವಾತಂತ್ರ್ಯ ನಂತರ ಅಸ್ಥಿತ್ವಕ್ಕೆ ಬಂದ ಹಲವು ಆಡಳಿತ ವಿಭಾಗಗಳ ಪುನರ್ ರಚನೆಯ ಅಂಗವಾಗಿ 1948 ರಲ್ಲಿ ಶ್ರೀರಂಗಪಟ್ಟಣದಲ್ಲಿ ಪುರಸಭೆ ಅಸ್ಥಿತ್ವಕ್ಕೆ ಬಂದಿತು. ಹೀಗೆ ಅಸ್ತಿತ್ವಕ್ಕೆ ಬಂದ ಶ್ರೀರಂಗಪಟ್ಟಣದ ಪುರಸಭೆಗೆ ಮೊಟ್ಟ ಮೊದಲ ಪುರಸಭಾಧ್ಯಕ್ಷರಾಗಿ ಸಿ.ಬಂದೀಗೌಡರು ಆಯ್ಕೆಗೊಂಡು 1948 ರಿಂದ 1950 ರವರೆಗೆ ಕಾರ್ಯನಿರ್ವಹಿಸಿದ್ದಾರೆ.

ಬಂದೀಗೌಡರ ಪುರಸಭಾಧ್ಯಕ್ಷರ ಅವಧಿಯಲ್ಲಿ ಹಲವು ರಚನಾತ್ಮಕ ಕಾರ್ಯಗಳನ್ನು ಮಾಡಿ ಜನಮನ್ನಣೆ ಗಳಿಸಿದ್ದಾರೆ. ಆ ವೇಳೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿಯವರ ನಾಯಕತ್ವದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಹಲವು ಯೋಜನೆಗಳನ್ನು ಹಾಕಿಕೊಂಡು ಕಾರ್ಯನಿರ್ವಹಿಸುತ್ತಿತ್ತು. ಆ ಯೋಜನೆಗಳಲ್ಲಿ ಮುಖ್ಯವಾದವುಗಳೆಂದು ಖಾದಿಪ್ರಸಾರ, ಅಸ್ಪೃಶ್ಯತಾ ನಿವಾರಣೆ, ಮಧ್ಯಪಾನ ನಿರೋಧ ಮೊದಲಾದ ಹತ್ತು ಹಲವು ಕಾರ್ಯಕ್ರಮಗಳು ನಡೆಯುತ್ತಿದ್ದವು. ಆ ವೇಳೆಗಾಗಲೇ ಶ್ರೀರಂಗಪಟ್ಟಣದಾದ್ಯಂತ ಜನಪ್ರಿಯ ವೈದ್ಯರಾಗಿ ಖ್ಯಾತಿ ಗಳಿಸಿದ್ದ ಡಾ.ಸಿ.ಬಂದೀಗೌಡರು ಮೈಸೂರುಪ್ರಜಾಪ್ರತಿನಿಧಿ ಸದಸ್ಯರಾಗಿದ್ದು, ಪುರಸಭಾಧ್ಯಕ್ಷ ರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು.

1946ರ ಜೂನ್ ಕೊನೆಯ ವಾರದಲ್ಲಿ ಹಿಂದುಳಿದ ವರ್ಗದವರ ಕೇಂದ್ರ ಸಮಿತಿ ಬೆಂಗಳೂರಿನಲ್ಲಿ ಕಮೀಷನ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಈ ಸಭೆಯು ಮೈಸೂರು ಸಂಸ್ಥಾನದಾದ್ಯಂತ ಅಸ್ಪೃಶ್ಯತೆಯನ್ನು ನಿವಾರಿಸಲು ಅಗತ್ಯವಿರುವ ಕಾನೂನನ್ನು ಮಾಡುವಂತೆ ಸರ್ಕಾರವನ್ನು ಒತ್ತಾಯಿಸುವುದು ಹಾಗೂ ಹರಿಜನರ ಏಳಿಗೆಗಾಗಿ ಪಂಚವಾರ್ಷಿಕ ಯೋಜನೆಯೊಂದನ್ನು ತಯಾರಿಸಲು ಒಂದು ಉಪಸಮಿತಿಯನ್ನು ರಚಿಸುವ ನಿರ್ಣಯಗಳನ್ನು ಪಾಸು ಮಾಡಿತು. ಹರಿಜನೋದ್ಧಾರದ ಬಗ್ಗೆ ಅತ್ಯಂತ ಒಲವು ತಳೆದಿದ್ದ ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡಯರು ಸಂಸ್ಥಾನದಾದ್ಯಂತ ಇರುವ ಹರಿಜನರ ಅಭಿವೃದ್ಧಿಗೋಸ್ಕರ ತಮ್ಮ ಪ್ರಥಮ ಆದ್ಯತೆಯನ್ನು ನೀಡುವುದಾಗಿ ತಿಳಿಸಿದ್ದರು.[14ಅ]

ಮೈಸೂರು ಸಂಸ್ಥಾನದಲ್ಲಿ ಜಾರಿಗೊಳಿಸಿದ್ದ ಹರಿಜನೋದ್ಧಾರ ಕಾರ್ಯಗಳನ್ನು ಶ್ರೀರಂಗಪಟ್ಟಣದಲ್ಲೂ ಅನುಷ್ಠಾನಗೊಳಿಸಲು ಬಂದೀಗೌಡರು ನಿರ್ಧರಿಸಿದರು. ಅದರಂತೆ ದಿನಾಂಕ : 08-11-1947 ರಂದು ಶ್ರೀರಂಗಪಟ್ಟಣದ ಪುರಸಭೆಯ ವಿಶೇಷಾಧಿವೇಶನವು

ಅಲ್ಲಿನ ಅಮಲ್ದಾರರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ವಿಶೇಷ ಅಧಿವೇಶನದಲ್ಲಿ ಶ್ರೀರಂಗಪಟ್ಟಣದ ಹರಿಜನರು ಮನೆಗಳನ್ನು ಕಟ್ಟಿಕೊಳ್ಳಲು ಉಚಿತ ನಿವೇಶನಗಳನ್ನು ಹಂಚುವ ನಿರ್ಣಯವೊಂದನ್ನು ಡಾ.ಸಿ.ಬಂದೀಗೌಡ ಮತ್ತು ಕೆ.ಬಾಲಯ್ಯ ನವರುಗಳು ಮಂಡಿಸಿದ್ದರು.[14ಬಿ]

ಸಿ.ಬಂದೀಗೌಡರು ಪುರಸಭಾಧ್ಯಕ್ಷರಾಗಿದ್ದ ಅವಧಿಯಲ್ಲಿ ಈ ಮೇಲ್ಕಂಡ ರಚನಾತ್ಮಕ ಕಾರ್ಯಗಳಲ್ಲದೇ ಹಲವು ಜನೋಪಯೋಗಿ ಕಾರ್ಯಗಳನ್ನು ಮಾಡಿದ್ದಾರೆ. ಸರ್ಕಾರದ ವತಿಯಿಂದ ಅಸ್ಪೃಶ್ಯರಿಗೆ ಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಡಲು ಪ್ರಯತ್ನಿಸಿದರು. ಗಾಂಧೀಜಿಯವರ ಪ್ರಭಾವಕ್ಕೊಳಗಾಗಿದ್ದ ಗೌಡರು ಹರಿಜನರಲ್ಲಿದ್ದ ಮಧ್ಯಪಾನ ಚಟವನ್ನು ತೊಡೆದು ಹಾಕಲು ಕ್ರಮಕೈಗೊಂಡರು. ಪಟ್ಟಣದ ಸೌಂದರ್ಯ ವೃದ್ಧಿಯಾಗಲು ಹಾಗೂ ಟಿಪ್ಪು ಸೌಹಾರ್ದ ಸಮಾವೇಶವನ್ನು ಹಾಗೂ ಸರ್ವೋದಯ ಮೇಳಗಳನ್ನು ನಡೆಸುವುದರ ಮೂಲಕ ಜನರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಯಲು ಕಾರಣೀಭೂತರಾಗಿದ್ದಾರೆ. ಅಸ್ಪೃಶ್ಯತಾ ನಿವಾರಣೆಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳು ಮತ್ತು ದೇವಾಲಯ ಪ್ರವೇಶಕ್ಕಾಗಿ ಹರಿಜನರಿಗೆ ಮುಕ್ತ ಅವಕಾಶ ಕೊಡುವುದು. ಮೈಸೂರಿನಲ್ಲಿ ಅತ್ಯಂತ ಹಿಂದುಳಿದ ಹರಿಜನರಿಗಾಗಿ 500 ನಿವೇಶನಗಳನ್ನು ಉಚಿತವಾಗಿ ನೀಡಿ ಮಾದರಿ ಹರಿಜನ ಕಾಲೋನಿಯನ್ನು ನಿರ್ಮಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಹೀಗೆ ಬಂದೀಗೌಡರು ಪುರಸಭಾಧ್ಯಕ್ಷರಾಗಿದ್ದ ವೇಳೆಯಲ್ಲಿ ಹಲವು ರಚನಾತ್ಮಕ ಕಾರ್ಯಗಳನ್ನು ಮಾಡಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.

ವಿಧಾನ ಪರಿಷತ್ ಸದಸ್ಯರಾಗಿ ಡಾ.ಸಿ.ಬಂದೀಗೌಡರು :

ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಶುದ್ದ ಹಸ್ತದ ರಾಜಕಾರಣಿಗಳೆನಿಸಿದ ಕೆಲವೇ ಕೆಲವು ವ್ಯಕ್ತಿಗಳಲ್ಲಿ ಸಿ.ಬಂದೀಗೌಡರು ಒಬ್ಬರು. ಮಂಡ್ಯ ಜಿಲ್ಲೆಯ ರಾಜಕಾರಣದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದರಲ್ಲದೇ, ಸಾರ್ವಜನಿಕ ಜೀವನವು ಪರಿಶುದ್ದವಾಗಿರಬೇಕೆಂಬುದು ಅವರ ಸ್ಪಷ್ಟವಾದ ನಿಲುವು. ರಾಜಕೀಯಕ್ಕೆ ಬಂದದ್ದು ಹಣಗಳಿಸುವ ದುರುದ್ದೇಶದಿಂದಲ್ಲ. ಜನರ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ಬಂದೀಗೌಡರು ಬಾಲ್ಯದಿಂದಲೂ ಗ್ರಾಮೀಣ ಜನರ ಕಷ್ಟ ನಷ್ಟಗಳನ್ನೂ ಕಣ್ಣಾರೆ ನೋಡಿದ್ದರು. ರೈತರ, ಗ್ರಾಮೀಣರ ಬದುಕನ್ನು ನೆಮ್ಮದಿಯತ್ತ ಕೊಂಡೊಯ್ಯಲು ಏನು ಮಾಡಬೇಕೆಂದು ಆಲೋಚಿಸುತ್ತಿದ್ದರು. ಸ್ವತಃ ಜಮೀನ್ದಾರರಾಗಿದ್ದರೂ 1952 ರ ಕೆಂಗಲ್ ಮಂತ್ರಿ ಮಂಡಲದಲ್ಲಿ ಕಂದಾಯ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪ ಗೇಣಿ ಶಾಸನವನ್ನು ಜಾರಿ ತರುವ ಯೋಜನೆಯನ್ನು ಮನಗಂಡು ಅದನ್ನು ಶ್ರೀರಂಗಪಟ್ಟಣದಲ್ಲಿ ಜಾರಿಗೊಳಿಸುವಂತೆ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿದ್ದರು. ಇದರಿಂದ ಗೇಣಿದಾರರಿಗೆ ಬದುಕು ನೀಡುವ ಉದ್ದೇಶ ಅವರದಾಗಿತ್ತು. ಅಲ್ಲದೇ ರೈತರಿಗೆ ಧಕ್ಕೆ

ಉಂಟಾದಾಗ ಯಾವ ತ್ಯಾಗಕ್ಕೂ ಸಿದ್ಧರಾಗುತ್ತಿದ್ದರು. ಸದಾ ರೈತ ಪರಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದರು ಜನರಿಗೂ ಯಾವುದೇ ತೊಂದರೆಯಾಗದಂತೆ ನೋಡಿ ಕೊಳ್ಳುತ್ತಿದ್ದರು.

1964 ರಿಂದ 1970ರ ಅವಧಿಯಲ್ಲಿ ಸಿ.ಬಂದೀಗೌಡರು ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಗೊಂಡು ಹಲವು ಜನಪರ ಕಾರ್ಯಗಳ ಬಗ್ಗೆ ಸದನದ ಗಮನ ಸೆಳೆದಿದ್ದಾರೆ. 1967-68ನೇ ಸಾಲಿನ ಮೈಸೂರು ರಾಜ್ಯದ ಆಯವ್ಯಯ ಪತ್ರದ ಮೇಲೆ ಚರ್ಚೆ ಮಾಡುತ್ತಾ ನಮ್ಮಲ್ಲಿ ಅಪಾರ ಸಂಪನ್ಮೂಲಗಳೂ, ಸಮರ್ಥ ಕೃಷಿ ವರ್ಗವೂ, ರಾಜಕೀಯ ಸ್ಥಿರತೆಯೂ, ಅತ್ಯುತ್ತಮ ಶ್ರೇಣಿಯ ನಾಯಕತ್ವವೂ ಉಂಟು. ಈ ಎಲ್ಲಾ ಸಾಧನಗಳನ್ನು ಉಪಯೋಗಿಸಿಕೊಂಡರೆ ತೀವ್ರಗತಿಯಲ್ಲಿ ಪ್ರಗತಿಯನ್ನು ಖಂಡಿತವಾಗಿ ಸಾಧಿಸಬಹುದು. ಅಷ್ಟೇ ಅಲ್ಲ. , ನಾಲ್ಕಾರು ವರ್ಷಗಳಲ್ಲಿ ನಮ್ಮಲ್ಲಿ ಆಹಾರದ ಸಮೃದ್ಧಿ ಉಂಟಾಗುವುದು. ಉದ್ಯಮಗಳು ಅಭಿವೃದ್ಧಿಗೊಳ್ಳುವುವು. ಹಣಕಾಸಿನ ಸ್ಥಿತಿಯು ಭದ್ರವಾಗಿರುವುದು. ಮನಸ್ಸು ಬಂದಂತೆ ಹಣವನ್ನು ಖರ್ಚು ಮಾಡಲು ಇಷ್ಟಪಟ್ಟಿಲ್ಲವೆಂದು ಹೇಳಿ ಅದೇ ರೀತಿ ನಮಗಿರುವ ಸಾಧನ ಮೂಲಗಳನ್ನು ನೋಡಿಕೊಂಡು ಅದಕ್ಕೆ ಸರಿಯಾಗಿ ಖರ್ಚು ಮಾಡಬೇಕಾಗಿದೆ. ಇಲ್ಲದಿದ್ದರೆ ದಿವಾಳಿಯಾಗ ಬೇಕಾಗುತ್ತದೆ. ನಮ್ಮ ದೇಶದ ಮೂರು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಿದ ರೀತಿಯನ್ನು ನೋಡಿದರೆ, ಕೇವಲ ಸಿದ್ಧಾಂತಗಳ ಪ್ರತಿಪಾದನೆಗೆ ಹೋಗದೆ ಚನ್ನಾಗಿ ಕೆಲಸ ಮಾಡಬೇಕಾಗಿದೆ. ನಿಜವಾಗಿ ಪರಿಸ್ಥಿತಿಯನ್ನು ಗಣನೆಗೆ ತೆಗೆದು ಕೊಂಡರೆ ನಮ್ಮ ಆದಾಯದ ರೀತಿಯಲ್ಲಿ ನಮ್ಮ ವೆಚ್ಚವನ್ನು ಸರಿದೂಗಿಸುವುದು. ಬುದ್ಧಿವಂತಿಕೆಯ ಲಕ್ಷಣವೇ ಹೊರತು, ಮನಸ್ಸಿಗೆ ಬಂದಂತೆ ಖರ್ಚು ಮಾಡುವುದು ಸರಿಯಲ್ಲ. ಒಂದು ವರ್ಷವನ್ನು ಘಟಕವಾಗಿ ತೆಗೆದುಕೊಂಡರೆ, ಮುಂದೆ 10 ವರ್ಷ ಅಥವಾ 20 ವರ್ಷಗಳಲ್ಲಿ ಅಂದರೆ ಮುಂದೆ ಯಾವುದಾದರೂ ಒಂದು ವರ್ಷದಲ್ಲಿ ನಮ್ಮ ಖರ್ಚು ಮತ್ತು ಆದಾಯವನ್ನು ಯಾವ ಸಾಲವೂ ಇಲ್ಲದೆ ಸರಿದೂಗಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ಮಾತು ಒಂದು ಮನೆಗೂ ಅನ್ವಯಿಸುತ್ತದೆ. ಒಂದು ರಾಜ್ಯಕ್ಕೂ ಅನ್ವಯಿಸುತ್ತದೆ. ಒಂದು ದೇಶಕ್ಕೂ ಅನ್ವಯಿಸುತ್ತದೆ.[15] ರಾಜ್ಯ ಕೃಷಿ ಸಂಪತ್ತು ಹಾಗೂ ರಾಜ್ಯದ ಹಣಕಾಸು ದುರ್ವ್ಯವಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು.

ಸಿ.ಬಂದೀಗೌಡರು ಅಪ್ಪಟಗಾಂಧೀವಾದಿಗಳು, ಗಾಂಧೀಜಿಯ ಆಶಯದಂತೆ ಬದುಕನ್ನು ಸರಳೀಕರಣಗೊಳಿಸಿಕೊಂಡು ತನ್ನ ಸುತ್ತ ಮುತ್ತಲಿನ ಪರಿಸರವನ್ನು ಸತ್ಯ, ಅಹಿಂಸೆ, ಪ್ರಾಮಾಣಿಕತೆಗಳಿಂದ ಕೂಡಿರುವಂತೆ ಶ್ರಮಿಸುತ್ತಿರುವವರು. ಗ್ರಾಮೀಣ ಜನರಲ್ಲಿನ ಮಧ್ಯಪಾನ ದುಶ್ಚಟವನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿದ್ದರು. ಸಾಧ್ಯವಾದೆಡೆಯಲ್ಲೂ ಪಾನನಿರೋಧದ ಬಗ್ಗೆ ಜನರು ಜನಜಾಗೃತಿ ಉಂಟು

ಮಾಡುತ್ತಿದ್ದರು. ರಾಜ್ಯದಾದ್ಯಂತ ಪಾನನಿಷೇದ ಕಾಯ್ದೆ ಜಾರಿಗೆ ಬರಬೇಕೆಂದು ಬಯಸುತ್ತಿದ್ದರು.

ಒಮ್ಮೆ ವಿಧಾನಪರಿಷತ್ತಿನಲ್ಲಿ 1967 ರ ಮೈಸೂರು ಪಾನನಿರೋಧ ತಿದ್ದುಪಡಿ ಮಸೂದೆಯ ಮೇಲೆ ಚರ್ಚಿಸುತ್ತಾ, ಮಧ್ಯಪಾನ ಒಳ್ಳೆಯದಲ್ಲವೆಂದು ಎಲ್ಲರೂ ಒಪ್ಪುತ್ತಾರೆ. ಇದು ವಿವಾದಾಸ್ಪದವಾದ ವಿಷಯವಲ್ಲ. ನಮ್ಮ ದೇಶದಲ್ಲೇ ಅಲ್ಲ. ಇತರ ಗೌರವಯುತ ದೇಶಗಳೆಲ್ಲೂ ಸಹ ಪಾನನಿರೋಧ ಪ್ರಯತ್ನ ರಾಷ್ಟ್ರ ವ್ಯಾಪ್ತಿಯಾಗಿ ನಡೆದಿದೆ. ಆದರೂ ಸಹ ಇತಿಹಾಸಕಾರರು ಹೇಳಿದಂತೆ ಪಾನನಿರೋಧನವನ್ನು ಜಾರಿಗೆ ತರುವುದರಲ್ಲಿ ವಿಫಲವಾಗಿದೆ. ನಮ್ಮ ದೇಶದಲ್ಲಿಯೂ ಸಹ ವಿಫಲವಾಗಿದೆ ಎನ್ನುವ ಅಭಿಪ್ರಾಯವಿದೆ. ವಿಫಲವಾಗಿಲ್ಲ ಎನ್ನುವ ಅಭಿಪ್ರಾಯವೂ ಇದೆ. ಇದು ಇನ್ನೂ ಚರ್ಚಾಸ್ಪದವಾದ ವಿಷಯವಾಗಿಯೇ ಉಳಿದಿದೆ. ಮೈಸೂರಿನ ಮಟ್ಟಿಗೆ ಹೇಳುವುದಾದರೆ ನನಗನ್ನಿಸುತ್ತದೆ. ಅರ್ಥ ಸಚಿವರು ಹೇಳಿದಂತೆ ವ್ರತಕೆಟ್ಟರೂ ಸುಖಬರಲಿಲ್ಲವೆಂದು ಪಾನನಿರೋಧ ಯಶಸ್ವಿಯಾಗಲಿಲ್ಲ. ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣ ಕೂಡಿಬರಲಿಲ್ಲ. ನಮಗೆ ಎರಡು ಕಡೆಯಿಂದ ಕೇಡಾಯಿತು. ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಅದು ಅವರ ಪ್ರಾಥಮಿಕ ಅಭಿಪ್ರಾಯವಾಗಿರುವುದರಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಅವರು ಕರ್ತವ್ಯ ನಿಷ್ಠೆಯಿಂದ ಮಾಡಿದ ಕೆಲಸವೆಂದು ನಾನು ಹೇಳುತ್ತೇನೆ. ಅದಕ್ಕೆ ನನ್ನ ಸಹಾನುಭೂತಿ ಇದೆ. ಅವರು ಹತಾಶರಾಗುವಷ್ಟು ಪರಿಸ್ಥಿತಿ ಕೆಟ್ಟಿಲ್ಲವೆಂದು ಹೇಳುತ್ತೇನೆ. ಪಾನನಿರೋಧ ಜಾರಿಗೆ ಬಂದ ಮೇಲೆ ನಮ್ಮ ತಪ್ಪುಗಳನ್ನು ತಿದ್ದಿಕೊಂಡು ಶಾಸನವನ್ನು ಇನ್ನೂ ಬಿಗಿಗೊಳಿಸಿ ಪಾನನಿರೋಧ ಇನ್ನೂ ಯಶಸ್ವಿಯನ್ನಾಗಿ ಮಾಡುವಂಥ ಒಂದು ಮಟ್ಟದಲ್ಲಿದ್ದೇವೆ. ಸಂದೇಹಗಳಿಗೆ ವಶರಾಗಿ ಅದನ್ನು ಕೈಬಿಡುವುದಕ್ಕೆ ಹೋಗುತ್ತಿಲ್ಲವೆಂದು ಹೇಳುತ್ತೇನೆ. ಪಾನ ನಿರೋಧವನ್ನು ಇನ್ನು ಬಿಗಿ ಮಾಡಬೇಕೆಂಬುದಾಗಿ ತೋರುತ್ತದೆ. ಇಲ್ಲದಿದ್ದರೆ ರಾಷ್ಟ್ರಕ್ಕೆ ಕ್ಷೇಮವಿಲ್ಲ. ಸರ್ಕಾರ ಕಾನೂನು ಮಾಡುವಾಗ ನಮ್ಮ ನಮ್ಮ ವಿವಿಧ ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕ ನಾಯಕರಿಂದ ಏನು ಒಂದು ಸಹಕಾರ ಮತ್ತು ಸಹಾಯವನ್ನು ನಿರೀಕ್ಷಿಸಿದ್ದೆವೋ ಅದು ಸಾಕಷ್ಟು ಪ್ರಮಾಣದಲ್ಲಿ ಬರಲಿಲ್ಲವೆಂದು ಹೇಳಿದ್ದಾರೆ. ಸಾರ್ವಜನಿಕರು ಪಾನನಿರೋಧದ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಲು ಸರ್ಕಾರದವರು ಸಾಕಷ್ಟು ತಿಳುವಳಿಕೆ ಹೊಂದಲು ಸರ್ಕಾರದವರು ಸಾಕಷ್ಟು ಪ್ರಚಾರ ಕಾರ್ಯಮಾಡದೆ, ಆ ಬಗ್ಗೆ ಸಾರ್ವಜನಿಕರು ಸಾಕಷ್ಟು ಪ್ರಮಾಣದಲ್ಲಿ ಸರಿಯಾದ ರೀತಿಯಲ್ಲಿ ಪಾನನಿರೋಧ ನೀತಿಯನ್ನು ಬೆಳೆಸಿಕೊಳ್ಳದ ಕಾರಣ ನಾವು ಸ್ವಲ್ಪ ಮಟ್ಟಿಗೆ ಹಿಂದೆ ಉಳಿದಿದ್ದೇವೆಂದು ಹೇಳಬೇಕಾಗಿದೆ. ಈಗಲೂ ಸಹ ತಡವಾಗಿಲ್ಲ. ವ್ಯವಹಾರಿಕ ದೃಷ್ಟಿಯಿಂದ ಒಂದು ಹೆಜ್ಜೆ ಹಿಂದೆ ಸರಿದಿದ್ದೇವೆಂದು ತಿಳಿದು ಪಾನನಿರೋಧ ನೀತಿಯನ್ನು ಕೈಬಿಡಬಾರದು. ಸಾಕಷ್ಟು ಪ್ರಮಾಣದಲ್ಲಿ ವಿವೇಚನೆ ಮಾಡಿ, ಪ್ರಗತಿಪರ

ಶಕ್ತಿಗಳನ್ನು ಬೆಳೆಸಿಕೊಂಡು ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಆ ಮೂಲಕ ರಾಷ್ಟ್ರವನ್ನು ಮುಂದೆ ನಡೆಸುವ ಹೊಣೆಯನ್ನು ಹೊತ್ತಿದ್ದೇವೆ. ಪಾನನಿರೋಧ ನೀತಿಯನ್ನು ಕಟ್ಟುನಿಟ್ಟಾಗಿ ಮುಂದುವರೆಸಬೇಕಾಗಿದೆ. ಇದು ಒಂದು ಪಕ್ಷದ ಕೆಲಸವಲ್ಲ. ಈ ನೀತಿಯು ಯಶಸ್ವಿಯಾಗಲಿಲ್ಲವೆಂದು ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಪಕ್ಷಗಳು ದೂರುವುದಕ್ಕಾಗುವುದಿಲ್ಲ. ಈಗ ತಾತ್ಕಾಲಿಕವಾಗಿ ಅಲ್ಲದಿದ್ದರೂ ಹಲವಾರು ಕಾರಣಗಳಿಂದ ಪಾನನಿರೋಧನವನ್ನು ಪೂರ್ಣವಾಗಿ ಸಮರ್ಥಿಸುವುದು ಸಾಧ್ಯವಾಗಲಾರದು. ಹೊರದೇಶಗಳಿಂದ ಬಂದಿರುವ ರಾಯಭಾರಿಗಳು ವಿದೇಶಗಳಿಂದ ಬರುವ ಪ್ರವಾಸಿಗಳು ಮತ್ತು ನಮ್ಮ ಸೈನ್ಯ ದಳಕ್ಕೆ ಸೇರಿದ ವಿಶಿಷ್ಠ ವರ್ಗದವರನ್ನು ಸಾಮನ್ಯ ಜನತೆಗೆ ಹೋಲಿಸುವುದು ಸಾಧ್ಯವಿಲ್ಲ. ವಿದೇಶಗಳಿಂದ ಬರುವ ಪ್ರವಾಸಿಗರು ಕುಡಿಯುವುದನ್ನು ನಿಲ್ಲಿಸುವುದು ನಮ್ಮ ಹೊಣೆಯಲ್ಲ. ನಮ್ಮ ಹೊಣೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಲ್ಲಿ ಪಾನನಿರೋಧವನ್ನು ಸರಿಯಾಗಿ ಜಾರಿಗೆ ತರುವುದರಿಂದ ಮಾತ್ರ ನಮ್ಮ ದೇಶ ಉದ್ದಾರವಾಗುತ್ತದೆ. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಪಾನನಿರೋಧದ ಬಗ್ಗೆ ಸ್ಪಷ್ಟ ಅಭಿಪ್ರಾಯವಿದೆ. ಬೇರೆ ದೇಶಗಳ ವಿಚಾರ ಬೇಡ. ನಮ್ಮ ದೇಶದಲ್ಲಿ ಇದು ಕೆಟ್ಟದ್ದು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆ ಭಾವನೆಯನ್ನು ಬೆಳೆಸಿಕೊಂಡು ಉಪಯೋಗಿಸಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಇದು ಪೂರ್ಣ ಯಶಸ್ವಿಯಾಗಿಲ್ಲವೆನ್ನುವ ಒಂದೇ ಕಾರಣದಿಂದ ಕೈಬಿಡಬಾರದು, ಕಳ್ಳತನ ದರೋಡೆ, ಕೊಲೆ ಇವುಗಳನ್ನು ನಿಲ್ಲಿಸುವ ಕಾರ್ಯ ಪೂರ್ಣ ಯಶಸ್ವಿಯಾಗಿಲ್ಲವೆಂದು ಆ ಒಂದು ಕಾನೂನನ್ನೇ ಬದಲಾವಣೆ ಮಾಡಲಿಲ್ಲ. ಅದರಂತೆ ಪಾನನಿರೋಧವು ಪೂರ್ಣ ಯಶಸ್ವಿಯಾಗಿಲ್ಲವೆಂದು ಅದನ್ನು ಕೈಬಿಡುವ ನೀತಿ ಸರಿಯಿಲ್ಲ. ಈ ಬಗ್ಗೆ ಒಂದು ಹೆಜ್ಜೆ ಹಿಂದೆ ಹೋಗಿದ್ದರೂ ಕೂಡ ಇದರಿಂದ ಸಾಮಾನ್ಯ ಜನತೆಗೆ ಉಪಯೋಗವಾಗಲಿ ಎಂಬ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರುವ ಪ್ರಯತ್ನ ಮಾಡಬೇಕಾಗುತ್ತದೆ. ನಮ್ಮ ರಾಷ್ಟ್ರದ ವ್ಯಾಪ್ತಿಯಾದ ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿ ಯವರೆಗೆ ಮತ್ತು ಬಂಗಾಳದಿಂದ ಹಿಡಿದು ಪಂಜಾಬ್‌ವರೆಗೆ ಯಾವ ಕಡೆಯಿಂದಲೂ ನಮ್ಮ ರಾಜ್ಯಕ್ಕೆ ಒಂದು ತೊಟ್ಟು ಪಾನೀಯವನ್ನು ಸಹ ತರಬಾರದು. ಈ ರೀತಿ ಮಾಡಿದರೆ ಮಾತ್ರ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಲು ಸಾಧ್ಯವೆಂದು ಹೇಳಿದರು. ಸಮಾಜದ ಹಿತದೃಷ್ಟಿಯಿಂದ ಒಂದು ಮಿತಿಯಿರಲೇಬೇಕು. ಪೂರ್ಣವಾಗಿ ನಿರೋಧ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ಸರ್ಕಾರ ಒಂದಲ್ಲ ಒಂದು ರೀತಿಯಲ್ಲಿ ಪಾನನಿರೋಧವನ್ನು ಮುಂದುವರೆಸಬೇಕು. ಹಿಂದಿದ್ದ ಪದ್ದತಿಯಲ್ಲಿ ತಿದ್ದುಪಡಿ ಮಾಡಿ ಸರಿಯಾದ ವಿಧಾನವನ್ನುಸರಿಸಿ ಆಚರಣೆಗೆ ತರಬೇಕು. ಇದುವರೆಗೆ ನಡೆದಿರುವುದನ್ನು ನೋಡಿದರೆ ಸಮಾಧಾನವಾಗುವುದಿಲ್ಲ ಎಂದು ಕೈಬಿಡಬಾರದು. ತಾತ್ಕಾಲಿಕವಾಗಿ ತೊಂದರೆಯಾದರೂ ಸರ್ಕಾರ ಆಡಳಿತ ನಡೆಸುವಾಗ

ಕೇಂದ್ರರಾಯಭಾರ ಇರುವ ಪ್ರದೇಶ, ಸೈನಿಕರಿರುವ ನೆಲೆ ಮುಂತಾದ ಕಡೆಗಳಿಗೆ ವಿನಾಯಿತಿ ಕೊಟ್ಟು ಬೇರೆ ಕಡೆ ಹಿಂದಿದ್ದ ರೀತಿಯಲ್ಲಿ ಪಾನನಿರೋಧವನ್ನು ಕಾರ್ಯಚರಣೆಯಲ್ಲಿ ತರಬೇಕು. ಈಗ ತಿದ್ದುಪಡಿ ವಿದೇಯಕ ತಂದಿರುವಾಗ ಆಕ್ಷೇಪಣೆ ಎತ್ತುವುದು ಸರಿಯಾಗಲಾರದು. ಸರ್ಕಾರಕ್ಕೆ ಹಣದ ಕೊರತೆಯಿರುವಾಗ 4 ಕೋಟಿ ಆದಾಯ ಬಂದರೆ ಬರಲಿ. ಆದರೆ ಮುಂದೆ ನಮಗೆ ಒಳ್ಳೆಯ ಆದಾಯ ಮೂಲಗಳಿರುವಾಗ, ಶರಾವತಿಯಿಂದ ಪ್ರತಿ ವರ್ಷವೂ ಕೊಟ್ಯಾಂತರ ರೂಪಾಯಿ ಬರುವಾಗ ಪಾನನಿರೋಧವನ್ನು ತೆಗೆಯುವುದರಿಂದ ಬರುವ ಹಣ ಅಷ್ಟೇನೂ ಹೆಚ್ಚಲ್ಲ. ಒಂದು ವೇಳೆ ಇದು ಬಾರದಿದ್ದರೆ ಅಭಿವೃದ್ಧಿ ಕಾರ್ಯಗಳಿಗೇನೂ ತೊಂದರೆಯಾಗದೆ ಅವು ಮುಂದುವರೆಯಲು ಅವಕಾಶವಿದೆ. ಆದುದರಿಂದ ಪೂರ್ಣವಾಗಿ ಪಾನನಿರೋಧವನ್ನು ಆದಷ್ಟು ಜಾಗ್ರತೆ ಜಾರಿಗೆ ತರುತ್ತಾರೆಂದು ನಾನು ನಂಬಿಕೆ ಇಟ್ಟುಕೊಂಡಿದ್ದೇನೆ. [16]

ಉನ್ನತ ಶಿಕ್ಷಣದ ಬಗ್ಗೆ ಬಂದೀಗೌಡರ ನಿಲುವು :

ಶಿಕ್ಷಣ ಪ್ರೇಮಿಯಾದ ಬಂದೀಗೌಡರು ಉನ್ನತ ಶಿಕ್ಷಣ ಅದರಲ್ಲೂ ವಿಶ್ವ ವಿದ್ಯಾಲಯಗಳ ಶಿಕ್ಷಣ ಕ್ರಮದಲ್ಲಿ ಬದಲಾವಣೆಯಾಗಬೇಕು ಹಾಗೂ ಮಾರ್ಪಾಡುಗಳಾಗಬೇಕೆಂದು ಬಯಸುತ್ತಿದ್ದರು. ಒಮ್ಮೆ ವಿಧಾನಪರಿಷತ್ತಿನಲ್ಲಿ ಸುಧೀರ್ಘವಾದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಈ ರಾಜ್ಯದಲ್ಲಿರುವ ಉಚ್ಚ ಶಿಕ್ಷಣ ವ್ಯವಸ್ಥೆ ಹಾಗೂ ನಿರ್ವಹಣೆಯಲ್ಲಿ ಏಕರೂಪತೆಯನ್ನು ಸಾಧಿಸುವ ಸಲುವಾಗಿ ಬೆಂಗಳೂರು, ಮೈಸೂರು ಹಾಗೂ ಕರ್ನಾಟಕ ವಿಶ್ವ ವಿದ್ಯಾಲಯಗಳ ಸಂವಿಧಾನದಲ್ಲಿ ಕೂಡಲೇ ಮಾರ್ಪಾಡು ಮಾಡಬೇಕು ಎನ್ನುವ ಮಲ್ಲಾರಾಧ್ಯರ ನಿರ್ಣಯಕ್ಕೆ ಈ ಸಭೆ ಸಮ್ಮತಿಸುವುದು ಸಾಧುವಲ್ಲ ಎಂದು ನನ್ನ ಭಾವನೆ ಅಂದರೆ ಈ ವಿಶ್ವವಿದ್ಯಾನಿಲಯಗಳ ರಚನೆ ಪೂರ್ಣವಾಗಿದೆ. ಅದರಲ್ಲಿ ಯಾವ ಮಾರ್ಪಾಡು ಆಗಬಾರದು ಎಂದು ನನ್ನ ಅಭಿಪ್ರಾಯವಲ್ಲ. ಇನ್ನು ಪರಿವರ್ತನಶೀಲ, ಪ್ರಗತಿ ಶೀಲ ಪ್ರಪಂಚದಲ್ಲಿ ಸ್ಥಾಯಿಯಾದುದು. ಸ್ಥಿರವಾದುದು ಯಾವುದು ಇಲ್ಲ. ಅದರಲ್ಲಿಯೂ ದಿನೇ ದಿನೇ ವಿಸ್ತಾರವಾಗುತ್ತಿರುವ ಕ್ಷೇತ್ರದಲ್ಲಿ ನಾವು ಯಾವ ತೀರ್ಮಾನಗಳಿಗೆ ಬಂದೆವು ಅವು ಶಾಶ್ವತವಾಗಿ ಸ್ಥಿರವಾಗಿ ನಿಲ್ಲುತ್ತದೆ ಎಂದು ಯಾರೂ ಹೇಳುತ್ತಿಲ್ಲ. ಬೆಳೆಯಬೇಕಾದರೆ ಬದುಕಬೇಕಾದರೆ ಕಾಲಗತಿಯನ್ನು ಹೊಂದಿಕೊಂಡು ಆಗಾಗ ಬದಲಾವಣೆಯಾಗುತ್ತಾ ಇರುವುದೇ ಜೀವಂತವಾಗಿರುವ ಲಕ್ಷಣ. ಹಾಗೆಂದ ಮಾತ್ರಕ್ಕೆ ಎಲ್ಲಾ ವಿಶ್ವ ವಿದ್ಯಾನಿಲಯಗಳಲ್ಲಿಯೂ ಸಾಮಾನ್ಯವಾಗಿ ಮಾರ್ಪಾಡು ಆಗಬೇಕು. ತಿದ್ದುಪಡಿ ಆಗಬೇಕು. ಎನ್ನುವುದನ್ನು ನಾವು ಸಮ್ಮತಿಸಿದಂತೆ ಅಲ್ಲ. ಇಲ್ಲಿ ಕುಳಿತಿರುವ ಎಲ್ಲರಿಗೂ ಒಂದೇ ಬಣ್ಣದ ಬಟ್ಟೆಯಲ್ಲಿ ಒಂದೇ ಅಳತೆಯ ಕೋಟು ಹೊಲಿಸಿಕೊಡಿಸಬೇಕು. ಎಲ್ಲರ ಮುಖಗಳೂ ಒಂದೇ ರೀತಿ ಕಾಣಬೇಕು ಎನ್ನುವುದು ಎಷ್ಟು ಸಮಂಜಸವೋ ಅದೇ

ರೀತಿ ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಕೂಡ ಒಂದೇ ಬಗೆಯ ಸಂವಿಧಾನ ಇರತಕ್ಕದ್ದುಕೂಡ ಅಷ್ಟೇ ಸಮಂಜಸ. ಶ್ರೀ ಮಲ್ಲಾರಾಧ್ಯರು ತಮ್ಮ ಸೂಚನೆಯಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಲ್ಲಿ ಒಂದನ್ನು ಸೂಕ್ತವಾಗಿ ಕೈಬಿಟ್ಟಿದ್ದಾರೆ. ಅದು ವ್ಯವಸಾಯ ವಿಜ್ಞಾನ ವಿಶ್ವ ವಿದ್ಯಾನಿಲಯ ಹಾಗೂ ಮಾನ್ಯ ಸದಸ್ಯರಾದ ಶಾಸ್ತ್ರಿಗಳು ಸಂಯುಕ್ತ ಸ್ವರೂಪವುಳ್ಳದ್ದಾದ ಕಾರಣ ಬೆಂಗಳೂರು ವಿಶ್ವ ವಿದ್ಯಾನಿಲಯವನ್ನು ಇದರ ಜೊತೆಗೆ ಸೇರಿಸಬೇಡಿ ಎಂದು ತಿಳಿಸಿದ್ದಾರೆ. ಇನ್ನುಳಿದ ಎರಡು ವಿಶ್ವವಿದ್ಯಾನಿಲಯಗಳಲ್ಲಿ ಕೂಡ ಪ್ರತಿಯೊಂದಕ್ಕೂ ತನ್ನದೇ ಆದ ಇತಿಹಾಸ ಹಿನ್ನಲೆ, ಪರಂಪರೆ ಇದೆ. ಇವೆರಡಕ್ಕೂ ಸಮನಾಗಿ ಅನ್ವಯಿಸುವಂಥ ಒಂದು ನಿಯಮಾವಳಿಯನ್ನು ರೂಪಿಸುವುದಕ್ಕೆ ಪ್ರಯತ್ನಿಸುವುದು ಕೂಡ ಅಸ್ವಾಭಾವಿಕವಾದುದು. ಉಪಕುಲಪತಿಗಳ ಆಯ್ಕೆ ಯಾವುದೇ ವಿಧಾನದಲ್ಲಿ ಆಗಲಿ ಉಪಕುಲಪತಿಗಳಾದವರು ಜ್ಞಾನಸಂಪನ್ನರು, ಆಡಳಿತದಕ್ಷರು, ಮಧುರ ಭಾಷಿಗಳು, ಜನಪ್ರಿಯರು ಆಗಿರತಕ್ಕದ್ದು. ವಿಶ್ವವಿದ್ಯಾನಿಲಯಕ್ಕೆ ಒಂದು ಹೆಮ್ಮೆ. ಕುಲಪತಿಗಳಿಂದ ನಾಮಕರಣವಾದ ಮಾತ್ರಕ್ಕೆ ದಕ್ಷರು ಅಥವಾ ಅದಕ್ಷರು ಎಂದು ಹೇಳುವುದು ಅಥವಾ ಸೆನೆಟ್ ಸದಸ್ಯರಿಂದ ಆಯ್ಕೆಯಾದ ಮಾತ್ರಕ್ಕೆ ದಕ್ಷರು ಅಥವಾ ಅದಕ್ಷರು ಎಂದು ಹೇಳುವುದು ಸರಿಯಲ್ಲ. ಆಯಾ ವಿದ್ಯಮಾನಗಳು ಹಾಗೂ ಜಾಯಮಾನ, ಅಧಿಕಾರ ಸ್ಥಾನದಲ್ಲಿರುವ ವಿವೇಚನೆ ಇವುಗಳನ್ನು ಅವಲಂಬಿಸಿದೆ.

ಒಂದು ವಿಶ್ವವಿದ್ಯಾನಿಲಯ ತನ್ನ ಘನತೆ, ಗೌರವ ಇವುಗಳನ್ನು ಕಾಪಾಡಿಕೊಂಡು ಬರಬೇಕಾದರೆ ಯಾವ ಯಾವ ಲಕ್ಷಣಗಳು ಇರಬೇಕು ಸಾಮಾನ್ಯವಾಗಿ ವಿಶ್ವ ವಿದ್ಯಾನಿಲಯ, ಸ್ವಾಯತ್ತವಾಗಿರತಕ್ಕ ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ವಿಷಯದಲ್ಲಿ ಪರಾಯುತ್ತವಾದ ಮಾತ್ರಕ್ಕೆ, ಸರ್ಕಾರದ ಸಹಾಯಧನವನ್ನು ಅವಲಂಬಿಸಿದ ಮಾತ್ರಕ್ಕೆ ಸರ್ಕಾರ ದಿನನಿತ್ಯದ ಆಡಳಿತದಲ್ಲಿ ಏಕೆ ಪ್ರವೇಶಿಸಬೇಕು ಎನ್ನುವುದು ಅರ್ಥವಾಗುವುದಿಲ್ಲ. ಅಪರೂಪ ಸಂದರ್ಭದಲ್ಲಿ ಮಾತ್ರವೇ. ವಿಶ್ವವಿದ್ಯಾನಿಲಯದ ವಿವಿಧ ಅಧಿಕಾರ ಸಮಿತಿಗಳು ಎಂದು ತಮ್ಮ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲಿಲ್ಲ ಎನ್ನುವುದು ಸ್ಥಿರವಾದ ಮೇಲೆ, ಸರ್ಕಾರ ಅಪರೂಪ ಸಂದರ್ಭಗಳಲ್ಲಿ ಅದು ಕೈ ಹಾಕಬಾರದು. ಅದೇ ರೀತಿಯಾಗಿ ಸಿಂಡಿಕೇಟ್ ಮೊದಲಾದ ಸಮಿತಿಗಳಲ್ಲಿ ಸರ್ಕಾರದ ನಾಮಕರಣ ಸದಸ್ಯರು ಇರತಕ್ಕದ್ದು ಕೂಡ ಇಂದಿನ ಸಂದರ್ಭ ಗಳಲ್ಲಿ ಸರ್ಕಾರದ ನಾಮಕರಣ ಸದಸ್ಯರು ಇರತಕ್ಕದು ಕೂಡ ಇಂದಿನ ಸಂದರ್ಭಗಳಲ್ಲಿ ಸರಿಹೋಗುವುದಿಲ್ಲ. ವಿಶ್ವವಿದ್ಯಾಲಯಗಳು ಮಾತ್ರ ಸ್ವಾಯತ್ತವಾದರೆ ಸಾಲದು; ವಿಶ್ವ ವಿದ್ಯಾನಿಲಯಗಳಂತೆ ಇತರೆ ವಿದ್ಯಾಸಂಸ್ಥೆಗಳೂ ಕೂಡ ಕೆಲಸ ಮಾಡುತ್ತಿದ್ದರೆ ಅವುಗಳಿಗೂ ಕೂಡ ಈ ಸ್ವಾಯತ್ತ ಅಧಿಕಾರ ಕೊಡಬೇಕು ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಸರ್ಕಾರದವರು ಸಹಾಯಧನ ಕೊಟ್ಟರೂ ಕೂಡ ವಿಶ್ವ ವಿದ್ಯಾನಿಲಯಗಳು ತಮ್ಮ ಆಡಳಿತ ವಿಚಾರದಲ್ಲಿ ಸಂಪೂರ್ಣ ಸ್ವಾತಂತ್ರವಹಿಸಿರಬೇಕು.

ಇಷ್ಟೇ ಅಲ್ಲದೇ ವಿಶ್ವವಿದ್ಯಾನಿಲಯಗಳಿಂದ ಮನ್ನಣೆ ಪಡೆದ ಕಾಲೇಜುಗಳಲ್ಲೂ ಕೂಡ ಅಲ್ಲಿನ ಅಧ್ಯಾಪಕರ ಅನುಭವ, ಪ್ರತಿಭೆ ಇವುಗಳಿಗನುಗುಣವಾಗಿ ಅವರು ಪಾಠ ಪ್ರವಚನ ಬದಲಾಯಿಸುವುದಕ್ಕೆ ಅವರು ಸ್ವಂತವಾಗಿ ಪರೀಕ್ಷೆ ನಡೆಸುವ ಅಧಿಕಾರಕ್ಕೆ ಪುರಸ್ಕಾರವನ್ನು ಕೊಡುವ ದಿನ ಕೂಡ ಎಷ್ಟು ಬೇಗ ಮೈಸೂರು ರಾಜ್ಯದಲ್ಲಿ ಬಂದರೆ ಅಷ್ಟು ಉತ್ತಮ.

ಶ್ರೀಮಾನ್ ಮಲ್ಲಾರಾಧ್ಯರು ತಮ್ಮ ಭಾಷಣದಲ್ಲಿ ರಾಜ್ಯಪಾಲರು ಕುಲಪತಿಯಾಗುವುದು ಸರಿಯಲ್ಲ. ಬೇರೆ ಯಾರಾದರೂ ಆಗಬಹುದು. ರಾಜ್ಯಪಾಲರು ಹಲವಾರು ವಿಶ್ವ ವಿದ್ಯಾನಿಲಯಗಳಲ್ಲಿ ಕುಲಪತಿಗಳಾಗಿ ಕೆಲಸ ಮಾಡುವುದು ಕಷ್ಟವಾಗಬಹುದು ಎಂದು ಹೇಳುತ್ತಿದ್ದರು. ಏಕರೂಪತೆಯಿರಬೇಕೆಂದು ಹೇಳುವಾಗ ಈ ವಿಷಯದಲ್ಲೇಕೆ ಅಸಮಧಾನ ವ್ಯಕ್ತಪಡಿಸಿದರೋ ಗೊತ್ತಾಗಲಿಲ್ಲ. ರಾಜ್ಯಪಾಲರು ಹೇಗೆ ಸರ್ಕಾರದ ಕಾರ್ಯಕಲಾಪದ ಬಗ್ಗೆ ಸಂವಿಧಾನ ಬದ್ಧವಾಗಿ ಕೆಲಸ ಮಾಡುತ್ತಾರೋ ಅದೇ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಯಾಗಿರುವುದರಿಂದ ಸಾಮಾನ್ಯವಾಗಿ ಸರ್ಕಾರದವರು ವಿಶ್ವವಿದ್ಯಾನಿಲಯಗಳ ಕೆಲಸ ಕಾರ್ಯಗಳಲ್ಲಿ ಆಗಾಗ್ಗೆ ಪ್ರವೇಶ ಮಾಡುವುದಿಲ್ಲ ಎಂದು ಭರವಸೆ ಕೊಡುವ ಪ್ರತೀಕವಾಗಿದ್ದಾರೆ ಅವರು. ಅದೂ ಅಲ್ಲದೆ ಮೈಸೂರು ರಾಜ್ಯದಲ್ಲಿ ಪ್ರಾರಂಭದಲ್ಲಿ ರಾಜ್ಯಮಟ್ಟದಲ್ಲಿ ಪ್ರಾರಂಭವಾದ ವಿಶ್ವವಿದ್ಯಾನಿಲಯಕ್ಕೆ ಹಿಂದಿನ ಮಹಾರಾಜರು, ಅನಂತರ ರಾಜಪ್ರಮುಖರು. ಈಗ ರಾಜ್ಯಪಾಲರು ಒಬ್ಬ ಕುಲಪತಿಯಾಗಿ ಮುಂದುವರೆಯುವುದು ಸೂಕ್ತವಾಗಿದೆಯೇ ಹೊರತು ಅಸಂಗತವಾಗಿ ತೋರಲಿಲ್ಲ. ಮೈಸೂರಿನಲ್ಲಿ 10 ವಿಶ್ವವಿದ್ಯಾನಿಲಯ ಗಳಾದರೂ ಕೂಡ ರಾಜ್ಯಪಾಲರು ಕೇವಲ ಸಂವಿಧಾನಬದ್ಧರಾಗಿ ಕೆಲಸ ಮಾಡುವುದರಿಂದ ಆ ಸ್ಥಾನವನ್ನು ಅವರು ಅಲಂಕರಿಸಿದರೆ ಹೆಚ್ಚು ತೊಂದರೆ ಯಾಗುವುದಿಲ್ಲ. ಆದುದರಿಂದ ಅವರೇ ಮುಂದುವರೆಯುವುದು ಉತ್ತಮ ಎಂಬುದು ನನ್ನ ಸೂಚನೆ.

ಒಟ್ಟಿನಲ್ಲಿ ನಾನು ಮೊದಲೇ ತಿಳಿಸಿದ ಹಾಗೆ ಪ್ರತಿಯೊಂದು ವಿಶ್ವವಿದ್ಯಾನಿಲಯ ತನ್ನದೇ ಆದ ಒಂದು ಇತಿಹಾಸ, ಹಿನ್ನಲೆ, ತನ್ನತನ ವೈಶಿಷ್ಟ್ಯ ಪರಂಪರೆ ಹೊಂದಿರುವುದರಿಂದ ಎಲ್ಲವನ್ನೂ ಒಂದುಗೂಡಿಸಿ ಎಲ್ಲಕ್ಕೂ ಸಮನಾಗಿ ಅನ್ವಯಿಸುವ ಒಂದೇ ರೀತಿಯಾದ ನಿಯಮವನ್ನು ರಚಿಸುವುದು ಸೂಕ್ತವಲ್ಲ. ಹಲವು ವಿಷಯಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂವಿಧಾನ ಕರ್ನಾಟಕ ವಿಶ್ವವಿದ್ಯಾನಿಲಯದ ಸಂವಿಧಾನಕ್ಕಿಂತ ಹೆಚ್ಚು ಉತ್ತಮವಾಗಿರುವುದರಿಂದ ಅದರಲ್ಲಿರುವ ಒಳ್ಳೆಯ ಅಂಶಗಳನ್ನು ಕರ್ನಾಟಕ ವಿಶ್ವವಿದ್ಯಾನಿಲಯದವರು ಅನುಸರಿಸಬಹುದು. ಸ್ವೀಕರಿಸಬಹುದು. ಆದುದರಿಂದ ಪ್ರತಿಯೊಂದಕ್ಕೂ ಇರುವ ವೈಶಿಷ್ಟ್ಯ ಕಳೆಯುವುದಕ್ಕೆ ಕೈ ಹಾಕಬಾರದು. ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲೂ ಒಂದರೆಡು ಒಳ್ಳೆಯ ನೀತಿಗಳನ್ನು ಅನುಸರಿಸಬಹುದು. ತಮ್ಮ ವೈಶಿಷ್ಟ್ಯಗಳನ್ನು ಬೆಳೆಸಿಕೊಂಡು ರಾಜ್ಯದಲ್ಲಿರುವ ಮೂರು ವಿಶ್ವ ವಿದ್ಯಾನಿಲಯಗಳೂ ಅಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ ನೋಡುವುದಾದರೆ

ಏಕರೂಪತೆ ಸಾಧ್ಯಲಿಲ್ಲ. ಸರಿಯಲ್ಲ, ಅದಕ್ಕೆ ಪ್ರಯತ್ನ ಮಾಡುವುದು ಸಮಂಜಸವಲ್ಲ ಎಂದು ಇಷ್ಟು ಹೇಳುತ್ತೇನೆ ಎಂದರು.[17]

ವಿಧಾನ ಪರಿಷತ್ತಿನ ಸಭಾಧ್ಯಕ್ಷರ ಸ್ಥಾನಮಾನ ಕುರಿತು ಬಂದೀಗೌಡರ ಭಾಷಣ :

ಬಂದೀಗೌಡರು ವಿಧಾನಪರಿಷತ್ತಿನ ಸದಸ್ಯರಾಗಿದ್ದ ಅವಧಿಯಲ್ಲಿ ಹೊಸದಾಗಿ ಪರಿಷತ್ತಿನ ಸಭಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕಾಂತಪ್ಪಶೆಟ್ಟಿ ಯವರನ್ನು ಕುರಿತು ಮಾತನ್ನಾಡುತ್ತಾ ಈ ದೇಶದ ವಿವಿಧ ಶಾಸನ ಸಭೆಗಳ ಶ್ರೇಣಿಯಲ್ಲಿ ಇದರ ಸ್ಥಾನ ಅದ್ವಿತೀಯವಾದುದು. ಏಕೆಂದರೆ ಇದರ ಇತಿಹಾಸ ಬಹಳ ಚೈತನ್ಯ ಪೂರ್ಣವಾದುದು. ಈ ಶತಮಾನದ ಮೊದಲನೆಯ ವರ್ಷಗಳಲ್ಲಿ ಭಾರತದ ಅನೇಕ ದೇಶಿಯ ಅರಸರ ಆಳ್ವಿಕೆಯಲ್ಲಿ ನಿರಂಕುಶ ನೀತಿಯು ದೊಡ್ಡ ಊರುಗೋಲಾಗಿತ್ತು. ಆದರೆ ಮೈಸೂರು ರಾಜ್ಯದಲ್ಲಿ ಸಾಂಕುಶ ಪ್ರಭುತ್ವ ಮತ್ತು ಧರ್ಮ ಭೀತರೂ ಪ್ರಜಾಹಿತ ಚಿಂತಕರೂ ಆಗಿದ್ದ ಆಗಿನ ರಾಜರುಗಳ ಅಂಕುಶ ಎರಡಿತ್ತು. ಒಂದು ಬ್ರಿಟೀಷರ ಸಾರ್ವಭೌಮ ರಾಜ್ಯವಾಗಿತ್ತು. ಇನ್ನೊಂದು ಯಾರ ಶ್ರೇಯಸ್ಸಿಗಾಗಿ ಈ ರಾಜರು ತಮ್ಮ ಜೀವನವನ್ನು ಮುಡುಪಾಗಿ ಇಟ್ಟಿದ್ದರೋ, ಯಾರ ಸೇವೆ ಮಾಡುತ್ತಿದ್ದರೋ ಆ ಜನರ ಹಿತ ಮತ್ತು ಅವರ ಅಭಿಪ್ರಾಯಗಳಿಗೆ ಮನ್ನಣೆ ಕೊಡುವುದಾಗಿತ್ತು. ಜನರ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಕಳೆದ ಶತಮಾನದ ಕೊನೆಯಲ್ಲಿ ಒಂದು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸುವ ವ್ಯವಸ್ಥೆಯಾಗಿತ್ತು. ಪ್ರಜೆಗಳ ಅಭಿಪ್ರಾಯವನ್ನು ತಿಳಿದ ಮೇಲೆ ಅಭಿಪ್ರಾಯವನ್ನು ಕಾರ್ಯಗತ ಮಾಡುವುದಕ್ಕೆ ಶಾಸನಬದ್ಧವಾದ ಕ್ರಮವನ್ನನುರಿಸುವುದಕ್ಕೆ ಈ ಶತಮಾನದ ಮೊದಲನೆಯ ದಶಕದಲ್ಲಿ ನ್ಯಾಯವಿಧಾಯಕ ಸಭೆಯ ಅವಿರ್ಭಾವವಾಯಿತು. ಆ ನ್ಯಾಯ ವಿಧಾಯಕ ಸಭೆಯು ಈ ವಿಧಾನಪರಿಷತ್ತಿನ ಅಂಕುರ ಎಂಬುದನ್ನು ಇಲ್ಲಿನ ಜನ ಇನ್ನೂ ಹೆಮ್ಮೆಯಿಂದ ನೆನೆಸುತ್ತಾರೆ. ಆ ದಿನಗಳಲ್ಲಿ ಹೊರಗಿನಿಂದ ಈ ರಾಜ್ಯವನ್ನು ನೋಡಿ ವಿಮರ್ಶಿಸಿದ ಹಿರಿಯರು ಇದನ್ನು ರಾಜರಾಜ್ಯವೆಂದು ಕರೆದರು. ಅದು ಆಗಿನ ಸ್ಥಿತಿಗತಿಗಳಿಗೆ ಒಗ್ಗುವ ಹೆಸರಾಗಿತ್ತು. ಆ ಹೆಸರನ್ನು ಗಳಿಸಲು ಆ ಶ್ರೇಯಸ್ಸಿಗೆ ನಮ್ಮ ರಾಜ್ಯವನ್ನು ತರಲು ಬಹುಪಾಲು ಆಗ ಇಲ್ಲಿ ಅಸ್ತಿತ್ವದಲ್ಲಿದ್ದ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳು ಶ್ರಮಪಟ್ಟಿವೆ. ಆನರ ಅಭಿಪ್ರಾಯದ ಪ್ರಕಾರ ಆಡಳಿತ ನಡೆಸುವ ಪದ್ಧತಿಯಿದ್ದ ಕಾರಣ ಆಗ ಕ್ಷಾಮಡಾಮರಗಳು ಮತ್ತು ಕಷ್ಟ ಕಾರ್ಪಣ್ಯ ಗಳಿಲ್ಲದೆ ಜನರು ನೆಮ್ಮದಿಯಿಂದಿದ್ದರು. ಅವು ಹೇಗೆ ವರ್ತಿಸಿದವು ಎಂದರೆ ಸುಮಾರು 23 –24 ವರ್ಷಗಳ ಹಿಂದೆ ಆಡಳಿತ ನಡೆಸುವವರ ಎರಡು ಕಣ್ಣಾಗಿ ಎರಡು ಕಿವಿಯಾಗಿ ಪ್ರಾರಂಭವಾದ ಈ ಸಭೆಗಳು ಪ್ರಜಾ ಶಕ್ತಿಯ ಎರಡು ಕೈಗಳಾಗಿದ್ದವು. 1946 ರಲ್ಲಿ ಆಗ ದಿವಾನರಾಗಿದ್ದ ಮಾಧವರಾಯರು ಆಡಳಿತದಲ್ಲಿ ಸಮರ್ಥರಾಗಿದ್ದರೂ ಕೂಡ ಅವರು ಪ್ರಜೆಗಳ ಅಶೋತ್ತರವನ್ನು ಈಡೇರಿಸುವುದಕ್ಕಾಗಿದೆ. ತಮ್ಮ ಸ್ಥಾನವನ್ನು ತ್ಯಾಗಮಾಡಬೇಕಾಯಿತು. ಆ ಸಂದರ್ಭದಲ್ಲಿ

ಒಬ್ಬರನ್ನು ಹೊರಗಿನಿಂದ ಕರೆಸಿ ದಿವಾನರಾಗಿ ಮಾಡಿದರು. ಆದರೆ ಕಾಲ ಮುಂದುವರೆದು ಪ್ರಜೆಗಳ ತಿಳುವಳಿಕೆ ಹೆಚ್ಚಿದಂತೆ ಅವರಿಗೆ ಬೇಕಾದ ಹಕ್ಕುಗಳನ್ನು ಕೊಡಬೇಕಾಗಿ ಬಂದುದರಿಂದ ಅವರೇ ಕೊನೆಯ ದಿವಾನರಾದರು. 1952 ರಲ್ಲಿ ಈ ದೇಶದಲ್ಲಿ ಸಾರ್ವತ್ರಿಕ ಚುನಾವಣೆಯಾದ ನಂತರ ಆಗಿನ ನ್ಯಾಯವಿಧಾಯಕ ಸಭೆಯು ರೂಪಾಂತರ ಹೊಂದಿ ಭಾರತ ಸಂವಿಧಾನ ಕ್ಕನುಗುಣವಾಗಿ ಹೊಸ ಜನ್ಮ ತಾಳಿತು. ಈ ವಿಧಾನ ಪರಿಷತ್ತಿಗೆ ಪ್ರಥಮ ಸಭಾಪತಿಗಳೂ ದಿವಂಗತ ಕೆ.ಟಿ. ಭಾಷ್ಯಂರವರು ಆಯ್ಕೆಯಾದರು. ಅವರು ಸಭಾಪತಿಯ ಕರ್ತವ್ಯ ಭಾರವನ್ನು ಆಕಾಶದಲ್ಲಿ ಹಕ್ಕಿಯು ಹಾರುವ ಹಾಗೆ ಅನಾಯಾಸವಾಗಿ ನಿರ್ವಾಹ ಮಾಡಿದರು. ಆದರ್ಶ ಸಭಾಪತಿಯಾಗಿದ್ರು. 1956 ರಲ್ಲಿ ರಾಜ್ಯ ಪುನರ್ವಿಂಗಡನೆಯಾದಾಗ ಈ ಸಭೆ ವಿಸ್ತಾರವಾಯಿತು. ಇಂಥ ಸಭೆಯನ್ನು ಯಾವುದಾದರೂ ಒಂದು ಇತರ ಸಾಧಾರಣ ಸಭೆಗೆ ಹೋಲಿಕೆ ಮಡುವುದು ಸರಿಯಲ್ಲ. ಬರಬರುತ್ತಾ ಈ ಸಣ್ಣ ಹಡಗು ದೊಡ್ಡ ಹಡಗಾಯಿತು. ಈಗ ಆ ನೌಕೆಯನ್ನು ನಿಮಗೆ ಒಪ್ಪಿಸಿ ಬಿಟ್ಟಿದ್ದೇವೆ. ನಿಮ್ಮ ಬಗ್ಗೆಯೂ ನಿಮ್ಮ ಎದುರಿಗೇ ನಿಂತು ನಾನು ಸುತ್ತಿಸುವುದು ಸರಿಯಲ್ಲವೇನೋ? ಆದರೆ ನಾವು ಕೃತಿಯಿಂದ ನಿಮ್ಮಲ್ಲಿರುವ ನಂಬಿಕೆಯನ್ನು, ಗೌರವವನ್ನು ವ್ಯಕ್ತಪಡಿಸಿದ್ದೇವೆ. ತಾವು ಈ ಹಡಗಿನ ನಾವಿಕರಾಗಿ ಒಂದು ದಶಕಕ್ಕೂ ಹೆಚ್ಚು ಕಾಲ ದುಡಿದಿದ್ದೀರಿ. ಎರಡು ವರ್ಷ ಕಾಲ ಉಪಸಭಾಪತಿಗಳಾಗಿ ಅದರ ಚುಕ್ಕಾಣಿ ಹಿಡಿದಿದ್ದೀರಿ. ಇದನ್ನು ಗಮನಿಸಿಯೇ ನಿಮ್ಮನ್ನು ಅತ್ಯಂತ ಸಮರ್ಥರು ಎಂದು ಎರಡು ವರ್ಷ ಕಾಲ ನಮ್ಮ ಕಸ್ಟೋಡಿಯನ್ ಆಗಿ ಮಾಡಿದ್ದೇವೆ. ಸಮಯ ಬಂದರೆ ಹಿಂದೆ ನೌಕಾಧಿಪತಿಗಳಾಗಿದ್ದವರ ನೆರವು ಇದೆ. ನಾವೆಲ್ಲ ನಾವಿಕರು, ನಮ್ಮನ್ನು ಸರಿಯಾಗಿ ನಡೆಸಿಕೊಳ್ಳಿ. ಸಮದೃಷ್ಟಿಯಿಂದ ನಡೆಸಿಕೊಳ್ಳಿ. ನಮ್ಮ ಸ್ನೇಹಿತರು ಯಾರೂ ಪಕ್ಷಪಾತವನ್ನು ತೋರಿಸಿದರು ಎನ್ನುವ ದೂರನ್ನು ತಾರದಂತೆ ನೋಡಿಕೊಳ್ಳಿ. ಇವೊತ್ತಿನಿಂದ ನೀವು ಪಕ್ಷಾತೀತರು.

ನಾನು ಈ ಸಭೆಯನ್ನು ಮೊದಲನೇ ಒಂದು ನೌಕೆಗೆ ಹೋಲಿಸಿದ್ದೆ. ನನ್ನ ಕಲ್ಪನೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಜನತೆಯ ಕಲ್ಯಾಣ ಸಾಧನೆಗಾಗಿ ಕಲ್ಪವೃಕ್ಷ ತರಲು ಸಾಗರಾಂತಕ್ಕೆ ಹೋಗುತ್ತಿರುವ ನೌಕೆ. ಇನ್ನೂ ಅದರ ಯಾತ್ರೆ ಎಷ್ಟು ದೂರವಿದೆಯೋ ತಿಳಿಯದು. ಬಹುಶಃ ಅನಂತ ಯಾತ್ರೆಯೋ ಏನೋ. ನನ್ನ ದೃಷ್ಟಿಯನ್ನು ಎರಡು ವರ್ಷ ಕಾಲಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ. ಈಗ ಒಂದು ಬಂದರಿನಲ್ಲಿದ್ದೇವೆ. ಈ ಅವಧಿಯಲ್ಲಿ ಇದರ ಮಾರ್ಗದಲ್ಲಿ ಯಾವ ಕಷ್ಟವೂ ಬರದೆ ಇರಲಿ. ಯಾವ ಬಿರುಗಾಳಿಗೂ ಸಿಕ್ಕದೆ ಇರಲಿ. ಯಾವ ಬಂಡೆಗೂ ಬಡಿಯದೇ ಇರಲಿ; ನಿಮ್ಮ ಅಧಿಕಾರಾವಧಿ ಮುಗಿಯುವುದರೊಳಗಾಗಿ ಇನ್ನೊಂದು ನಿಲ್ದಾಣವನ್ನು ಸುರಕ್ಷಿತವಾಗಿ ಸೇರಲಿ. ನಮ್ಮ ಯಾನ ನಿರ್ವಹಿಸಲು ರಾಜ್ಯದ ಪುಣ್ಯ ಶಕ್ತಿಗಳು ನಿಮಗೆ ರಕ್ಷಣೆಯಾಗಲಿ.[18]

ಕ್ಷಾಮ ಮತ್ತು ಬರಗಾಲ ಕುರಿತು ಬಂದೀಗೌಡರ ಚರ್ಚೆ.

ಬಂದೀಗೌಡರು ರೈತಾಪಿ ಸಮುದಾಯದ ಬಗ್ಗೆ ಕಾಳಜಿವುಳ್ಳರಾಗಿದ್ದು ಒಮ್ಮೆ ವಿಧಾನಪರಿಷತ್ತನಲ್ಲಿ ಕ್ಷಾಮದ ಬಗ್ಗೆ ಚರ್ಚಿಸುತ್ತಾ ಮಳೆಯ ಋತುಮಾನ ಪರಿಸ್ಥಿತಿಯಿಂದ ಅಭಾವ ಪರಿಸ್ಥಿತಿ ಉಂಟಾಗಿದೆ. ಈ ಬಗೆಯ ಅಭಾವ ಪರಿಸ್ಥಿತಿ ಸ್ವಾತಂತ್ರ್ಯ ಬಂದ ಮೇಲೆ ಬರುತ್ತಿರುವುದು. ಮೂರನೆಯ ಸಲ 1952ನೇ ಸಾರ್ವತ್ರಿಕ ಚುನಾವಣೆಗಳಾದ ಮೇಲೆ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಹನುಮಂತಯ್ಯನವರು ಕೂಡ ಅನಾವೃಷ್ಠಿ ಎನ್ನುವುದು ನಮ್ಮ ಕೈಯಲ್ಲಿಲ್ಲ ಎಂದು ಹೇಳಿದ್ದರು. ಅದು ಅಕ್ಷರಶಃ ನಿಜ. ಇರಾನ್‌ನಲ್ಲಿ ನಡೆದ ಭೂಕಂಪದಿಂದ ಹೇಗೆ ಜನರನ್ನು ನಿವಾರಣೆ ಮಾಡಲು ಸಾಧ್ಯವಾಗಲಿಲ್ಲವೋ ಅದೇ ರೀತಿ ಇಲ್ಲೂ ಕೂಡ ಕ್ಷಾಮ ಎನ್ನುವುದು ಬರುತ್ತಲೇ ಇದೆ. ಪದೇ ಪದೇ ಬರುತ್ತಿರುವ ಅನಾವೃಷ್ಠಿಯನ್ನು ತಡೆಗಟ್ಟಲು ನಾವು ಅವಶ್ಯಕವಾಗಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲೇ ಬಂದಿದ್ದಾಗ್ಯೂ ಈ ಕಾರ್ಯದಲ್ಲಿ ನಾವು ಏಕೆ ವಿಫಲರಾಗಿದ್ದೇವೋ ತಿಳಿಯದು. ನಾವು ಈ ವಿಚಾರದಲ್ಲಿ ದೇವರಿಗೆ ಮೊರೆಯಿಡುವುದರ ಜೊತೆಗೆ ಈ ಅನಾನುಕೂಲವನ್ನು ಮುಂದೆ ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ನಮ್ಮಲ್ಲಿ ಹರಿಯುತ್ತಿರುವ ಎಲ್ಲ ನದಿಗಳಿಗೂ ಅಣೆಕಟ್ಟುಗಳನ್ನು ಹಾಕಿ ಜಲಾಶಯವನ್ನು ನಿರ್ಮಾಣ ಮಾಡಿದರೆ ಈಗ ನಾವು ಬೇಸಾಯ ಮಾಡುತ್ತಿರುವ ಒಟ್ಟು ಭೂಪ್ರದೇಶದಲ್ಲಿ ಅಲ್ಲಿಗೂ ನಾಲ್ಕನೇ ಮೂರು ಭಾಗದ ಭೂಮಿಯ ಬೆಳೆ ಮಳೆಯನ್ನೇ ಅನುಸರಿಸಿರುತ್ತದೆ. ಅಂದರೆ ನಮಗೆ ಕ್ಷಾಮಗಳು ಏಕೆ ಬರುತ್ತವೆ ಎಂಬುದೇನೋ ಸುಲಭವಾಗಿ ಅರ್ಥವಾಯಿತು. ಆದರೆ ಅದಕ್ಕೆ ಉತ್ತರವನ್ನು ಕಂಡುಹಿಡಿಯತಕ್ಕದ್ದು. ಅಷ್ಟು ಸುಲಭವಾದುದ್ದಲ್ಲ. ಶ್ರೀರಂಗಪಟ್ಟಣದಲ್ಲಿರುವ ಕ್ಷಾಮ ಒಂದು ರೀತಿಯದು. ಇನ್ನು ನಾಗಮಂಗಲ, ಹೊಸದುರ್ಗ, ಪಾವಗಡ ಇತ್ಯಾದಿ ಸ್ಥಳಗಳಲ್ಲಿ ಬರತಕ್ಕ ಕ್ಷಾಮದ ರೀತಿಯೇ ಒಂದು ತರಹ. ಈ ಪ್ರದೇಶಗಳು ಪ್ರತಿ ವರ್ಷವೂ ಕ್ಷಾಮವನ್ನು ಕಾಣಲೇಬೇಕಾಗಿದೆ. ಇಂಥ ಕ್ಷಾಮಗಳನ್ನು ತಡೆಗಟ್ಟತಕ್ಕ ಮಾರ್ಗದಲ್ಲಿ ಅಲ್ಲೊಂದು ಇಲ್ಲೊಂದು ಗೋಕಟ್ಟೆಗಳನ್ನು ರಿಪೇರಿ ಮಾಡಿಸುವುದು. ಕೆಲವು ಕಡೆ ಕಾಡು ರಸ್ತೆಗಳನ್ನು ಮಾಡಿಸುವುದು. ಇತ್ಯಾದಿ ಕೆಲಸಗಳೇನಿವೆ. ಇವು ಜನರಿಗೆ ಕೇವಲ ಕಣ್ಣೊರೆಸತಕ್ಕ ಕೆಲಸಗಳೆಂದೇ ಹೇಳಬಹುದು.

ಇನ್ನು ಕೆಲವು ಕಡೆಗಳಲ್ಲಿ ಗಂಜೀ ಕೇಂದ್ರಗಳನ್ನು ತೆರೆದಿದ್ದಾರೆ. ಅವುಗಳನ್ನು ನಡೆಸಿದರೆ ಇನ್ನು ಒಂದೆರಡು ತಿಂಗಳು ಮಾತ್ರ ನಡೆಸಬಹುದು. ಅದರಿಂದ ಕ್ಷಾಮ ನಿವಾರಣೆಗೆ ಏನೂ ಉಪಕಾರವಾದಂತೆ ಆಗುವುದಿಲ್ಲ. ಇದನ್ನು ತಡೆಗಟ್ಟತಕ್ಕ ಬಗ್ಗೆ ಒಂದು ವ್ಯವಸ್ಥಿತವಾದ ಯೋಜನೆಯನ್ನು ಹಾಕಿಕೊಳ್ಳಬೇಕು. ಹಾಗೇನಾದರೂ ಒಂದು ಯೋಜನೆಯನ್ನು ಹಾಕಿಕೊಂಡು ಸರ್ಕಾರದವರು ಕೆಲಸಗಳನ್ನು ಮುಂದುವರೆಸಿದರೆ

ಇನ್ನು ನಾಲ್ಕಾರು ವರ್ಷಗಳಲ್ಲೇ ಈ ಕ್ಷಾಮ ಎಲ್ಲೆಲ್ಲಿಯೂ ಕಾಣದ ರೀತಿಯಲ್ಲಿ ಕೆಲಸ ಮಾಡಬಹುದು. ಅನ್ನುವ ನಂಬಿಕೆ ನನಗಿದೆ.[19]

ಸಿ.ಬಂದೀಗೌಡರು ಗಾಂಧೀ ಯುಗದ ಸಂಕೇತ ಗಾಂಧೀಜಿಯವರ ಜೀವನಾಧಾರಗಳನ್ನು ಮೈಗೂಡಿಸಿಕೊಂಡಿದ್ದರು. ಗಾಂಧೀಜಿಯವರ ಜೀವನ ಇವರ ಬದುಕಿನ ಮೇಲೆ ಅಗಾಧವಾದ ಪರಿಣಾಮವನ್ನುಂಟು ಮಾಡಿತು. ಒಮ್ಮೆ ವಿಧಾನ ಪರಿಷತ್ತಿನಲ್ಲಿ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಾಡಿ ಮಾತನಾಡುತ್ತಾ ಗಾಂಧೀಜಿ ಈ ರಾಷ್ಟ್ರದ ಪ್ರಜೆಗಳ ಹೃದಯದಲ್ಲಿ ಧೈರ್ಯವನ್ನು ತುಂಬಿ, ನಿರ್ಬಲರಿಗೆ ಶಕ್ತಿಯನ್ನು ನೀಡಿ ಸ್ವಾತಂತ್ರ್ಯ ಸಮರಕ್ಕೆ ಅಣಿಮಾಡಿಕೊಟ್ಟ ನಾಯಕ ಅಲ್ಲವೇ. ಈ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ತಂದೆ ಅಲ್ಲವೇ? ಧರ್ಮ ನೀತಿಯ ನೆಲೆಗಟ್ಟಿನ ಮೇಳೆ ಈ ರಾಜಕೀಯವನ್ನು ರೂಪಿಸಿದ ವ್ಯಕ್ತಿಯಲ್ಲವೇ? ಒಂದು ಹೊಸ ಜೀವನ ಸಂಸ್ಕೃತಿಯನ್ನು ನಮಗೆ ನೀಡಿ ಮಾರ್ಗದರ್ಶನ ಮಾಡಿದ ಆಚಾರ್ಯ ಪುರುಷನಲ್ಲವೇ? ಗಾಂಧೀಜಿಯವರನ್ನು ನೆನೆದಾಗ ಯಾವ ಭಾರತೀಯನ ಮೈ ಪುಳಿಕಿತವಾಗುವುದಿಲ್ಲ? ಅವರನ್ನು ನೆನೆದಾಗಲೆಲ್ಲಾ ನಮ್ಮ ಹೃದಯದಲ್ಲಿ ಒಂದು ದೈನ್ಯತೆಯ ಭಾವ ಜಾಗೃತವಾಗುತ್ತದೆ. ಅಂಥವರ ಶತಾಬ್ದಿಯನ್ನು ನಮ್ಮ ಜನ ವೈಭವದಿಂದಲೂ, ಉತ್ಸಾಹದಿಂದಲೂ, ವಿಜೃಂಭಣೆಯಿಂದಲೂ ನೆರವೇರಿಸುತ್ತಾರೆ ಎನ್ನವುದರಲ್ಲಿ ಸಂಶಯವಿಲ್ಲ. ಯಾರು ಬೇಡ ಅಂದರೂ ನಮ್ಮ ಜನ ಗಾಂಧೀ ಶತಾಬ್ದಿಯನ್ನು ವೈಭವ ಪೂರ್ವಕವಾಗಿ ನಡೆಸುವುದನ್ನು ನಿಲ್ಲಿಸುವುದಿಲ್ಲ. ಆದರೆ ರಾಜ್ಯಪಾಲರ ಆಶಯ ಅಷ್ಟು ಮಾತ್ರವಲ್ಲ. ಈ ಪ್ರಖ್ಯಾತ ದೇಶದ ಮಿಲಿಯಾಂತರ ಜನತೆಗೆಂದು ಆಶಾಕಿರಣ ಹೊಳೆಯುವಂತಹ ರಚನಾತ್ಮಕ ಕಾರ್ಯಗಳ ನಿರ್ವಹಣೆ ಏನಿದೆ ಅದೇ ಈಗ ಗೊಂದಲಕ್ಕೆ ಸಿಕ್ಕಿದೆ. ಗಾಂಧೀಜಿ ಸತ್ಯ ಸಂಧತೆಗೆ ವಿಶೇಷ ಪ್ರಾಶಸ್ತ್ಯ ಕೊಡುತ್ತಿದ್ದರು. ಈಗ ನಾವು ಜಾಣತನವನ್ನು ಮೆಚ್ಚಿದ್ದೇವೆ. ಗಾಂಧೀಜಿ ಸರಳ ಜೀವನವನ್ನು ನಡೆಸಬೇಕೆಂದು ಹೇಳುತ್ತಿದ್ದರು. ನಾವು ಈಗ ಭೋಗ ಜೀವನವನ್ನು ಬಯಸುತ್ತೇವೆ. ಗಾಂಧೀಜಿ ತ್ಯಾಗಕ್ಕೆ ಪ್ರಾಶಸ್ತ್ಯವನ್ನು ಕೊಡುತ್ತಿದ್ದರು. ಈಗ ನಾವು ಲೋಲುಪ್ತತೆಯನ್ನು ಮೆಚ್ಚುತ್ತೇವೆ. ನಮ್ಮ ಆಹಾರದಿಂದ ಹಿಡಿದು ಜ್ಞಾನ ಸಂಪತ್ತಿನವರೆಗೂ ಹೊರದೇಶಗಳಿಂದ ಬಂದದ್ದು ಎಷ್ಟಿದೆ. ಅದರಲ್ಲಿ ಬಹುಭಾಗವನ್ನು ತೆಗೆದುಬಿಟ್ಟರೆ ನಮ್ಮ ಆಸ್ತಿ ಬರಿಯ ಬೋಗಣೆ, ಇಂಥಾ ಜನರು ನಾವು; ನಾವು ಹೇಗೆ ರಚನಾತ್ಮಕ ಕಾರ್ಯವನ್ನು ಮಾಡುವುದು, ಮಧ್ಯಪಾನ ನಿಷೇದವನ್ನು ತೆಗೆದು ಹಾಕಿರತಕ್ಕ ನಾವು ರಚನಾತ್ಮಕ ಕಾರ್ಯವನ್ನು ಮಾಡುತ್ತವೆಂದರೆ ಅದು ಸರಿಯೇ? ಅದನ್ನು ಒಂದು ನಿರ್ದೇಶನ ಎನ್ನಬಹುದೇ? ಹಿಂದೆ ಯಾರು ಆ ಮಹಾತ್ಮನ ತತ್ವಕ್ಕೆ ಅನುಗುಣವಾಗಿ ಆತನಿದ್ದ ಕಾಲದಲ್ಲಿ ಆತನ ಆದೇಶದಂತೆ ಎಲ್ಲೆಲ್ಲಿ ಹೆಂಡ ಸಾರಾಯಿಗಳ ಮಾರಾಟ ನಡೆಯುತ್ತಿತ್ತು ಅಲ್ಲೆಲ್ಲಾ ಜನರಿಗೆ ಅಡ್ಡಿಪಡಿಸಿ ಅವರಿಗೆ ಕುಡಿಯುವುದನ್ನು ತಪ್ಪಿಸಲು

ಸರ್ಪಕಾವಲಿದ್ದು, ಅದಕ್ಕಾಗಿ ಶಿಕ್ಷೆಯನ್ನು ಅನುಭವಿಸಿದಂಥ ಆಗಿನ ನಾಯಕರು ಈಗ ಅಧಿಕಾರಕ್ಕೆ ಬಂದ ನಂತರ ಅದೇ ನಾಯಕರು ಆ ನಿಷೇದವನ್ನು ತೆಗೆದುಹಾಕಿದ್ದಾರೆ.

ಮಹಾತ್ಮ ಗಾಂಧಿಯವರು ಈಗೇನಾದರೂ ಇದ್ದರೆ ಅವರೂ ಕೂಡ ಪಾನನಿರೋಧ ವನ್ನು ತೆಗೆದುಬಿಡಿ ಎಂದು ಹೇಳುತ್ತಿದ್ದರು ಎಂದು ಅನಿಸುತ್ತಿದೆ. ಮನಸ್ಸಿನ ಒಂದು ಸಮಾಧಾನಕ್ಕಾಗಿ ಏನು ಬೇಕಾದರೂ ಹೇಳಿಕೊಳ್ಳಬಹುದು. ಆ ವಿಷಯ ಹಾಗಿರಲಿ. ಎಲ್ಲಾ ಮಹಾತ್ಮರ ಕಡೆಯ ದಿನಗಳ ಗತಿ ಸಾಮಾನ್ಯವಾಗಿ ಒಂದೇ ರೀತಿಯದ್ದಾಗಿರುತ್ತದೆ ಎಂದು ಕಂಡು ಬರುತ್ತದೆ. ಗಾಂಧೀಜಿಯವರ ಉಪದೇಶಗಳನ್ನು ಆಚರಣೆಗೆ ತರಬೇಕೆಂಬ ಆಸೆಯಿತರಕ್ಕ ಧೀರರು ಎಷ್ಟು ಜನರಿದ್ದಾರೋ ಅವರೆಲ್ಲರೂ ನನ್ನದೊಂದು ನಮ್ರ ಸೂಚನೆ ಇದೆ. ಎಲ್ಲೆಲ್ಲಿ ಈ ದಿವಸ ಪಾನನಿರೋಧವನ್ನು ಸಡಿಲ ಮಾಡಲಾಗಿದೆಯೋ ಅಂಥ ಕಡೆಗಳಲ್ಲಿ ಇರತಕ್ಕ ಗಾಂಧೀಜಿಯ ಶಿಷ್ಯರು ಆ ಪ್ರದೇಶದಲ್ಲಿ ಕುಡಿತಕ್ಕೆ ಸಿಕ್ಕಿರತಕ್ಕ ಜನರನ್ನು ಕುಡಿತದಿಂದ ವಿಮುಖರಾಗುವಂತೆ ಮಾಡಿದರೆ ಈ ಶತಮಾನೋತ್ಸವ ಸಂದರ್ಭದಲ್ಲಿ ಅವರು ಗಾಂಧೀಜಿಯವರಿಗೆ ಬಹಳ ಗೌರವವನ್ನು ಅರ್ಪಿಸಿದಂತಾಗುತ್ತದೆ. [20]

ಪಂಚಾಯತ್ ರಾಜ್ಯ ಮತ್ತು ಸ್ಥಳೀಯ ಬೋರ್ಡ್‌ಗಳ ತಿದ್ದುಪಡಿ ಬಗ್ಗೆ ಚರ್ಚೆ.

ಬಂದೀಗೌಡರು ಸ್ಥಳಿಯ ಸರ್ಕಾರ ವ್ಯವಸ್ಥೆಯಲ್ಲಿ ಬದಲಾವಣೆ ಬರಬೇಕೆಂದು ಬಯಸುತ್ತಿದ್ದರು. ಪಂಚಾಯತ್ ರಾಜ್ಯ ಮತ್ತು ಸ್ಥಳೀಯ ಬೋರ್ಡ್‌ಗಳ ತಿದ್ದುಪಡಿ ಕಾಯಿದೆ ಬಗ್ಗೆ ಚರ್ಚೆ ಮಾಡುತ್ತಿದ್ದರು. ಒಮ್ಮೆ ವಿಧಾನಪರಿಷತ್ತಿನ ಸ್ಥಳೀಯ ಪಂಚಾಯತ್ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಸರ್ಕಾರ ಇದರಲ್ಲಿ ಏನು ಒಂದು ವ್ಯವಸ್ಥೆ ಮಾಡಬೇಕಾದರೂ ಒಂದು ದೃಢವಾದ ನಿಲುವನ್ನು ತೆಗೆದುಕೊಂಡು ಮಾಡತಕ್ಕಂಥ ಮನಸ್ಸು ಅದಕ್ಕೆ ಇಲ್ಲ ಹಾಗೂ ಹೀಗೂ ತಳ್ಳಿಕೊಂಡು ಹೋಗುವ ಮನಸ್ಸಿನಿಂದ ಮತ್ತು ಈ ಪಂಚಾಯಿತಿ ರಾಜ್ಯದ ವ್ಯವಸ್ಥೆ ಗೊತ್ತಿಲ್ಲದೇ ಇರುವುದರಿಂದ ಇದು ಹೇಗೋ ನಡೆದುಕೊಂಡು ಹೋಗುತ್ತಾ ಇದೆ. ಈ ಕಾರಣದಿಂದ ಇದರಲ್ಲಿ ಅಗತ್ಯವಾಗಿ ಆಗಬೇಕಾದ ತಿದ್ದಪಡಿಗಳು ತಪ್ಪಿ ಹೋಗಿ ಈ ಪಂಚಾಯಿತಿ ರಾಜ್ಯದ ವ್ಯವಸ್ಥೆ ಬಹಳ ಅಸಮರ್ಪಕವಾಗಿ ಕೆಲಸ ಮಾಡುತ್ತಾ ಇದೆ. ಸಮಗ್ರ ಜಿಲ್ಲೆಯಲ್ಲಿ ಕ್ಷೇತ್ರಾಧಿಕಾರವೂ ಇರುವ ಸ್ವತಂತ್ರ ಜಿಲ್ಲಾ ಪರಿಷತ್ತುಗಳನ್ನು ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲು ಅವಕಾಶವೇರ್ಪಡಿಸಿದೆ ಎಂದು ಹೇಳಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತುಗಳನ್ನು ಈಗ ಜಿಲ್ಲಾಧಿಕಾರಿಗಳು ನಡೆಸಿಕೊಂಡು ಹೋಗುತ್ತಾ ಇದ್ದಾರೆ. ಇದನ್ನು ಜನಗಳ ಪ್ರತಿನಿಧಿಗಳಿಗೆ ವಹಿಸಬೇಕೆಂದು ಕೇಂದ್ರೀಕರಿಸುವುದಾದರೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಮತ್ತು ಪಂಚಾಯಿತಿ ರಾಜ್ಯಗಳಿಗೆ ಕೊಟ್ಟಿರತಕ್ಕಂಥ ಒಂದು ಅಧಿಕಾರವನ್ನು ಮತ್ತು ಹೊಣೆಯನ್ನು ಕಡಿಮೆ ಮಾಡುವುದಾದರೆ ನೀವು ಯಾವ ಉದ್ದೇಶದಿಂದ ಇದನ್ನು ಸುಧಾರಣೆ ಮಾಡಬೇಕೆಂದು ಮಾಡಿದ್ದೀರೋ ಆ ಮೂಲ ಉದ್ದೇಶಕ್ಕೇನೇ

ಭಂಗ ಬರುತ್ತದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡಲಾಗಿದೆ. ಮತ್ತು ಈ ರೀತಿ ಕೇಂದ್ರೀಕೃತವಾದರೆ ಸ್ಥಳೀಯ ಸಂಸ್ಥೆಗಳು ಸಹಿಸುವುದಿಲ್ಲ. ಏತಕ್ಕೆಂದರೆ ಜಿಲ್ಲಾ ಮಟ್ಟದಲ್ಲಿರುವ ಪ್ರಾದೇಶಿಕ ಜಿಲ್ಲಾ ಪರಿಷತ್ತಿಗೆ ಎಲ್ಲ ಅಧಿಕಾರವನ್ನು ಮತ್ತು ಧನಸಹಾಯವನ್ನು ಒದಗಿಸಿಬಿಟ್ಟರೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಪಂಚಾಯಿತಿಗಳು ಬಿಡವು ಆಗುತ್ತವೆ. ಈ ರೀತಿ ಆಗದಂತೆ ಒಂದು ಸಮತೋಲನ ದೃಷ್ಟಿಯಿಂದ ಎಲ್ಲವೂ ಚನ್ನಾಗಿ ಬೆಳೆಯುವುದನ್ನು ನೋಡಿಕೊಂಡು ಹೋಗಬೇಕೇ ಹೊರತು ಬೇರೆ ದೃಷ್ಟಿಯಿಂದ ಇದನ್ನು ನೋಡಬಾರದು. [21.]

ಸಹಕಾರ ಸಂಘಗಳ ಬಗ್ಗೆ ಬಂದೀಗೌಡರ ನಿಲುವು.

ಬಂದೀಗೌಡರು ಸಹಕಾರ ಸಂಘಗಳಿಂದಲೇ ರೈತಾಪಿ ಜನರ ಅಭ್ಯುದಯವೆಂದು ತಿಳಿದಿದ್ದರು. ಸಹಕಾರ ಸಂಘಗಳು ಹಾಗೂ ಕೆಲವು ಕಾರ್ಖಾನೆಗಳ ಕಾರ್ಯ ವೈಖರಿಯ ಬಗ್ಗೆ ಅಸಮಾಧಾನಗೊಳ್ಳುತ್ತಿದ್ದರು. ಒಮ್ಮೆ ವಿಧಾನ ಪರಿಷತ್ತಿನಲ್ಲಿ ಸಹಕಾರ ಸಂಘಗಳ ಕಾಯ್ದೆ ಕುರಿತು ಸುಧೀರ್ಘವಾದ ಭಾಷಣವನ್ನು ಮಾಡಿದರು. ಈ ದೇಶದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೂ ಕೂಡ ಸರ್ಕಾರ ಅಸ್ಥಿತ್ವದಲ್ಲಿ ಇತ್ತು ಹಾಗು ಕೆಲಸ ಚನ್ನಾಗಿ ಮಾಡುತ್ತಾ ಇದ್ದಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಎಲ್ಲಾ ಪ್ರಜೆಗಳಿಗೆ ಸಮಾನ ಅವಕಾಶ ದೊರೆಯಬೇಕು. ಶ್ರೀಮಂತರಿಂದ ಬಡವರ ಶೋಷಣೆ ಪ್ರಭಾವಶಾಲಿಗಳಿಂದ ದುರ್ಬಲ ಶೋಷಣೆ ನಿಲ್ಲಬೇಕು. ಎನ್ನತಕ್ಕಂಥ ಗುರಿ ಇಟ್ಟುಕೊಂಡು ಸಹಕಾರ ಸಂಸ್ಥೆಗಳನ್ನು ಬಲಪಡಿಸಲು ಪ್ರಯತ್ನ ನಡೆಯುತ್ತಾ ಇದೆ. ಈ ನಮ್ಮ ರಾಷ್ಟ್ರದಲ್ಲಿ ಸಮಾಜವಾದಿ ಸಮಾಜ ರಚನೆ ಮಾಡಬೇಕು ಎಂದು ಸಹಕಾರ ಸಂಘಗಳಿಗೆ ಪ್ರಾಮುಖ್ಯತೆ ದೊರೆಯಿತು. ನಮಗೆ ಸ್ವಾತಂತ್ರ್ಯ ಬಂದು ಎರಡು ದಶಕಗಳಾದ ಮೇಲೂ ನಾವು ನಿರೀಕ್ಷಿಸಿದಷ್ಟು ಈ ಸಂಸ್ಥೆಗಳಲ್ಲಿ ಪಗ್ರತಿಯಾಗಲಿಲ್ಲ ಎನ್ನುವುದು ಸ್ವಲ್ಪ ಚಿಂತಿಸಬೇಕಾದ ವಿಚಾರ.

ಈಚೆಗೆ ಖಾಸಗೀ ಸಂಸ್ಥೆಯವರೂ ಕೂಡ ಗೊಬ್ಬರವನ್ನು ಸುಲಭ ದರದಲ್ಲಿ ಮಾರಾಟ ಮಾಡುವುದಕ್ಕೆ ತೊಡಗಿದ್ದರಿಂದ ಈ ಸಹಕಾರ ಸಂಘದ ಕೆಲಸ ಸಮರ್ಪಕವಾಗಿ ನಡೆಯುವುದಕ್ಕೆ ಕಾರಣವಾಗಿದೆ ಎಂದು ಅವರು ತಿಳಿಸಿದರಂತೆ, ಅದು ಕಾರಣವಲ್ಲ. ಒಂದು ವೇಳೆ ಅದು ಕಾರಣವಾಗಿದ್ದರೂ ಅದು ನಾವು ಒಪ್ಪತಕ್ಕಂಥ ಎತ್ತರವಲ್ಲ. ಸಹಕಾರಿ ಸಂಸ್ಥೆಗಳು ಖಾಸಗಿ ಸಂಸ್ಥೆಗಳೊಡನೆ ಸ್ಪರ್ಧಿಸಿ ಚೆನ್ನಾಗಿ ನಡೆಯತಕ್ಕಂಥ ಅವಕಾಶ ಇದೆ. ಅದನ್ನು ತಾವು ಸರಿಯಾಗಿ ಉಪಯೋಗಿಸಿಕೊಳ್ಳುವಂತೆ ಮಾಡಿಕೊಂಡಿಲ್ಲ. ಈ ಸಂದರ್ಭದಲ್ಲಿ ನಾನು ವಿಧಿ ಇಲ್ಲದೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಸಹಕಾರಿ ಸಂಸ್ಥೆಗಳ ಕೆಲಸಗಳು ಹತೋಟಿ ಗೆಟ್ಟು ಕುಂಠಿತವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮೈಸೂರಿನಲ್ಲಿ ಸ್ವಜನ ಪಕ್ಷಪಾತ, ಬಡವರ ಶೋಷಣೆ, ಮತ್ತು ಗ್ರಾಹಕರ ಸಂಪುಗಳು

ಹೇಗೆ ಕೆಲಸ ಮಾಡುತ್ತಿದೆ. ಇಡೀ ದೇಶದಲ್ಲಿ ಈ ರೀತಿಯ ಅವ್ಯವಸ್ಥೆಗಳು ಕಾಣುವ ಪರಿಸ್ಥಿತಿ ಆಗಿದೆ. ಮೈಸೂರು ಕೇಂದ್ರ ಮಾರಾಟ ಸಹಕಾರ ಸಂಸ್ಥೆ ತಮ್ಮ ವ್ಯವಹಾರಗಳನ್ನು ನಡೆಸತಕ್ಕಂಥವರಿಗೆ ಅರ್ಥವಾಗುವುದಿಲ್ಲವೋ ಅಥವಾ ಅಲ್ಲಿನ ಡೈರೆಕ್ಟರ್ಸ್ ಮತ್ತು ಅಧ್ಯಕ್ಷರಿಗೆ ಈ ವ್ಯವಹಾರಗಳು ಗೊತ್ತಿದೆಯೋ ಗೊತ್ತಿಲ್ಲವೋ ಎಂದು ನನಗೆ ಅನುಮಾನವಾಗಿದೆ. ಸಹಕಾರ ಸಂಸ್ಥೆಗಳಲ್ಲಿ ಈ ರೀತಿ ದುರ್ವ್ಯಯವಾಗುವುದನ್ನು ತಪ್ಪಿಸುವ ಅಗತ್ಯತೆ ಇದೆ. ಈಗ ಇರತಕ್ಕಂಥ ಅಧಿನಿಯಮಗಳಲ್ಲಿ ಇದಕ್ಕೆ ಸಾಕಷ್ಟು ಅವಕಾಶಗಳು ಇಲ್ಲದಿದ್ದರೆ ತಿದ್ದುಪಡಿ ಮಾಡುವುದು ಒಳ್ಳೆಯದು. ಷೇರು ರೂಪದಲ್ಲಿ ಸ್ವಂತ ಜನರನ್ನೇ ಸುಲಿಗೆ ಮಾಡುವ ಸಮಾಜದ್ರೋಹಿಗಳು ಬೆಳೆಯಲು ಅವಕಾಶ ಮಾಡಿಕೊಟ್ಟರೆ ಪ್ರಜಾಪ್ರಭುತ್ವ ಎನ್ನುವುದು ನಿಜವಾದ ಪ್ರಜಾಪ್ರಭುತ್ವವಾಗುತ್ತದೆ. ಇದನ್ನು ನಿವಾರಣೆ ಮಾಡುವುದು ಕೇವಲ ಸರ್ಕಾರದ ಕರ್ತವ್ಯ ಮಾತ್ರವಲ್ಲ. ಶಾಸಕರ ಕರ್ತವ್ಯವೂ ಕೂಡ ಆಗಿದೆ. ಈ ಮಾನ್ಯ ಸಭೆಯ ಎಲ್ಲಾ ಸದಸ್ಯರು ಈ ಸಹಕಾರ ಸಂಸ್ಥೆಗಳಿಂದ ಹಾನಿಕಾರಕ ಪ್ರವೃತ್ತಿಗಳು ಏನು ಆಗುತ್ತಿವೆ ಅವನ್ನು ತಡೆಗಟ್ಟಬೇಕಾದ ಅತ್ಯವಶ್ಯಕ ಕ್ರಮವನ್ನು ತೆಗೆದುಕೊಳ್ಳುವುದರ ಕಡೆಗೆ ಗಮನಿಸಬೇಕು ಎಂದು ವಿನಂತಿ ಮಾಡಿಕೊಂಡು ಈ ನಿರ್ಣಯಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. [22]

ಹೀಗೆ ಬಂದೀಗೌಡರು ವಿಧಾನಪರಿಷತ್ ಸದಸ್ಯರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿ ದಿನಾಂಕ : 11-06-1970 ರಂದು ನಿವೃತ್ತರಾದರು.

ಅಡಿ ಟಿಪ್ಪಣಿಗಳು

1. ಸಂದರ್ಶನ, ಸಂಶೋಧಕನಿಂದ ದಿನಾಂಕ : 13/5/2012
2. ಸಿ.ಪಿ. ನಾಗರಾಜ , ಮೌನಸಾಧಕ ಡಾ.ಸಿ.ಬಂದೀಗೌಡ, ಪು.8
3. ಡಾ.ಪಿ.ಕೆ.ರಾಜಶೇಖರ (ಪ್ರ.ಸಂ.) ಮಣ್ಣಿನ ಹಣತೆ, ಪು.548,
4. ಡಾ.ಪಿ.ಕೆ.ರಾಜಶೇಖರ ಪೂರ್ವೋಕ್ತ ಪು. 548-549
5. ಸಿ.ಪಿ. ನಾಗರಾಜ , ಪೂರ್ವೋಕ್ತ ಪು.3
6. ಡಾ.ಪಿ.ಕೆ.ರಾಜಶೇಖರ ಪೂರ್ವೋಕ್ತ, ಪು.548,
7. ಸಿ.ಪಿ.ನಾಗರಾಜ, ಪೂರ್ವೋಕ್ತ ಪು. 12-13
8. ಸಂದರ್ಶನ, ಸಂಶೋಧಕನಿಂದ, ದಿನಾಂಕ : 13/5/2012
9. ಸಿ.ಪಿ.ನಾಗರಾಜ, ಪೂರ್ವೋಕ್ತ ಪು. 28-29
10. ಸಂದರ್ಶನ, ಸಂಶೋಧಕನಿಂದ, ದಿನಾಂಕ : 13/5/2012

11. ಮೈಸೂರು ದರ್ಶನ, ಸಂಪುಟ-1, ಪ್ರಸಾರಾಂಗ, ಕ.ರಾಮು.ವಿ, ಮೈಸೂರು 2011 ಪು.153-154

12. ಎರಡನೇ ಪ್ರಜಾ ಪ್ರತಿನಿಧಿ ಸಭೆಯ ನಡಾವಳಿಗಳು 29-05-1946 ಸಂಪುಟ 94

13. ಎರಡನೇ ಪ್ರಜಾ ಪ್ರತಿನಿಧಿ ಸಭೆಯ ನಡಾವಳಿಗಳು ದಿ: 7-10-1946 ಪು. 94

14. ಎರಡನೇ ಪ್ರಜಾ ಪ್ರತಿನಿಧಿಯ ನಡಾವಳಿಗಳು, 8ನೇಅಧಿವೇಶನ ದಿ:23/10/1948 ಪು.98

14ಎ. ಸಾಧ್ವಿ ಪತ್ರಿಕೆ ದಿನಾಂಕ : 08-11-1946

14ಬಿ. ಸಾಧ್ವಿ ಪತ್ರಿಕೆ ದಿನಾಂಕ : 08-11-1946

15. Mysore Legislative Council debates, 3rd July 1967

16. Mysore Legislative Council debates, 28th July 1967

17. Mysore Legislative Council debates, 2nd August 1967

18. Mysore Legislative Council debates, 5th September 1968 Vol.XXX VIII.

19. Mysore Legislative Council debates,6th September 1968 Vol.XXXVIII

20. Mysore Legislative Council debates, 21st January 1969

21. Mysore Legislative Council debates, 22nd January 1970 Vol.XLIII

22. Mysore Legislative Council debates , 2nd February (1970 Vol.XL III)

ಅಧ್ಯಾಯ : ಮೂರು

ಸ್ವಾತಂತ್ರ್ಯ ಹೋರಾಟಗಾರರಾಗಿ ಸಿ. ಬಂದೀಗೌಡರು,

ಬಂದೀಗೌಡರು ವಿದ್ಯಾರ್ಥಿಯಾಗಿದ್ದಾಗಲೇ ಗಾಂಧೀಜಿಯವರ ದರ್ಶನ ಭಾಗ್ಯ ಪಡೆದವರು. ಗಾಂಧೀಜಿಯವರ ಸತ್ಯ ಅಹಿಂಸೆ, ಸತ್ಯಾಗ್ರಹದಂತಹ ಅಸ್ತ್ರಗಳನ್ನು ಮೆಚ್ಚಿಕೊಂಡು ಅವರಂತೆ ಸರಳ ಜೀವನದ ಮೂಲಕ ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪರಿಸರವನ್ನು ಬದಲಾಯಿಸಬೇಕೆಂದು ಕನಸು ಕಂಡವರು. ಬ್ರಿಟೀಷರ ದಾಸ್ಯ ಪ್ರವೃತ್ತಿಯಿಂದ ಭಾರತವನ್ನು ಸ್ವತಂತ್ರಗೊಳಿಸಬೇಕೆಂದು ಬಯಸುತ್ತಿದ್ದರು. ಗಾಂಧೀಜಿಯ ಸರಳ ಜೀವನಕ್ಕೆ ಸೋತು ಖಾದಿ ವಸ್ತ್ರವನ್ನು ಧರಿಸುತ್ತಿದ್ದರು. ಅಲ್ಲದೇ ಗಾಂಧೀಜಿಯ ನಾಯಕತ್ವದಲ್ಲಿ ನಡೆಯುತ್ತಿದ್ದ ಹಲವು ಸ್ವಾತಂತ್ರ್ಯ ಚಳುವಳಿಯಲ್ಲಿ ಬಂದೀಗೌಡರು ಭಾಗವಹಿಸಿದ್ದಾರೆ. ಅಂತಹ ಚಳುವಳಿಗಳಲ್ಲಿ ಶಿವಪುರ ಧ್ವಜಾ ಸತ್ಯಾಗ್ರಹದಲ್ಲಿ ಸ್ವಯಂ ಸೇವಕರಾಗಿ, ಗಾಂಧೀಜಿ ನಾಯಕತ್ವದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಾರೆ.

ಶಿವಪುರ ಧ್ವಜಾಸತ್ಯಾಗ್ರಹ (1938)

1938 ರ ಏಪ್ರಿಲ್ ತಿಂಗಳ 10,11, ಮತ್ತು 12ನೇ ತಾರೀಖುಗಳಂದು ಮೈಸೂರು ಸಂಸ್ಥಾನದ ಮೈಸೂರು ಜಿಲ್ಲೆಗೆ ಸೇರಿದ ಮದ್ದೂರು ನಗರದ ಆಚೆಗೆ ಇದ್ದ ಇತಿಹಾಸ ಪ್ರಸಿದ್ದ ಶಿಂಷಾ ನದಿಯ ಬಲದಂಡೆಯ ಮೇಲಿನ ಶಿವಪುರ ಎಂಬ ಸಾಮಾನ್ಯ ಗ್ರಾಮವು ಇಡೀ ದೇಶದ ಸ್ವಾತಂತ್ರ್ಯ ಪ್ರೇಮಿಗಳ ಗಮನ ಸೆಳೆದಿತ್ತು. ಕಾರಣ ಆ ಮೂರು ದಿನಗಳಲ್ಲಿ ದಕ್ಷಿಣ ಭಾರತದಲ್ಲಿಯೇ ಮೊದಲ ಸಲ ಸ್ವಾತಂತ್ರ್ಯ ಹೋರಾಟದ ಸಂಗ್ರಾಮ ಆರ್ಥಾತ್ ರಾಷ್ಟ್ರಕೂಟವು ಅಲ್ಲಿ ನಡೆದದ್ದು.

ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನವನ್ನು ಶಿವಪುರದಲ್ಲಿ ನಡೆಸಲು ತೀರ್ಮಾನಿಸಿದ್ದುದರ ಪರಿಣಾಮವಾಗಿ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಅಂದಿನಿಂದಲೇ ಆರಂಭವಾಯಿತೆನ್ನಬಹುದು. ಮೈಸೂರಿನ ಸೀತಾವಿಲಾಸಛತ್ರದಲ್ಲಿ ಮೊದಲಿಗೆ ಮತ್ತು ಬೆಂಗಳೂರಿನಲ್ಲಿ ಎರಡನೆಯ ಬಾರಿಗೆ ಸಭೆ ನಡೆಸಿ ಆ ಸಭೆಯ ತೀರ್ಮಾನದನ್ವಯ ಈಗಾಗಲೇ ಉತ್ತರಭಾರತದ ಹರಿಹರಪುರದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಅಧಿವೇಶನದಂತೆ ಮೈಸೂರು ಸಂಸ್ಥಾನದಲ್ಲಿಯೂ ಸ್ವಾತಂತ್ರ್ಯ ಚಳುವಳಿಯ ಅಧಿವೇಶನ ನಡೆಸುವ ಮೂಲಕ ಸಂಸ್ಥಾನದಾದ್ಯಂತ ಸ್ವಾತಂತ್ರ್ಯದ ಕಿಚ್ಚನ್ನು ಜನಮಾನಸದಲ್ಲಿ ಹಚ್ಚಬೇಕೆಂದು ಅಂದುಕೊಂಡಿದ್ದ ಮುಖಂಡರುಗಳು ಹಲವಾರು ಸಭೆಗಳನ್ನು ನಡೆಸಿ, ಚಿಂತನ, ಮಂಥನ ನಡೆಸಿ ಕೊನೆಗೆ ಮದ್ದೂರಿನ ಹೆಚ್.ಕೆ.ವೀರಣ್ಣಗೌಡರು ಆ ವೇಳೆಗಾಗಲೇ ಸಂಸ್ಥಾನದಾದ್ಯಂತ ಸಂಘಟನೆ, ಚಳುವಳಿಗಳ ಕಾರಣದಿಂದಾಗಿ ಹೆಸರು ಮಾಡಿದ್ದು, ಧೈರ್ಯವಾಗಿ ಸಭೆಯು

ಒಮ್ಮತದಿಂದ ನಿರ್ಧರಿಸಿದರೆ ತಾವು ಮದ್ದೂರು ಬಳಿಯ ಶಿವಪುರ ಗ್ರಾಮದಲ್ಲಿ ಆ ಪವಿತ್ರ ಸಂಗ್ರಾಮವನ್ನು ನಡೆಸುವುದಾಗಿ ಘೋಷಿಸಿದರು. ಈ ಕಾರಣದಿಂದಾಗಿ 1938 ರಲ್ಲಿನ ಏಪ್ರಿಲ್ ತಿಂಗಳ 10-11-2012 ರ ಮೂರು ದಿನಗಳು ರಾಷ್ಟ್ರಕೂಟ ನಡೆಯಿತು.[1]

ಪಿ.ತಿರುಮಲೇಗೌಡರ 10 ಎಕರೆ ತರೀ ಜಮೀನಿನಲ್ಲಿ ಧ್ವಜಾರೋಹರಣ ಸಭೆ, ಪ್ರತಿನಿಧಿಗಳ ಬಿಡಾರ ನಿರ್ಮಿಸಲಾಯಿತು. ಪಿ.ತಿರುಮಲೇಗೌಡರ ಎರಡು ಬೃಹತ್ ಮನೆಗಳಲ್ಲಿ ಸ್ವಾಗತಕಾರ ಮತ್ತು ಸ್ವಯಂ ಸೇವಕರುಗಳ ಬಿಡಾರ ಏರ್ಪಡಿಸಿ ಸರ್ಕಾರದ ಯಾವುದೇ ತೊಂದರೆಯಿಲ್ಲದೆ ರಾಷ್ಟ್ರಕೂಟ ಸೇರಲು ಸರ್ವಸಿದ್ದತೆ ಮಾಡಲಾಗಿತ್ತು. ರಾಷ್ಟ್ರಕೂಟದ ಸ್ವಾಗತ ಸಮತಿಯನ್ನು ರಚಿಸಲಾಯಿತು. ಸಾಹುಕಾರ್ ಚನ್ನಯ್ಯ ಅಧ್ಯಕ್ಷರಾಗಿ, ಪಿ.ತಿರುಮಲೇಗೌಡ ಹೆಚ್.ಸಿ.ದಾಸಪ್ಪ, ಎಸ್.ರಂಗರಾಮಯ್ಯ ಅವರುಗಳು ಉಪಾಧ್ಯಕ್ಷರಾಗಿ, ಕೊಪ್ಪದ ಜೋಗೀಗೌಡರು ಖಜಾಂಚಿಯಾಗಿ, ಹೆಚ್.ಕೆ.ವೀರಣ್ಣಗೌಡರು ಕಾರ್ಯದರ್ಶಿಯಾಗಿ ಆಯ್ಕೆಯಾದರು. ಎಂ.ಎನ್.ಜೋಯಿಸ್ ಜಿ.ಓ.ಸಿ. ಸ್ವಯಂ ಸೇವಕ ಪಡೆಯವರಾಗಿ ನೇಮಕಗೊಂಡರು. 10-4-1938 ರಿಂದ 4ದಿನಗಳ ಕಾಲ ರಾಷ್ಟ್ರಕೂಟದ ಕಾರ್ಯಕಲಾಪಗಳನ್ನು ನಡೆಸಲು ಸ್ವಾಗತ ಸಮಿತಿ ತೀರ್ಮಾನಿಸಿ ಕಾರ್ಯಕ್ರಮಗಳ ವಿವರಗಳನ್ನು ಕನ್ನಡ ದಿನಪತ್ರಿಕೆಗಳು ಮತ್ತು ಮದ್ರಾಸಿನಿಂದ ಪ್ರಕಟವಾಗುತ್ತಿದ್ದ ಇಂಗ್ಲೀಷ್ ಪತ್ರಿಕೆಗಳು ತಮ್ಮ ಮುಖಪುಟಗಳಲ್ಲಿ ಆಕರ್ಷಣಿಯವಾದ ಕಾಲಂಗಳಲ್ಲಿ ಪ್ರಕಟಿಸಿದವು.

ಟಿ.ಸಿದ್ದಲಿಂಗಯ್ಯನವರು ಮೈಸೂರು ಸಂಸ್ಥಾನದ ಮೊದಲನೆ ರಾಷ್ಟ್ರಕೂಟದ ಅಧ್ಯಕ್ಷರಾಗಿ ಚುನಾಯಿತರಾದರು. ಸಿದ್ದಲಿಂಗಯ್ಯನವರ ಮೆರವಣಿಗೆ 1938ನೇ ಇಸವಿ ಏಪ್ರಿಲ್ 8ನೇ ತಾರೀಖು ಅತಿ ವಿಜೃಂಭಣೆಯಿಂದ ನಡೆಯಿತು. ಒಂದು ದಿವಸ ಮುಂಚಿತವಾಗಿಯೇ ಶಿವಪುರ ಗದ್ದೆ ಬಯಲು ಗಾಂಧೀ ಟೋಪಿಧಾರಿಗಳಾದ ಜನರಿಂದ ತುಂಬಿ ತುಳುಕುತ್ತಿತ್ತು. ಸರ್ಕಾರವು ಬಹಳ ಎಚ್ಚರಿಕೆಯಿಂದ ಈ ರಾಷ್ಟ್ರಕೂಟವನ್ನು ನೋವಿಲ್ಲದೆ ವಿಫಲಗೊಳಿಸಬೇಕೆಂದು ಹೊಂಚು ಹಾಕುತ್ತಿತ್ತು. ಟಿ.ಸಿದ್ದಲಿಂಗಯ್ಯನವರ ಮೆರವಣಿಗೆಯು ಮದ್ದೂರು ಪಶ್ಚಿಮದ್ವಾರದಿಂದ ಹೊರಟು ಸುಮಾರು ಒಂದೂವರೆ ಮೈಲಿಉದ್ದಕ್ಕೂ ತಳಿರು ತೋರಣ, ತ್ರಿವರ್ಣಧ್ವಜಗಳಿಂದ ನಾನಾ ಬಣ್ಣದ ವಿದ್ಯುತ್ ದೀಪಗಳ ಸರಮಾಲೆಯಿಂದ ಮೆರವಣಿಗೆಯ ದಾರಿ ಇಂದ್ರಲೋಕವೋ ಎನ್ನುವಂತೆ ಕಣ್ಮನಗಳಿಗೆ ಆಹ್ಲಾದವನ್ನುಂಟು ಮಾಡುವಂತಿತ್ತು.[2]

ಆ ವೇಳೆಗಾಗಲೇ ಜಿಲ್ಲಾ ಮ್ಯಾಜಿಸ್ಟ್ರೇಟರ್‌ರಾದ ಜಿ.ಎಂ. ಮೇಕ್ರಿ ಕಾನೂನಿನ ರೀತ್ಯಾ ಪೋಲೀಸ್ ಕಾಯ್ದೆಯ 39ನೇ ನಿಯಮದಂತೆ ಆಜ್ಞೆಯನ್ನು ಜಾರಿ ಮಾಡಿ ಶಿವಪುರ ಸುತ್ತ ಮುತ್ತಲಿನ 5 ಮೈಲಿ ಪ್ರದೇಶದಲ್ಲಿ ಎಲ್ಲಿಯೂ ಕಾಂಗ್ರೆಸ್ ತ್ರಿವರ್ಣ ಧ್ವಜವನ್ನು ಹಾರಿಸಬಾರದು. ಮೈಸೂರು ಮಹಾರಾಜರ ಧ್ವಜವುಳ್ಳ ಅಧಿಪತ್ಯಕ್ಕೆ ವಿರುದ್ದವಾಗಿ ನಡೆಯಬಾರದು ಎಂದು ಆಜ್ಞೆಯಲ್ಲಿ ತಿಳಿಸಿ, ಈ ಆಜ್ಞೆಯು 1938 ನೇ ಏಪ್ರಿಲ್ 10 ರಿಂದ ಒಂದು ತಿಂಗಳ ಕಾಲ ಜಾರಿಯಲ್ಲಿರುವುದೆಂದು ಢಂಗುರದ ಮೂಲಕ

ಸಾರಿಸಲಾಯಿತು. ವೈಯಕ್ತಿಕವಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಸಾಹುಕಾರ ಚನ್ನಯ್ಯ ಮತ್ತು ಇತರೆ ಸದಸ್ಯರುಗಳಿಗೆ ಈ ಅಜ್ಞೆಯನ್ನು ಜಾರಿ ಮಾಡಲಾಯಿತು. ಸರ್ಕಾರ ಜಾರಿ ಮಾಡಿರುವ ಪ್ರತಿಬಂಧಕಾಜ್ಞೆಯನ್ನು ಧಿಕ್ಕರಿಸಿ ರಾಷ್ಟ್ರಧ್ವಜವು ಕಾಂಗ್ರೆಸ್ಸಿನ ಅವಿಭಾಜ್ಯ ಅಂಗವಾಗಿರುವುದರಿಂದ ಏನೇ ಅಡ್ಡಿ ಆತಂಕಗಳು ಬಂದರು ನಿಗದಿತ ವೇಳೆಗೆ ಧ್ವಜಾರೋಹಣ ಮಾಡಬೇಕೆಂದು ತೀರ್ಮಾನಕ್ಕೆ ಬಂದಿತು. ಜಿಲ್ಲಾಮ್ಯಾಜಿಸ್ಟ್ರೇಟರ ನಿಷೇಧಾಜ್ಞೆಯನ್ನು ಉಲ್ಲಂಘಿಸಬೇಕೆಂದು ಹಿಂದಿನ ರಾತ್ರಿ ಮುಖಂಡರು ಮಾಡಿದ್ದ ತೀರ್ಮಾನಕ್ಕನುಸಾರವಾಗಿ 1938ನೇ ಏಪ್ರಿಲ್ 9ನೇ ತಾರೀಖು ಬೆಳಿಗ್ಗೆ 8.15 ಗಂಟೆಗೆ ಧ್ವಜ ವಂದನೆ ಮತ್ತು ಆರೋಹಣಕ್ಕೆ ಸರ್ವಸಿದ್ಧತೆಗಳೂ ನಡೆದಿದ್ದುವು. ಅಧ್ಯಕ್ಷರು ಒಂದು ಪುಟ್ಟ ಭಾಷಣ ಮಾಡಿ ಜನತೆಯನ್ನು ಹತ್ತಿಕ್ಕುವಂತಹ ಸರ್ಕಾರದ ನಿಷೇದಾಜ್ಞೆಯನ್ನು ತಾವು ಉಲ್ಲಂಘಿಸುವುದಾಗಿ ಹೇಳಿ ಧ್ವಜಾರೋಹಣ ಮಾಡಿದರು. ಕೂಡಲೇ ಪೋಲೀಸ್ ಅಧಿಕಾರಿಗಳು ಆಜ್ಞೋಲ್ಲಂಘನೆಗಾಗಿ ಅಧ್ಯಕ್ಷರನ್ನು ದಸ್ತಗಿರಿ ಮಾಡಿದರು.[3]

ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಸ್ವಯಂ ಸೇವಕರಾಗಿ ಸಿ.ಬಂದೀಗೌಡರು :-

ವಿದ್ಯಾರ್ಥಿಯಾಗಿದ್ದಾಗಲೇ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿದ್ದ ಸಿ.ಬಂದೀಗೌಡರು ಸ್ವಾತಂತ್ರ್ಯ ಚಳುವಳಿಯ ಹಲವು ಹರತಾಳ, ಮೆರವಣಿಗೆಗಳಲ್ಲಿ ಭಾಗವಹಿಸಿದ್ದರು. ಪ್ರಾಪ್ತ ವಯಸ್ಕರಾದಾಗ ಅಖಿಲ ಭಾರತ ಕಾಂಗ್ರೆಸ್ ಸದಸ್ಯರಾಗಿ, ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಹೋರಾಟ ಪ್ರಾರಂಭಿಸಿದ್ದ ಮೈಸೂರು ಕಾಂಗ್ರೆಸ್‌ನವರು 1938 ರಲ್ಲಿ ನಡೆಸಿದ ಶಿವಪುರ ರಾಷ್ಟ್ರಕೂಟದಲ್ಲಿ ಎಂ.ಎನ್.ಜೋಯಿಸ್ ರವರ ಸ್ವಯಂ ಸೇವಕ ಪಡೆಯಲ್ಲಿ ಶಿಸ್ತಿನ ಸಿಪಾಯಿಯಂತೆ ಭಾಗವಹಿಸಿದ್ದರು. ಆ ಅಧಿವೇಶನಕ್ಕೆ ಅವರ ತಂದೆ ಚಿಕ್ಕಣ್ಣನವರು ಬಂದಿದ್ದು, ಅದರ ಯಶಸ್ಸನ್ನು ಕಂಡು ಸಂತೋಷಪಟ್ಟಿದ್ದರು ಎಂದು ಬಂದೀಗೌಡರು ತಮ್ಮ ನೆನಪಿನ ಸುರುಳಿಯನ್ನು ವಿವರಿಸುತ್ತಾರೆ.[4] ಈ ರಾಷ್ಟ್ರಕೂಟದಲ್ಲಿ ಭಾಗವಹಿಸಿದ್ದ ಎಲ್ಲಾ ರಾಷ್ಟ್ರ ನಾಯಕರುಗಳ ಉದ್ರೇಕವಾದ ಭಾಷಣಗಳು ಇವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದವು. ಶಿವಪುರ ಧ್ವಜಾರೋಹಣದ ಮುಂದಾಳತ್ವ ವಹಿಸಿದ್ದ ಜಿಲ್ಲೆಯ ನಾಯಕರುಗಳಾದ ಎಸ್. ಚನ್ನಯ್ಯ ಮತ್ತು ವೀರಣ್ಣಗೌಡರ ಸೇವಾಮನೋಭಾವ ಬಂದೀಗೌಡರ ಮೇಲೆ ಪರಿಣಾಮವನ್ನುಂಟು ಮಾಡಿತು. ತಾವೂ ಅವರಂತೆ ಆಗಬೇಕೆಂಬ ಹಂಬಲ ಅವರಲ್ಲೂ ಮೂಡಿತು. ತಾನೂ ರಾಷ್ಟ್ರದ ಈ ಯೋಜನಾ ಯಜ್ಞದಲ್ಲಿ ಪಾಲ್ಗೊಳ್ಳಬೇಕೆಂಬ ದೃಢ ನಿರ್ಧಾರ ಅವರಲ್ಲಿ ಮೊಳಕೆ ಯೊಡೆಯಿತು.

ರಾಷ್ಟ್ರಕೂಟದ ಹಲವು ನಾಯಕರುಗಳ ಬಂಧನವಾದ ನಂತರ ಏಪ್ರಿಲ್ 11 ರಂದು ಶಿವಪುರ ಧ್ವಜಾ ಸತ್ಯಾಗ್ರಹದ ಹಲವು ನಾಯಕರು ವಿಷಯ ನಿಯಮಾಕ ಸಮಿತಿ ಅಂಗೀಕರಿಸಿ ಸಿದ್ದಗೊಳಿಸಿದ್ದ 3 ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿತು. ಜವಾಬ್ದಾರಿ

ಸರ್ಕಾರ ಸ್ಥಾಪಿಸಬೇಕು. ಮೈಸೂರು ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವೆಂದು ಅಂಗೀಕರಿಸಬೇಕು ಹಾಗೂ ಸುಧಾರಣಾ ಸಮಿತಿಯು ಜವಾಬ್ದಾರೀ ಸರ್ಕಾರದ ವಿಷಯ ಪರಿಶೀಲಿಸಿ ಶಿಫಾರಸ್ಸು ಮಾಡಲು ಅವಕಾಶವಿರಬೇಕು.[5]

ಹೀಗೆ ಶಿವಪುರ ಅಧಿವೇಶನದಿಂದ ಸ್ಫೂರ್ತಿ ಪಡೆದ ಸತ್ಯಾಗ್ರಹಿಗಳು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಧ್ವಜಾರೋಹರಣ ಮಾಡಿ ಸರ್ವತ್ಯಾಗಕ್ಕೂ ತಯಾರಾಗಿದ್ದರು. ಶಿವಪುರ ಅಧೀವೇಶನವು ಇದರಿಂದ ಜಯಪ್ರದವಾಯಿತು.

ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಸಿ.ಬಂದೀಗೌಡರು.

ಭಾರತ ಬಿಟ್ಟು ತೊಲಗಿ ಚಳುವಳಿಯೇ ನಮಗೆಲ್ಲ ತಿಳಿದಂತೆ ಭಾರತ ಸ್ವತಂತ್ರಗೊಂಡಿದ್ದು, ಸಾವಿರಾರು ಜನರ ಬಲಿದಾನದಿಂದ, ರಕ್ತ ದರ್ಪಣೆಯಿಂದ ಹಾಗೂ ನೂರಾರು ಚಳುವಳಿಗಳಿಂದ ಅಂದಿನ ಪರಿಸ್ಥಿತಿ, ಸ್ಥಳೀಯ ಸನ್ನಿವೇಶ, ಬ್ರಿಟೀಷರು ಭಾರತೀಯರೊಂದಿಗೆ ವರ್ತಿಸಿದ ರೀತಿ, ಭಾರತೀಯರ ಮೇಲೆ ಕೈಗೊಂಡ ನಿರ್ಣಯಗಳ ಆಧಾರದ ಮೇಲೆ ಹಲವಾರು ರೀತಿಯ ಚಳುವಳಿಗಳು ಹುಟ್ಟಿಕೊಂಡವು. ಈ ಚಳುವಳಿಗಳು ನಮ್ಮ ದೇಶದ ಹಲವಾರು ನಾಯಕರುಗಳಿಂದ ಹುಟ್ಟಿಕೊಳ್ಳುತ್ತಿದ್ದವು. ನಾಯಕರುಗಳು ಚಳುವಳಿಯ ರೂಪ-ರೇಷೆ. ಅದರಲ್ಲಿ ಜನರು ಯಾವ ರೀತಿಯಾಗಿ ಪಾಲ್ಗೊಳ್ಳಬೇಕು. ಈ ಚಳುವಳಿಯಿಂದಾಗಿ ಬ್ರಿಟೀಷ್ ಸರ್ಕಾರದ ಮೇಲೆ ಆಗುವ ಪರಿಣಾಮಗಳು ಏನು? ಎಂಬುದಾಗಿ ಮೊದಲೇ ಊಹಿಸಿಕೊಂಡು ಚಳುವಳಿಯನ್ನು ಒಂದು ನಿರ್ದಿಷ್ಟ ಗುರಿ, ಹಂತ ತಲುಪುವುದಕ್ಕಾಗಿ ಪ್ರಾರಂಭಿಸುತ್ತಿದ್ದರು. ಇಂತಹ ಚಳುವಳಿಗಳಲ್ಲಿ ಅತ್ಯಂತ ಪ್ರಖ್ಯಾತವಾದದ್ದು. ಜಗತ್ತೇ ನಿಬ್ಬೆರಗಾಗಿ ಭಾರತದೆಡೆಗೆ ಹೊರಳುವಂತೆ ಮಾಡಿದ್ದು, ಭಾರತೀಯರ ಏಕತೆಯ ಶಕ್ತಿ ಪ್ರದರ್ಶನವಾದ ಚಳುವಳಿ ಎಂದರೆ 1942 ರ ಭಾರತ ಬಿಟ್ಟು ತೊಲಗಿ ಚಳುವಳಿ ಇದನ್ನು ಕ್ವಿಟ್ ಇಂಡಿಯಾ ಅಥವಾ ಚಲೇ ಜಾವ್ ಚಳುವಳಿ ಎಂಬ ಹೆಸರುಗಳಿಂದ ಕರೆಯಲಾಗಿದೆ.

ಹಿನ್ನಲೆ :

ಇಲ್ಲಿಯವರೆಗೆ ವಿಶ್ವದಲ್ಲಿ ಎರಡು ಮಹಾಯುದ್ಧಗಳು ಸಂಭವಿಸಿವೆ. ಇದರಲ್ಲಿ ಎರಡನೇ ಮಹಾಯುದ್ಧವಂತೂ ಭೀಕರ ಸನ್ನಿವೇಶವನ್ನೇ ಹುಟ್ಟಿಹಾಕಿತ್ತು. ಪ್ರಪಂಚವೇ ಎರಡು ಬಣಗಳಾಗಿ ಪಾಲ್ಗೊಂಡ ಮಹಾನ್ ಯುದ್ಧವದು. ಬ್ರಿಟೀನ್ ಸಹ ಇದರಲ್ಲಿ ಪಾಲ್ಗೊಂಡಿತ್ತು. ಬ್ರೀಟನ್ ದೇಶಕ್ಕೆ ಹಲವಾರು ದೇಶಗಳ ಬೆಂಬಲವೂ ಸಹ ಇತ್ತು. ಆದರೆ ಬ್ರೀಟೀಷ್ ಸರ್ಕಾರಕ್ಕೆ ಭಾರತೀಯರು ತಮ್ಮ ಪರವಾಗಿ ಪಾಲ್ಗೊಳ್ಳಲಿ ಎಂಬುದು ಅವರ ಆಸೆಯಾಗಿತ್ತು. ಹೀಗಾಗಿ ಅವರು ಭಾರತೀಯರ ಪರವಾನಿಗೆಯನ್ನು, ಒಪ್ಪಿಗೆಯನ್ನು ಕೇಳದೇ ಭಾರತೀಯರು ಬ್ರಿಟೀಷರ ಪರವಾಗಿ ಈ ಮಹಾಯುದ್ಧದಲ್ಲಿ ಪಾಲ್ಗೊಳ್ಳುವರು ಎಂದು ಘೋಷಣೆ ಮಾಡಿತು. ಇದು ಭಾರತದ ರಾಷ್ಟ್ರೀಯ ಕಾಂಗ್ರೆಸ್ ನಾಯಕರಿಗೆ

ಇಷ್ಟವಾಗಲಿಲ್ಲ ಕಾರಣ ಈ ಮಹಾಯುದ್ಧ ಮುಗಿಯುವ ಮೊದಲೇ ಭಾರತ ಸ್ವತಂತ್ರ ಹೊಂದಬೇಕು ಎಂಬುದು ಅವರ ಆಸೆಯಾಗಿತ್ತು. ಅದಕ್ಕಾಗಿ ಹಲವಾರು ಪ್ರಯತ್ನಗಳು ನಡೆದವು. ಅವುಗಳಲ್ಲಿ ಬ್ರಿಟೀಷರೊಂದಿಗೆ ಹಲವಾರು ಚರ್ಚೆ ಸಂಧಾನ, ಪತ್ರ ವ್ಯವಹಾರ ನಡೆದರೂ ಅವೆಲ್ಲಾ ನಿಷ್ಪ್ರಯೋಜಕವಾಗಿದ್ದವು. ಹೀಗಾಗಿ ಅಂತಿಮ ಹೋರಾಟ ಅತ್ಯಗತ್ಯವಾಗಿತ್ತು. ಅದಕ್ಕಾಗಿ ವಿಭಿನ್ನವಾದ ಒಂದು ಚಳುವಳಿ ರೂಪಿಸಲೇಬೇಕಾಗಿತ್ತು. ಇದಕ್ಕಾಗಿ ಕಾಲವೇ ಒಂದು ವೇದಿಕೆಯನ್ನು 1942 ರಲ್ಲಿ ರೂಪಿಸಿಕೊಟ್ಟಿತು.

ಅಂದಿನ ಗ್ರೇಟ್ ಬ್ರಿಟನ್ನಿನ ಪ್ರಧಾನ ಮಂತ್ರಿ ಚರ್ಚಿಲ್ ರವರು ಸರ್ಕಾರದ ಪ್ರಕಟಣೆ ಒಂದು ಪ್ರತಿಯನ್ನು ಸರ್ ಸ್ಟಾಫರ್ಡ್ ಕ್ರಿಪ್ಸ್‌ನೊಂದಿಗೆ ಭಾರತಕ್ಕೆ ಕಳುಹಿಸಿಕೊಟ್ಟರು. ಇದು ಕ್ರಿಪ್ಸ್ ಆಯೋಗವೆಂದೇ ಪ್ರಸಿದ್ದಿಯಾಗಿದೆ. ಇದು ಭಾರತವನ್ನೇ ಛಿದ್ರ ಛಿದ್ರ ಮಾಡುವ ಪ್ರತಿಯಾಗಿತ್ತು. ಏಕ ಭಾರತವನ್ನು ಅಪೇಕ್ಷೆ ಪಡುವ ನಾಯಕರಿಗೆ ಒಪ್ಪಿಗೆಯಾಗಲಿಲ್ಲ. ಮಾತುಕತೆ ವಿಫಲವಾಯಿತು. ಮಹಾತ್ಮ ಗಾಂಧೀಜಿಯವರು ಎಷ್ಟೇ ಪ್ರಯತ್ನಪಟ್ಟರೂ ಅಂದಿನ ಭಾರತದ ವೈಸರಾಯ ಲಿನ್ ಲಿತ್ ಗೋ ಬಿಗಿಧೋರಣೆಯನ್ನು ಪಾಲಿಸಿದ ಯಾರನ್ನೂ ಸಂಧಾನಕ್ಕೆ ಆಹ್ವಾನ ಮಾಡಲೇ ಇಲ್ಲ. ಇದೇ ವೇಳೆ ಅತ್ತ ಜಪಾನ್ ಭಾರತದತ್ತ ದಂಡೆತ್ತಿ ಬರುತ್ತಿತ್ತು. ಬ್ರೀಟೀಷರಿಗೆ ಭಾರತೀಯರು ಸ್ವಾತಂತ್ರ್ಯ ಕೊಡುವ ಬಗ್ಗೆ ಯಾವುದೇ ನಿರ್ಣಯವನ್ನು ಪ್ರಕಟಿಸಲೇ ಇಲ್ಲ. 2ನೇ ಮಹಾಯುದ್ದದ ಕಾವು ಹೆಚ್ಚಾಗತೊಡಗಿತ್ತು. ಇತ್ತ ಭಾರತದಲ್ಲಿ ಭಾರತಕ್ಕೆ ಸ್ವಾತಂತ್ರ್ಯದ ಅವಶ್ಯಕತೆಯ ಅರಿವು ಎಲ್ಲೆಡೆ ಕಾಳ್ಗಿಚ್ಚಿನಂತೆ ಹರಡತೊಡಗಿತ್ತು. ಬ್ರಿಟೀಷರ ವಿರುದ್ಧ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಲು ನಿರ್ಣಯಿಸಲಾಯಿತು. ಮಹಾತ್ಮಾಗಾಂಧೀಜಿ ಯವರು ಇದರ ನೇತೃತ್ವವನ್ನು ವಹಿಸಲು ನಿರ್ಧರಿಸಿತು.

1942 ರ ಆಗಸ್ಟ್‌ರಲ್ಲಿ ಅಂದಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಮುಂಬಯಿಯಲ್ಲಿ ಸೇರಿತು. ಅಂದು ಆಗಸ್ಟ 8 ರ ಮಧ್ಯರಾತ್ರಿ ಗಾಂಧೀಜಿಯವರು ಅಲ್ಲಿ ಸೇರಿದ ಪ್ರತಿನಿಧಿಗಳನ್ನು ಉದ್ದೇಶಿಸಿ ಈ ರೀತಿ ಹೇಳಿದರು. “ನಾವು ಬ್ರಿಟೀಷರ ಈ ಕೆಳಗಿನ ಗುಲಾಮರಲ್ಲ. ನಾವೆಲ್ಲ ಸ್ವಾತಂತ್ರರು ಎಂಬುದನ್ನು ಅರಿತು ಕೊಳ್ಳಬೇಕು" ಹಾಗೂ ಅದರಂತೆ ನಾವು ನಡೆದುಕೊಳ್ಳಬೇಕು” ಎಂಬುದಾಗಿತ್ತು.

ಗಾಂಧೀಜಿಯವರ ಈ ಹೇಳಿಕೆಯನ್ನು ವಿವರವಾಗಿ ನೋಡಿದರೆ ಭಾರತೀಯರು ಸ್ವಾತಂತ್ರರಾಗಬೇಕು ನಮ್ಮನ್ನು ಅಗುತ್ತಿರುವ ಬ್ರಿಟೀಷರು ನಮ್ಮ ದೇಶದಿಂದ ಕಾಲು ಕೀಳಬೇಕು ಅದಕ್ಕಾಗಿ ಭಾರತೀಯರು ಸಿದ್ದರಾಗಬೇಕು. ಅವರನ್ನು ದೇಶದಿಂದ ಹೊರದಬ್ಬಬೇಕು. ಒಟ್ಟಾರೆಯಾಗಿ ಭಾರತ ಬಿಟ್ಟು ಬ್ರೀಟೀಷರು ತೊಲಗಬೇಕು ಎಂಬುದು ಅಲ್ಲಿ ಸೇರಿದ ಪ್ರತಿನಿಧಿಗಳಿಗೆ ಮನದಟ್ಟಾಗಿತ್ತು. ದೇಶಕ್ಕಾಗಿ ಹೋರಾಡಬೇಕು. ಏನಾದರೂ ಮಾಡಬೇಕು ಇಲ್ಲವೇ ಮಡಿಯಬೇಕು. ಇಷ್ಟು ಆದ ಮೇಲೆ ಎಲ್ಲರೂ ನಿದ್ರೆಗೆ ಜಾರಿದರು. ನಿದ್ರೆ ಸಂಪೂರ್ಣವಾಗಿರಲಿಲ್ಲ. ಸೂರ್ಯೋದಯಕ್ಕೂ ಮುನ್ನ ಬ್ರೀಟೀಷರು ಆ ಸ್ಥಳಕ್ಕೆ

ಆಗಮಿಸಿ ಅಲ್ಲಿದ್ದ ಗಾಂಧೀಜಿ, ನೆಹರೂ, ಸರೋಜಿನಿನಾಯ್ಡು, ಗಾಂಧೀಜಿ ಯವರನ್ನು ಪೂನಾ ಬಳಿಯ ಯರವಾಡದ ಆಗಾಖಾನರ ಅರಮನೆಯಲ್ಲಿ ಗಾಂಧೀಜಿಯವರನ್ನು ಬಂಧಿಯಾಗಿಟ್ಟರು. ಜೊತೆಗೆ ಕಸ್ತೂರಬಾರವರನ್ನು ಬಂಧಿಸಿದರು.

ಮರುದಿನ ಅಂದರೆ ಆಗಸ್ಟ್-9, 1942 ಒಂದು ಚಾರಿತ್ರಿಕ ದಿನವಾಗಿ ರೂಪುಗೊಂಡಿತು. ಅಂದು ಹಿಂದಿನ ರಾತ್ರಿ ನಾಯಕರು ಘೋಷಣೆ ಮಾಡಿದ ಪಾತ್ರಗಳೇ ಸುದ್ದಿ ಪತ್ರಿಕೆಗಳಲ್ಲಿ ತಲೆಬರಹಗಳಾಗಿ ಸ್ವಾತಂತ್ಯ ಹೋರಾಟಗಾರರಿಗೆ ಮಹಾನ್ ಅಸ್ತ್ರಗಳಾಗಿ ಸ್ಪೂರ್ತಿಗೊಳಿಸಿದವು. ಅವು ಬ್ರಿಟೀಷರಿಗೆ "ಚಲೇಜಾವ್", "Quit India" "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ಎಂಬುದಾದರೆ ಭಾರತೀಯರಿಗೆ "Do or Die", ಕರೋ ಯಾ ಮರೋ "ಮಾಡು ಇಲ್ಲವೇ ಮಡಿ" ಎಂಬ ಮಹಾನ್ ಮಂತ್ರಗಳು ದೊರಕಿದವು. ಇದರೊಂದಿಗೆ ರಾಷ್ಟ್ರ ನಾಯಕರನ್ನು ಸೆರೆಮನೆಯಲ್ಲಿ ಇಟ್ಟಿರುವ ಸುದ್ದಿಗಳು ಪ್ರಕಟಗೊಂಡವು.[6] ಈ ಸುದ್ದಿಗಳು ಭಾರತೀಯರನ್ನು ಬಡಿದೆಬ್ಬಿಸಿದವು ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಹೆಸರಾದ ಬ್ರಿಟೀಷರ ಸರ್ಕಾರ ಗಡ ಗಡ ನಡುಗಿತು. ಗಾಂಧೀಜಿಯವರ ಸತ್ಯಾಗ್ರಹ ದೇಶದ್ಯಾಂತ ಅಸಹಕಾರ ಚಳುವಳಿಯಾಗಿ ಮಾರ್ಪಟ್ಟಿತ್ತು.

ಈ ಚಳುವಳಿಯು ದೇಶಾದಾದ್ಯಂತ ವ್ಯಾಪಿಸಿತು. ಪ್ರತಿಯೊಬ್ಬ ಭಾರತ ವಾಸಿಗಳು. ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಲು ಕಂಕಣಬದ್ದರಾದರು. ಹಲವಾರು ಜನರು ತಮ್ಮ ತಮ್ಮ ವೃತ್ತಿಯನ್ನು ತ್ಯಜಿಸಿದರು. ವೈದ್ಯರು, ವಕೀಲರು, ಶಿಕ್ಷಕರು, ತಮ್ಮ ವೃತ್ತಿ ಬಿಟ್ಟು ಚಳುವಳಿಗೆ ಧುಮುಕಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಮುಚ್ಚಿ ತಮ್ಮ ವಿದ್ಯಾಭ್ಯಾಸವನ್ನು ಬಿಟ್ಟು ಸ್ವಾತಂತ್ರ್ಯ ಚಳುವಳಿಗೆ ಇಳಿದರು. ಗೃಹಿಣಿಯರು, ಮಕ್ಕಳು, ವೃದ್ದರೂ ಸಹ ದೇಶದ ತುಂಬೆಲ್ಲಾ ನಡೆದ ಈ ಚಳುವಳಿಯಲ್ಲಿ ಭಾಗವಹಿಸಿದರು.

ಚಲೇಜಾವ್ ಚಳುವಳಿಯಲ್ಲಿ ಸಿ.ಬಂದೀಗೌಡರು.

ಚಲೇ ಜಾವ್ ಚಳುವಳಿಯು ಕರ್ನಾಟಕದಲ್ಲೂ ವ್ಯಾಪಿಸಿತು. ಎಲ್ಲರೂ ತಮ್ಮದೇ ಅದ ರೀತಿಯಲ್ಲಿ ಚಳುವಳಿಯಲ್ಲಿ ಪಾಲ್ಗೊಂಡರು. ಪೋಲೀಸ್ ಠಾಣೆ, ರೈಲ್ವೇ ಸ್ಟೇಷನ್‌ಗಳಂತೆ ಹಲವಾರು ಸರ್ಕಾರಿ ಕಟ್ಟಡಗಳು ಸುಡಲ್ಪಟ್ಟವು. ಟೆಲಿಗ್ರಾಮ್ ತಂತಿಗಳನ್ನು ಕಿತ್ತು ಹಾಕಿದರು. ರೈಲು ಕಂಬಿಗಳನ್ನು ನಾಶ ಮಾಡಿದರು. ಅನೇಕ ಬ್ರಿಟೀಷ್ ಅಧಿಕಾರಿಗಳು ಭಾರತೀಯರಿಂದ ಹಿಂಸೆಗೆ ಒಳಗಾದರು. ಇವೆಲ್ಲವುದರ ಪರಿಣಾಮವಾಗಿ ಬ್ರಿಟೀಷ್ ಅಧಿಕಾರಿಗಳು ಭಾರತೀಯರನ್ನು ಬಂಧಿಸತೊಡಗಿದರು. ಬಂಧಿಸಿ ಜೈಲಿಗೆ ಹಾಕತೊಡಗಿದರು. ಜೈಲುಗಳೆಲ್ಲ ಸ್ವಾತಂತ್ರ್ಯ ಹೋರಾಟಗಾರರಿಂದ ತುಂಬಿ ತುಳುಕತೊಡಗಿದವು.

ಚಳುವಳಿಯು ಕರ್ನಾಟಕದಲ್ಲೂ ಹೆಚ್ಚಾಗತೊಡಗಿತು. ಈ ಚಳುವಳಿಯ ಕಾವು ಕರ್ನಾಟಕದ ಮೈಸೂರು ಪ್ರಾಂತ್ಯವನ್ನು ಬಿಡಲಿಲ್ಲ. ಇದೇ ವೇಳೆ ಸಿ.ಬಂದೀಗೌಡರು ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಬಂದೀಗೌಡರು ಮೈಸೂರಿನ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್.ನ ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದರು. ಅನೇಕ ರಾಷ್ಟ್ರೀಯ ನಾಯಕರನ್ನು ಬಂಧಿಸಿ ಸೆರೆಮನೆಗೆ ತಳ್ಳಿದ ವಿಷಯವನ್ನು ಪತ್ರಿಕೆಗಳಿಂದ ಓದಿ ತಿಳಿದ ಅವರ ಮನಸ್ಸು ತಳಮಳಗೊಂಡು ತಾವು ಈ ಚಳುವಳಿಯಲ್ಲಿ ಸಹಭಾಗಿಗಳಾಗಬೇಕು ಎಂದು ನಿರ್ಧರಿಸಿದರು. ತಕ್ಷಣ ತಡ ಮಾಡದೇ ತಾವು ಅಭ್ಯಾಸ ಮಾಡುತ್ತಿದ್ದ ಕೃಷ್ಣ ರಾಜೇಂದ್ರ ಆಸ್ಪತ್ರೆಗೆ ತೆರಳಿ ತಮ್ಮ ಸಹಪಾಠಿಗಳೊಂದಿಗೆ ಚರ್ಚಿಸಿ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯ ಹಂಚಿಕೊಂಡರು. ಎಲ್ಲರ ಸಹಮತದಂತೆ ಮೊದಲನೇ ಮತ್ತು ಎರಡನೇ ವರ್ಷದ ವಿದ್ಯಾಥಿಗಳು ಒಂದಾಗಿ ತಮ್ಮ ತಮ್ಮ ತರಗತಿಗಳನ್ನು ತ್ಯಜಿಸಿ ಹರತಾಳ ಆಚರಿಸಬೇಕು ಎಂಬ ಒಮ್ಮತದ ತೀರ್ಮಾನಕ್ಕೆ ಬಂದರು.

ಅದಕ್ಕಾಗಿ ಎಲ್ಲಾ ವಿದ್ಯಾರ್ಥಿಗಳು ಶಿಸ್ತಿನಿಂದ ಹರತಾಳ ಮಾಡುವುದೆಂದು ನಿರ್ಣಯಿಸಿದಾಗ ಇವರ ಕಿರಿಯ ಸಹಪಾಠಿಗಳು ಸಹ ಬಂದು ಇವರೊಂದಿಗೆ ಕೈ ಜೋಡಿಸಿದರು. ಮೈಸೂರಿನ ಮುಖ್ಯ ರಸ್ತೆಗಳಲ್ಲಿ ಬ್ರಿಟೀಷರ ವಿರುದ್ಧ ಘೋಷಣೆಗಳನ್ನು ಹೇಳುತ್ತಾ ಮೆರವಣಿಗೆಗೆ ನಡೆಸಿದರು. ಕ್ವಿಟ್ ಇಂಡಿಯಾದ ಭಾಗವಾಗಿ ಬ್ರಿಟೀಷರ ವಿರುದ್ಧವಾಗಿ ನಡೆದ ಈ ಮೆರವಣಿಗೆ ಮೈಸೂರು ನಗರದಲ್ಲಿ ಮೊದಲ ಪ್ರತಿಭಟನೆಯಾಗಿತ್ತು.[7]

ಈ ಪ್ರತಿಭಟನೆಯು ವೈದ್ಯ ವಿದ್ಯಾರ್ಥಿಗಳ ಐಕ್ಯತೆ ಹಾಗೂ ದೇಶಾಭಿಮಾನ ಸೂಚಕವಾಗಿತ್ತು. ಮರುದಿನವೂ ಈ ಕಾರ್ಯಕ್ರಮವು ಮತ್ತೆ ಸಂಘಟಿಸಬೇಕೆಂದು ತೀರ್ಮಾನಿಸಿ ಆಗಸ್ಟ್–10 ರ ಮೈಸೂರಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಸಭೆ ಸೇರಿದರು. ಸಿ.ಬಂದೀಗೌಡರು ಸೇರಿ ಎಲ್ಲ ವಿದ್ಯಾರ್ಥಿಗಳು ಅಲ್ಲಿ ಸಭೆ ಸೇರಿರುವ ವಿಷಯ ಅವಾಗಿನ ಕಾಲೇಜಿನ ಪ್ರಾಚಾರ್ಯರಾಗಿದ್ದ ಡಾ॥ ರಾಬಿನ್‌ಸನ್‌ರು ಅಲ್ಲಿಗೆ ಬಂದು ಸೇರಿದರು. ಅವರು ವಿದ್ಯಾರ್ಥಿಗಳಿಗೆ ಬುದ್ಧಿಮಾತನ್ನು ಹೇಳುವುದಕ್ಕಾಗಿ ಅಲ್ಲಿಗೆ ತೆರಳಿದ್ದರು. ಡಾ॥ ರಾಬಿನ್‌ಸನ್‌ರು ಅಮೇರಿಕಾದವರು. ಎಲ್ಲಾ ವೈದ್ಯಕೀಯ ವಿದ್ಯಾರ್ಥಿಗಳ ಗೌರವಕ್ಕೆ ನಿನ್ನಯ ದಿನ ಶಾಂತಿಯಿಂದ ಪ್ರತಿಭಟನೆ ಮಾಡಿದ್ದು, ಅವರಿಗೆ ಮೆಚ್ಚುಗೆಯಾಗಿತ್ತು. ಆದರೂ ಈ ಚಳುವಳಿಯಲ್ಲಿ ಭಾಗವಹಿಸುವ ಅಪಾಯಕರವೆಂದು ಎಚ್ಚರಿಸಿದರು. ಇದರೊಂದಿಗೆ ಗಾಂಧೀಜಿಯವರ ಬಗ್ಗೆ ಮಾತನಾಡುತ್ತಾ ಗಾಂಧೀಜಿಯವರು ಸರ್ಕಾರದ ಬೆನ್ನಿಗೆ ಚೂರಿ ಹಾಕಿದರು ಎಂದು ಹೇಳಿದರು. ತಕ್ಷಣವೇ ಸಭೆಯಲ್ಲಿದ್ದ ಸಿ.ಬಂದೀಗೌಡರಿಗೆ ಈ ಮಾತು ಹಿಡಿಸಲಿಲ್ಲ. ತಕ್ಷಣವೇ ಅವರು ಎದ್ದು " Sir Please don't comment on Gandhji, He is our leader ' (ಸ್ವಾಮಿ,

ದಯವಿಟ್ಟು ಗಾಂಧೀಜಿಯವರನ್ನು ದೂರಬೇಡಿ ಅವರು ನಮ್ಮ ನಾಯಕರು) ಎಂದು ಪ್ರತಿಭಟಿಸಿದರು. ಪ್ರಾಂಶುಪಾಲರಂತೂ ಶಾಂತರಾದರೂ ಅವರಿಂದ ಯಾವುದೇ ಮಾತು ಹೊರಡಲಿಲ್ಲ. ಸಭೆಯಲ್ಲಿ ಸಂಪೂರ್ಣ ಮೌನ ಆವರಿಸಿತು. ಪ್ರಾಂಶುಪಾಲರು ಕೆಲವು ಕ್ಷಣಗಳ ನಂತರ ಚೇತರಿಸಿಕೊಂಡು " ನಮ್ಮ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಹಾನಿಯಾಗುವುದನ್ನು ನಾನು ಇಷ್ಟಪಡುವುದಿಲ್ಲ. ಅನಿರ್ದಿಷ್ಟ ಕಾಲದವರೆಗೆ ಪಾಠ-ಪ್ರವಚನಗಳು ನಡೆಯದಂತೆ ಕಾಲೇಜನ್ನು ಮುಚ್ಚಿ ಬಿಡುತ್ತೇನೆ. ಪರಿಸ್ಥಿತಿ ತಿಳಿಯಾದ ಮೇಲೆ ಮತ್ತೆ ಸೇರೋಣ ನೀವೆಲ್ಲಾ ನಿಮ್ಮ ಮನೆಗೆ ತೆರಳಿ" ಎಂದು ಹೇಳಿ ತಮ್ಮ ಕಛೇರಿಗೆ ನಿರ್ಗಮಿಸಿದರು.[8]

ಮತ್ತಷ್ಟು ಚಳುವಳಿ ಮತ್ತು ಪ್ರತಿಭಟನೆಗಳಲ್ಲಿ ಸಿ.ಬಂದೀಗೌಡರು ಪಾಲ್ಗೊಂಡರು ಇವರಿಗೆ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ಸಹಪಾಠಿಯಾಗಿದ್ದವರು. ಮಹಾತ್ಮಾಗಾಂಧೀಜಿ ಯವರ ಮೊಮ್ಮಗ ಶಾಂತೀಲಾಲ ಗಾಂಧೀ, ಎರಡು ತಿಂಗಳುಗಳ ಕಾಲ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ನಂತರ ಮತ್ತೆ ಡಾ॥ ರಾಬಿನ್‌ಸನ್‌ರ ಪ್ರೀತಿ ಪೂರ್ವ ಒತ್ತಾಯಕ್ಕೆ ಮಣಿದು ಮತ್ತೆ ಕಾಲೇಜಿಗೆ ಸೇರಿದರು.

ಅಡಿ ಟಿಪ್ಪಣಿಗಳು

1. ಲಿಂಗಯ್ಯ ಡಿ- ಶಿವಪುರ ಧ್ವಜ ಸತ್ಯಾಗ್ರಹ-ಸ್ವಾತಂತ್ರ ಸಂಗ್ರಾಮದ ಚರಿತ್ರೆ-2011 ಪುಟ-83.
2. ದೇ.ಜ.ಗೌ (ಸಂ.) ಸುವರ್ಣ ಮಂಡ್ಯ 1994 ಪುಟ 123-124
3. ವೀರಣ್ಣಗೌಡ ಹೆಚ್.ಕೆ. ಬದುಕು ಮೆಲುಕು (ಆತ್ಮ ಕಥನ) 1974 ಪುಟ 180-181.
4. ಸಂದರ್ಶನ : ಸಂಶೋಧಕನಿಂದ 12/05/2012)
5. Veerathppa K. Readings Modern History 1985,P-69.
6. ಲಿಂಗಯ್ಯ ಡಿ. ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ, 2012. ಪು.119-120
7. ಪ್ರೊ॥ ಹೆಚ್.ಎಲ್. ಕೇಶವಮೂರ್ತಿ, (ಲೇಖನ) ಸ್ವಾತಂತ್ರ್ಯದೆಡೆಗೆ ನಿಲ್ಲದ ನಡಿಗೆ ಡಾ.ಸಿ.ಬಂದೀಗೌಡ ಅಗೆದಷ್ಟೇ ಚಿನ್ನ. ಮೊಗದಷ್ಟೇ ನೀರು, ಪುಟ 26.
8. ಸಂದರ್ಶನ ಸಂಶೋಧಕನಿಂದ ದಿನಾಂಕ : 13-05-2012.

ಅಧ್ಯಾಯ : ನಾಲ್ಕು

ಸಮಾಜ ಸೇವಕರಾಗಿ ಸಿ.ಬಂದೀಗೌಡರು,

ಬಂದೀಗೌಡರು ಉತ್ತಮ ಸಮಾಜ ಸುಧಾರಕರು, ಸಾಮಾಜಿಕ ನ್ಯಾಯಕ್ಕಾಗಿ ದುಡಿದವರು, ಗಾಂಧೀಜಿಯವರ ಪ್ರಭಾವ ಗೌಡರ ಮೇಲಾಗಿ ಸಮಾಜ ಶುದ್ಧೀಕರಣಕ್ಕಾಗಿ ತಮ್ಮ ಜೀವಿತದುದ್ದಕ್ಕೂ ದುಡಿಯುತ್ತಿರುವ ಆದರ್ಶಪ್ರಿಯರು, ತನ್ನ ಸುತ್ತಲಿನ ಗ್ರಾಮೀಣ ರೈತರ ಹಿತಕ್ಕಾಗಿ ಜಮೀನ್ದಾರರಾಗಿದ್ದ ಗೌಡರು ತಮ್ಮ ಜಮೀನು ಕಳೆದುಕೊಳ್ಳುವ ಸಂದರ್ಭದಲ್ಲೂ ಗೇಣಿ ಶಾಸನವನ್ನು ಜಾರಿಗೊಳಿಸುವಂತೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಒಂದು ದೊಡ್ಡ ಆಂದೋಲನವನ್ನೇ ಮಾಡಿದವರು. ಆ ನಿಟ್ಟಿನಲ್ಲಿ ಗೌಡರು ನಮಗೆ ಒಬ್ಬ ಸಮಾಜಿಕ ನಾಯಕರಾಗಿ ಕಾಣುತ್ತಾರೆ. ಸ್ವಾರ್ಥ, ಸ್ವಜನಪಕ್ಷಪಾತವೇ ತುಂಬಿ ತುಳುಕುತ್ತಿರುವ ಇಂದಿನ ಸಮಾಜದಲ್ಲಿ ನಿಸ್ವಾರ್ಥ ಜನಸೇವಕರಾಗಿ ದುಡಿಯುತ್ತಿರುವ ಗೌಡರ ಬದುಕು ಆದರ್ಶಮಯ ಹಾಗೂ ಅನುಕರಣೀಯವಾದುದು.

ಶ್ರೀರಂಗಪಟ್ಟಣದ ಗೇಣಿದಾರರ ಹೋರಾಟದಲ್ಲಿ ಸಿ.ಬಂದೀಗೌಡರು

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ನೂರಕ್ಕೆ ತೊಂಭತ್ತು ಮಂದಿ ರೈತಾಪಿ ಸಮುದಾಯದವರು ಸಿರಿವಂತರ ದಬ್ಬಾಳಿಕೆ, ದೌರ್ಜನ್ಯಗಳಿಗೆ ಬಲಿಯಾಗಿರುವುದನ್ನು ನೋಡಬಹುದು. ಭೂ ಮಾಲೀಕರು, ಭೂ ಹೀನರನ್ನು ಹಲವು ವಿಧಾನಗಳಲ್ಲಿ ಶೋಷಿಸು ತ್ತಿದ್ದರು, ಹಿಂಸಿಸುತ್ತಿದ್ದರು. ರೈತಾಪಿ ಜನಾಂಗ ವರ್ಷವಿಡೀ ತಾವು ಬೆಳೆದುದ್ದೆನ್ನೆಲ್ಲಾ ಜಮೀನ್ದಾರರಿಗೆ ಒಪ್ಪಿಸಿ, ಒಂದೊತ್ತಿನ ಗಂಜಿಗೂ ಗತಿ ಇಲ್ಲದೇ ಬದುಕ ಬಂಡಿಯನ್ನು ಸಾಗಿಸಬೇಕಿತ್ತು. ಗುತ್ತಿಗೆ ಪದ್ದತಿಯು ವರ್ಷದಿಂದ ವರ್ಷಕ್ಕೆ ಬದಲಾಗುತ್ತಿತ್ತು. ಜಮೀನ್ದಾರರು ತನ್ನ ಭೂಮಿಗೆ ರೈತರು ವರ್ಷಕ್ಕೆ ಎಷ್ಟು ಖಂಡುಗ ಭತ್ತವನ್ನು ಗುತ್ತಿಗೆಯಾಗಿ ಕೊಡಬೇಕೆಂದು ಮೊದಲೇ ನಿರ್ಧಾರವಾಗುತ್ತಿತ್ತು. ಆ ರೈತರು ಅಷ್ಟು ವಾರ್ಷಿಕ ಭತ್ತವನ್ನು ಕೊಟ್ಟರೂ, ಮುಂದಿನ ವರ್ಷ ಅದಕ್ಕಿಂತ ಹೆಚ್ಚು ಭತ್ತವನ್ನು ಕೊಡುವ ರೈತರಿಗೆ ಜಮೀನ್ದಾರರು ತಮ್ಮ ಭೂಮಿಯನ್ನು ಗುತ್ತಿಗೆ ಕೊಡುತ್ತಿದ್ದರು.

ಇಷ್ಟೆಲ್ಲಾ ಬೆಳವಣಿಗೆಯಿಂದ ಅಂತಿಮವಾಗಿ ಗೇಣಿದಾರರಿಗೆ ಸಾಕಷ್ಟು ಕಷ್ಟ ನಷ್ಟಗಳುಂಟಾಗುತ್ತಿದ್ದವು. ತಮಗೆ ಎಷ್ಟೇ ಕಷ್ಟ ನಷ್ಟಗಳು ಸಂಭವಿಸಿದರೂ, ತಮ್ಮ ಜೀವನಕ್ಕೆ ಆಧಾರವಾಗಿದ್ದ ಭೂಮಿಯ ಗುತ್ತಿಗೆಯನ್ನು ಕಳೆದುಕೊಳ್ಳುವ ಆತಂಕದ ನಡುವೆಯೂ ತಾವು ಬೆಳೆದ ಬೆಳೆಯಲ್ಲಿ ಹೆಚ್ಚು ಪಾಲು ಜಮೀನ್ದಾರರಿಗೆ ನೀಡಿ, ಮತ್ತಷ್ಟು ಸಾಲಸೋಲಗಳ ಸುಳಿಗೆ ಸಿಲುಕಿ ನಿರಂತರವಾಗಿ ನರಳುವುದು. ಹೆಚ್ಚಿನ ಸಂಖ್ಯೆಯ ಜಮೀನ್ದಾರರು ರೈತರ ದೃಷ್ಟಿಯಲ್ಲಿ ಖಳನಾಯಕರೇ ಆಗಿದ್ದರು.

ಬಂದೀಗೌಡರ ತಂದೆ ಚಿಕ್ಕಣ್ಣನವರು ಜಮೀನ್ದಾರರಾಗಿದ್ದರು. ಚಿಕ್ಕಣ್ಣನವರಿಗೆ ಇಪ್ಪತ್ತು ಎಕರೆ ತರಿ ಜಮೀನಿದ್ದು, ಅದರಲ್ಲಿ 15 ಎಕರೆ ಜಮೀನನ್ನು ಗೇಣಿ ಕೊಟ್ಟಿದ್ದರು.

ಚಿಕ್ಕಣ್ಣಗೌಡರು ಎಲ್ಲಾ ಜಮೀನ್ದಾರರಂತೆ ರೈತರನ್ನು ಶೋಷಿಸುತ್ತಿರಲಿಲ್ಲ. ರೈತರ ಹಿತಚಿಂತನೆಯನ್ನು ಬಯಸುವವರಾಗಿದ್ದರು. ರೈತರಿಂದ ನ್ಯಾಯಯುತವಾದ ಗುತ್ತಿಗೆಯನ್ನು ಪಡೆಯುತ್ತಿದ್ದರು. ಅಲ್ಲದೇ ಗೇಣಿದಾರರನ್ನು ಹೆಚ್ಚಿನ ಲಾಭಕ್ಕಾಗಿ ವರ್ಷ ವರ್ಷ ಬದಲಾಯಿಸುತ್ತಿರಲಿಲ್ಲ. ಬಂದೀಗೌಡರು ತಮ್ಮ ತಂದೆಯ ಮಾನವೀಯ ಗುಣಗಳಿಂದ ಉತ್ತೇಜಿತರಾಗಿ, ರೈತಾಪಿ ಜನರ ಗೇಣಿ ನೀತಿಯ ಪರವಾಗಿ ನಿಲ್ಲಲು ಕಟಿಬದ್ಧರಾಗಿದ್ದರು.

1952 ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕೆಂಗಲ್ ಹನುಮಂತಯ್ಯನವರು ರಾಜ್ಯ ಮುಖ್ಯಮಂತ್ರಿಯಾಗಿದ್ದಾಗ ಅವರ ಸಚಿವ ಸಂಪುಟದಲ್ಲಿ ಕಂದಾಯ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರು ಮೈಸೂರು ಗೇಣಿಶಾಸನ, ಮೈಸೂರು ಇನಾಂ ರದ್ಧತಿ ಮೊದಲಾದ ಶಾಸನಗಳನ್ನು ರಚಿಸುವಲ್ಲಿ ಯಶಸ್ವಿಯಾದರು. ಈ ಶಾಸನಗಳು ಸಮಾಜಕ್ಕೆ ಪೂರಕವಾದವು. ಇದರಿಂದಾಗಿ ಮಂಜಪ್ಪನವರು ಶ್ರೀಮಂತರ ಟೀಕೆಗೆ ಗುರಿಯಾದರು. ಮಠ ದೇವಸ್ಥಾನಗಳಿಗೆ ಮಾನ್ಯವಾಗಿ ಕೊಟ್ಟಿದ್ದ ಭೂಮಿಯನ್ನು ಬೆವರು ಸುರಿಸಿ ಬೇಸಾಯ ಮಾಡುವ ರೈತರಿಗೆ ಕೊಡಬೇಕು ಎಂಬ ಮೈಸೂರು ಗೇಣಿಶಾಸನವನ್ನು ಮಂಡಿಸುವಲ್ಲಿ ಇವರು ಮಹತ್ತರವಾದ ಪಾತ್ರವನ್ನು ವಹಿಸಿದರು. ಗೇಣಿದಾರರ ಪರವಾಗಿ ಮಾತನಾಡಿದವರು ಮೈಸೂರು ರಾಜ್ಯದಲ್ಲಿ ಇವರೊಬ್ಬರೇ ಎನ್ನುವ ಮಾತೂ ಕೂಡ ಕಡಿದಾಳರಿಗೆ ಬಂತು.[1]

ಕಡಿದಾಳ್‌ಮಂಜಪ್ಪನವರು ಗೇಣಿದಾರರ ಶೋಷಣೆಯನ್ನು ತಡೆಗಟ್ಟುವ ಮಸೂದೆಯನ್ನು ಪಡೆದು "ಗೇಣಿ ಶಾಸನ "ವನ್ನು ಸರ್ಕಾರ ಸಿದ್ದಪಡಿಸಿತ್ತು. ಈ ಗೇಣಿ ಶಾಸನವು ಹಲವು ಪ್ರಮುಖಾಂಶಗಳನ್ನು ಒಳಗೊಂಡಿತ್ತು. ಅವುಗಳೆಂದರೆ,

1. ಜಮೀನ್ದಾರರು ತಮ್ಮ ಮನೋ ಇಚ್ಛೆಯಂತೆ ಗೇಣಿದಾರರನ್ನು ಪದೇ ಪದೇ ಬದಲಿಸಬಾರದು ಮತ್ತು ಅವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಕ್ಕಲೆಬ್ಬಿಸುವ ಕೆಲಸ ಮಾಡಬಾರದು ಅಥವಾ ಅವರನ್ನು ಬದಲಾಯಿಸಬಾರದು.
2. ಗೇಣಿದಾರ ಬೆಳೆದ ಬೆಳೆಯಲ್ಲಿ ಎಲ್ಲವನ್ನೂ ಅವನಿಂದ ಕಿತ್ತುಕೊಳ್ಳಬಾರದು. ಶೇಕಡ ಮೂರರಲ್ಲಿ ಒಂದು ಭಾಗ ಭೂ ಮಾಲೀಕರಿಗೆ ಹಾಗೂ ಎರಡನೇ ಮೂರು ಭಾಗ ಗೇಣಿದಾರನಿಗೆ ಸೇರಬೇಕು.
3. ಪ್ರತಿಯೊಬ್ಬ ಗೇಣಿದಾರನಿಗೆ ತನ್ನ ಹೆಸರು, ಬೆಳೆದ ಬೆಳೆಯ ವಿವರಗಳನ್ನು ಒಳಗೊಂಡ ಪಹಣಿ ವಿತರಣೆಯಾಗಬೇಕು. ಗೇಣಿದಾರರಿಗೆ ಸಂಬಂಧಿಸಿದ ಭೂ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿರಬೇಕು.
4. ಜಮೀನ್ದಾರರು ತಮ್ಮ ಭೂಮಿಯನ್ನು ಪರಭಾರೆ ಮಾಡಬೇಕಾದ ಅಂದರೆ ಮಾರುವ ಅಗತ್ಯಬಿದ್ದಾಗ ಮೊದಲ ಆದ್ಯತೆಯನ್ನು ತನ್ನ ಗೇಣಿದಾರನಿಗೆ

ಕೊಂಡುಕೊಳ್ಳುವಂತೆ ನೋಟೀಸ್ ಜಾರಿ ಮಾಡಿ ಗೇಣಿದಾರನಿಂದ ನಿರಾಕರಣೆಯ ಉತ್ತರ ಬಂದಾಗ ಮಾತ್ರ ಇತರರಿಗೆ ತಮ್ಮ ಭೂಮಿಯನ್ನು ಮಾಲೀಕರು ಮಾರಬಹುದು.[2]

ಕಂದಾಯ ಮಂತ್ರಿಯಾಗಿದ್ದ ಕಡಿದಾಳ್‌ಮಂಜಪ್ಪನವರು ಗೇಣಿದಾರರ ಶೋಷಣೆ ತಪ್ಪಿಸಲು ಸರ್ಕಾರ ಈ ಶಾಸನವನ್ನು ಜಾರಿ ಮಾಡಿ, ಮಾದರಿಗಾಗಿ ರಾಜ್ಯದ ಒಂದು ತಾಲ್ಲೂಕಿನಲ್ಲಿ ಜಾರಿಗೆ ತರಲು ನಿರ್ಧರಿಸಿತ್ತು. ಅದರ ಸಾಧಕ ಭಾದಕಗಳನ್ನು ಗಮನಿಸಿ ಅನಂತರ ರಾಜ್ಯದಾದ್ಯಂತ ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಬಂದೀಗೌಡರು ಈ ಕಾಯಿದೆಯನ್ನು ಸಮರ್ಪಕವಾಗಿ ಜಾರಿಗೊಳಿಸಿದ್ದೆಯಾದಲ್ಲಿ ಗೇಣಿದಾರರ ಬಹುಪಾಲು ಸಂಕಷ್ಟಗಳೆಲ್ಲವೂ ನಿವಾರಿಸುತ್ತವೆಂದು ತಿಳಿದು, ಗೇಣಿದಾರರ ಪರ ಹೋರಾಟಕ್ಕೆ ನಿಂತು. ಕಂದಾಯ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರನ್ನು ಭೇಟಿ ಮಾಡಿ ಗೇಣಿದಾರರ ಶಾಸನವನ್ನು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜಾರಿಗೆ ತರಲು ಮನವಿ ಮಾಡಿಕೊಂಡರು. ಗೇಣಿ ಶಾಸನವನ್ನು ಜಾರಿಗೊಳಿಸುವ ಬಂದೀಗೌಡರ ಪ್ರಯತ್ನದ ಸುಳಿವನ್ನು ತಿಳಿದ ತಾಲ್ಲೂಕಿನ ಜಮೀನ್ದಾರರು ಕಂದಾಯ ಮಂತ್ರಿಗಳನ್ನು ಭೇಟಿ ಮಾಡಿ "ತಾಲ್ಲೂಕಿನಲ್ಲಿ ಭೂ ಮಾಲೀಕರು ಮತ್ತು ಗೇಣಿದಾರರು ಅಣ್ಣ-ತಮ್ಮಂದಿರಂತೆ ಬದುಕುತ್ತಿದ್ದೇವೆ. ನಮ್ಮಗಳ ನಡುವೆ ಯಾವುದೇ ತರಹದ ಕಚ್ಚಾಟವಿಲ್ಲ. ತಾಲ್ಲೂಕಿನಲ್ಲಿ ಗೇಣಿ ಶಾಸನ ಜಾರಿಗೊಳಿಸುವ ಅವಶ್ಯಕತೆ ಇಲ್ಲ" ಎಂದು ಮನವಿ ಮಾಡಿಕೊಂಡರು. ಆದರೆ ಬಂದೀಗೌಡರು ಮುಖ್ಯಮಂತ್ರಿ ಕೆ.ಹನುಮಂತಯ್ಯ ಅವರನ್ನು ಭೇಟಿ ಮಾಡಿ ಗೇಣಿದಾರರ ಶಾಸನವನ್ನು ತಾಲ್ಲೂಕಿನಲ್ಲಿ ಜಾರಿಗೆ ತರಲೇಬೇಕೆಂದು ಒತ್ತಾಯಿಸಿದರು.

ಶ್ರೀರಂಗಪಟ್ಟಣದಲ್ಲಿ ಗೇಣಿದಾರರ ಹಾಗೂ ಜಮೀನ್ದಾರರ ನಡುವಿನ ಸಂಬಂಧದ ವಸ್ತು ಸ್ಥಿತಿಯನ್ನು ಸ್ವತಃ ಅರಿಯಲು ಕಂದಾಯ ಮಂತ್ರಿ ಕಡಿದಾಳ್ ಮಂಜಪ್ಪನವರನ್ನೇ ಶ್ರೀರಂಗಪಟ್ಟಣಕ್ಕೆ ಬಂದೀಗೌಡರು ಆಹ್ವಾನಿಸಿದಾಗ, ಅದಕ್ಕೊಪ್ಪಿದ ಕಂದಾಯ ಮಂತ್ರಿಗಳು ತಾಲ್ಲೂಕಿಗೆ ಬರಲು ಒಪ್ಪಿದರು. ಅವರ ಬರುವಿಕೆಯ ಖಾತರಿಯಾದಾಗ ಬಂದೀಗೌಡರು ತಾಲ್ಲೂಕಿನ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಗೇಣಿದಾರರನ್ನು ಒಗ್ಗೂಡಿಸಿ ಗೇಣಿದಾರರ ಶಾಸನದ ಜಾರಿಯಿಂದ ಉಂಟಾಗುವ ಪ್ರಯೋಜನಗಳನ್ನು ವಿವರಿಸಿದರು.

1952 ರಲ್ಲಿ ಶ್ರೀರಂಗಪಟ್ಟಣದ ಚಾಮರಾಜೇಂದ್ರ ಮೊಮೋರಿಯಲ್ ಛತ್ರದಲ್ಲಿ ಏರ್ಪಾಡಾಗಿದ್ದ ಸಭೆಯಲ್ಲಿ ಕಂದಾಯ ಮಂತ್ರಿಗಳಾದ ಕಡಿದಾಳ್ ಮಂಜಪ್ಪ ನವರು ಹಾಜರಾಗಿದ್ದರು. ಜಮೀನ್ದಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗೇಣಿದಾರರೇ ಸೇರಿದ್ದ ಈ ಸಭೆಯಲ್ಲಿ ಗೇಣಿದಾರರು ಜಮಿನ್ದಾರರಿಂದ ಅನುಭವಿಸಿದ್ದ ಹಲವು ಕಷ್ಟ ಸಂಕೋಲೆಗಳನ್ನು ನಿವೇದಿಸಿಕೊಂಡು ಗೇಣಿ ಶಾಸನವನ್ನು ಬಹುಬೇಗನೆ ಜಾರಿಗೊಳಿಸುವಂತೆ ಕೋರಿಕೊಂಡರು. ಇದರಿಂದ ಜಮೀನ್ದಾರರ ಜಂಘಾ ಬಲವೇ

ಅಡುಗುವಂತೆ ತಾಲ್ಲೂಕಿನ ಹಳ್ಳಿಗಳಲ್ಲಿ ಮಿಂಚಿನ ಸಂಚಾರ ನಡೆಸಿ ಗೇಣಿದಾರರನ್ನು ಒಗ್ಗಟ್ಟಾಗಿಸಿದ್ದ ಬಂದೀಗೌಡರು ಗೆದ್ದರು.[3]

ಈ ಟೆನೆನ್ಸಿ ಆ್ಯಕ್ಟ್‌ನ ಮೇಲೆ 1953 ರ ಮಾರ್ಚ್ 27ರಂದು ಪಿ.ಸೀತಾರಾಮಯ್ಯ ಎಂಬುವವರು ಸ್ಪಷ್ಟೀಕರಣ ಕೋರಿದಾಗ ಕಂದಾಯ ಮಂತ್ರಿಗಳಾಗಿದ್ದ ಕಡಿದಾಳ್ ಮಂಜಪ್ಪನವರೇ ಸ್ವತಃ ವಿಧಾನ ಮಂಡಲದಲ್ಲಿ ಸ್ಪಷ್ಟೀಕರಣ ನೀಡಿದರು. ಈ ಕಾಯ್ದೆಯು ಭಾರತದಲ್ಲಿ ಜಾರಿಯಲ್ಲಿದ್ದ ಅತೀ ಸೌಮ್ಯದ ಟೆನಾನ್ಸಿ ಕಾಯ್ದೆಯೆಂದು ತಿಳಿಸುತ್ತಾ, ಈ ಕಾಯ್ದೆಯನ್ನು, ಬೊಂಬೈ ಟೆನಾನ್ಸಿ ಕಾಯ್ದೆಯ ಮಾದರಿಯ ಆಧಾರದ ಮೇಲೆ ರಚಿಸಲಾಗಿದೆ. ಜಮೀನುದಾರರಿಗೆ ನನ್ನ ಕಳಕಳಿಯ ವಿನಂತಿಯೇನೆಂದರೆ, ಅವರು ಸಮಯಕ್ಕನುಸಾರವಾಗಿ ನಡೆಯಬೇಕು. ಇಲ್ಲದಿದ್ದರೆ ಅವರ ಅಧೋಗತಿಯೇ ಸರಿ, ಅದಕ್ಕಾಗಿಯೇ ಪಿ. ಸೀತಾರಾಮಯ್ಯನವರು "ಗೇಣಿದಾರರ ಮತ್ತು ಜಮೀನುದಾರರ ನಡುವೆ ಸಾಮರಸ್ಯ ಇಲ್ಲವೆಂಬ ಹೇಳಿಕೆ ಸತ್ಯವಾದದ್ದು., ಪ್ರಾರಂಭಿಕ ಹಂತದಲ್ಲಿ, ಇಂಥ ಸನ್ನಿವೇಶಗಳು ಬಂದೊದಗುವುದು ಸಹಜ, ಆದರೆ ಕ್ರಮೇಣ, ಈ ಕಾಯ್ದೆಯ ಉಪಬಂಧಗಳ ಪ್ರಕಾರ ಜಮೀನುದಾರರು ಮತ್ತು ಗೇಣಿದಾರರು ಹೊಂದಿಕೊಂಡು ಹೋಗಬೇಕು.

ಕೆಲವು ಜನರು ಈ ಗೇಣಿ ಕಾಯ್ದೆಯ ವಿರುದ್ಧ ಇದ್ದಾರೆ ಎಂಬುದು ಸತ್ಯ. ಏಕೆಂದರೆ, ಕಾಯ್ದೆಯ ವಿರುದ್ಧ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುವುದು ಸಹಜ ಮತ್ತು ಸ್ವಾಭಾವಿಕ ಕಾಯ್ದೆಯಲ್ಲಿ ಮಾರ್ಪಾಡು ಮಾಡಬೇಕಾಗುತ್ತದೆ. ಭಾರತದಲ್ಲಿ ಅತೀ ಉತ್ತಮವಾದ ಕಾಯ್ದೆ ಎಂದು, ಹೆಸರು ಪಡೆದ, ಬಾಂಬೆ ಟೆನಾನ್ಸಿ ಕಾಯ್ದೆಯು 1:6 ದಷ್ಟು ಉತ್ಪನ್ನವು ಬಾಡಿಗೆಗೆ ಅವಕಾಶ ಮಾಡಿಕೊಡುತ್ತದೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಬಾಡಿಗೆಯ, ಉತ್ಪನ್ನದ ಅರ್ಧದಷ್ಟು ಇರುತ್ತದೆ. ಕೆಲವು ರೈತರ ಪ್ರಕಾರ ಕಾಯ್ದೆಯನ್ನು ಇಡೀ ರಾಜ್ಯಕ್ಕೆ ಅನ್ವಯವಾಗುವಂತಾಗಬೇಕು ಮತ್ತು ಗೇಣಿದಾರರಿಗೆ ಕೆಲವು ರಕ್ಷಣೆಗಳು ಸಿಗುವಂತಾಗಬೇಕು. ಸೀತಾರಾಮಯ್ಯನವರು ಹೇಳಿದಂತೆ ಭೂಮಿಯ ಕಿಮ್ಮತ್ತು ಇಳಿಮುಖವಾಗಿರುತ್ತದೆ. ಕಾಯ್ದೆಯು ಕೇವಲ ಶ್ರೀರಂಗಪಟ್ಟಣ ತಾಲ್ಲೂಕಿಗೆ ಅನ್ವಯಿಸುವುದಿಲ್ಲ. ಅದು ಉಳಿದ ತಾಲ್ಲೂಕುಗಳಿಗೂ ಅನ್ವಯಿಸುತ್ತದೆ. ಶ್ರೀರಂಗಪಟ್ಟಣ ತಾಲ್ಲೂಕು ಬಿಟ್ಟರೆ, ಬೇರೆಯಾವ ತಾಲ್ಲೂಕುಗಳಲ್ಲಿ, ಜಮೀನುದಾರರು, ಕಾಯ್ದೆಯ ವಿರುದ್ಧ ಆಕ್ಷೇಪಣೆ ಮಾಡಿಲ್ಲ, ಕಾಯ್ದೆಯು ಜಮೀನುದಾರರ ಹಿತಾಸಕ್ತಿಗಳನ್ನು ಕಾಪಾಡಲು ಅವಕಾಶ ನೀಡುತ್ತದೆ. ಗೇಣಿದಾರನು, ಬಾಡಿಗೆ ಕೊಡದಿದ್ದಲ್ಲಿ ಮಾತ್ರ ಅವನ ಸ್ವಾಧೀನತೆಯನ್ನು ತಪ್ಪಿಸಲಾಗುತ್ತದೆ. ಒಂದು ವೇಳೆ ಅವನು ಸಮರ್ಪಕವಾಗಿ ಭೂಮಿಯನ್ನು ಸಾಗುವಳಿ ಮಾಡದಿದ್ದಲ್ಲಿ ಅವನ ಭೂ ಸ್ವಾಧೀನತೆಯನ್ನು ಕಸಿದುಕೊಳ್ಳಲಾಗುತ್ತದೆ.[4]

ಸಿ.ಬಂದೀಗೌಡರು ಶ್ರೀರಂಗಪಟ್ಟಣ ತಾಲ್ಲೂಕಿನ ಎಲ್ಲೆಡೆ ಮತ್ತೆ ಸಂಚರಿಸಿ ಗೇಣಿದಾರರು ಗುತ್ತಿಗೆ ಮಾಡುತ್ತಿದ್ದ ಜಮೀನಿನ ವಿವರಗಳನ್ನು ತಾಲ್ಲೂಕು ಕಛೇರಿಗೆ ಲಿಖಿತವಾಗಿ ಸಲ್ಲಿಸಿದರು. ಕಂದಾಯ ಇಲಾಖೆಯ ಅಧಿಕಾರಗಳನ್ನು ಸಂಪರ್ಕಿಸಿ ಗೇಣಿದಾರರ ಹೆಸರಿಗೆ ಪಹಣಿಗಳು ಬರೆಯಲ್ಪಟ್ಟವು. ಸ್ವತಃ ಜಮೀನ್ದಾರರ ಮಗನಾದ ಗೌಡರು ತಮ್ಮ ಸ್ವಂತ ಭೂಮಿ ಗೇಣಿದಾರರಿಗೆ ಹೋದರೂ ಚಿಂತಿಸದೇ, ನೂರಾರು ವರ್ಷಗಳಿಂದ ಅತಂತ್ರರಾಗಿ ಬದುಕನ್ನು ನಡೆಸುತ್ತಿದ್ದ ಎಲ್ಲಾ ಜಾತಿ ಮತಗಳಿಗೆ ಸೇರಿದ ಸಾವಿರಾರು ಮಂದಿ ಬಡಗೇಣಿದಾರರಿಗೆ ಸುಭದ್ರವಾದ ಆರ್ಥಿಕ ಭದ್ರತೆಯನ್ನು ಒದಗಿಸುವಲ್ಲಿ ಡಾ.ಸಿ.ಬಂದೀಗೌಡರು ನಡೆಸಿದ ಹೋರಾಟ ಅವಿಸ್ಮರಣೀಯವಾದುದು.

ವೈದ್ಯರಾಗಿ ಸಿ.ಬಂದೀಗೌಡರ ಸಾಮಾಜಿಕ ಸೇವೆ

"ವೈದ್ಯೋ ನಾರಾಯಣ ಹರಿ" ಅಂದರೆ ವೈದ್ಯರು ದೇವರಿಗೆ ಸಮಾನ ಎಂದು. ಆದರೆ ಇಂದು ಸಣ್ಣಪುಟ್ಟ ಕಾಯಿಲೆಯ ಚಿಕಿತ್ಸೆಗೆಂದು ವೈದ್ಯರ ಬಳಿಗೆ ಹೋದರೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುವ ಪರಿಸ್ಥಿತಿ ಇಂದು ನಮ್ಮ ಕಣ್ಣೆದುರಿಗೆ ಇದೆ. ಇಂದು ಕೆಲವು ವೈದ್ಯರು ವೈದ್ಯಕೀಯ ವೃತ್ತಿಯನ್ನು ಸಮಾಜ ಸೇವೆ ಮಾಡಲು ನನಗೆ ಅವಕಾಶ ಸಿಕ್ಕಿದೆ ಎಂಬುದನ್ನು ತಿಳಿದುಕೊಳ್ಳದೇ ಇಂದು ದುಡ್ಡು ಗಳಿಸುವುದಕ್ಕಾಗಿರುವ ರಹದಾರಿ ಎಂದು ಭಾವಿಸಿದ್ದಾರೆ. ಆದರೆ ಇವೆಲ್ಲ ಅಪವಾದಗಳಿಂದ ದೂರು ಇದ್ದು ಜನಮಾನಸದಲ್ಲಿ ನೆಲೆಗೊಂಡವರು ಸಿ.ಬಂದೀಗೌಡರು.

ಸಿ.ಬಂದೀಗೌಡರು ತಮ್ಮ ಎಂ.ಬಿ.ಬಿ.ಎಸ್. ಶಿಕ್ಷಣವನ್ನು ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಪಡೆದರು. ಮೊದಲೇ ಗಾಂಧೀವಾದಿಗಳಾದ ಬಂದೀಗೌಡರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಲೇ ತಮ್ಮ ವೈದ್ಯಕೀಯ ಶಿಕ್ಷಣವನ್ನು ಪೂರ್ತಿಗೊಳಿಸಿದರು. ಇವರು ವೈದ್ಯಕೀಯ ಶಿಕ್ಷಣ ಪಡೆಯುವಾಗ ಮಹಾತ್ಮಾ ಗಾಂಧೀಜಿಯವರ ಮೊಮ್ಮಗ ಕಾಂತೀಲಾಲ ಗಾಂಧೀ ಇವರ ಸಹಪಾಠಿಯಾಗಿದ್ದರು.[5]

ವೈದ್ಯಕೀಯ ಶಿಕ್ಷಣ ಪಡೆದ ನಂತರ ದುಡ್ಡು ಗಳಿಸಿ, ಶ್ರೀಮಂತನಾಗಿ ಮರೆಯಬೇಕೆಂದು ಉದ್ದೇಶ ಬಂದೀಗೌಡರಿಗೆ ಇರಲಿಲ್ಲ. ಗಾಂಧೀಜಿಯವರಂತೆ ಸಮಾಜ ಸೇವೆ ಮಾಡುವುದೇ ಮಹಾನ್ ಉದ್ದೇಶವಾಗಿತ್ತು. ಜೊತೆಗೆ ಸಮಾಜದ ಕೆಳಸ್ಥರದ ಪ್ರತಿಯೊಬ್ಬ ವ್ಯಕ್ತಿಗೂ ವೈದ್ಯಕೀಯ ಸೇವೆ ಸುಲಭವಾಗಿ ಸಿಗಬೇಕು ಎಂಬುದು ಇವರ ಮಹಾದಾಸೆ ಆಗಿತ್ತು.

ಬಂದೀಗೌಡರು ತಮ್ಮ ವೃತ್ತಿಯನ್ನು ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಪ್ರಾರಂಭಿಸಿದರು. ಸರಕಾರಿ ಕೆಲಸ ಬೇಡವೆಂದು ಅಂದಿನ ಪಾಂಡವಪುರದಂತಹ ಹಳ್ಳಿಗಾಡಿನಲ್ಲಿ ವೈದ್ಯಕೀಯ ವೃತ್ತಿ ಪ್ರಾರಂಭಿಸುವುದಕ್ಕೆ ಒಂದು ಕಾರಣವಿದೆ. ಇವರು ವೈದ್ಯಕೀಯ ವೃತ್ತಿ ಪ್ರಾರಂಭಿಸಿದ ಅವಧಿಯಲ್ಲಿ ಜನರಿಗೆ ಮಲೇರಿಯಾ, ಕಾಲರ,

ಸಿಡುಬು, ಪ್ಲೇಗ್‌ನಂತಹ ಭಯಂಕರ ರೋಗಗಳು ಕಾಡಿಸುತ್ತಿದ್ದವು. ಹಳ್ಳಿಗಾಡಿನ ಜನರಿಗೆ ಮೂಲಭೂತ ಸೌಲಭ್ಯಗಳು ದೊರಕುವುದೇ ಕಷ್ಟಕರವಾಗಿರುವಾಗ ವೈದ್ಯಕೀಯ ಸೌಲಭ್ಯ ದೊರಕುವುದಂತೂ ಕನಸಿನ ಮಾತೇ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಸೇವೆ ಸಲ್ಲಿಸಲು ನಿರ್ಧರಿಸಿದರು. 1943-44 ರ ವೇಳೆಯಲ್ಲಿ ಸಿ.ಬಂದೀಗೌಡರ ಏಕೈಕ ಸಹೋದರ ಜವರೇಗೌಡರು ಅಕಾಲ ಮರಣಕ್ಕೆ ಈಡಾದಾಗ ಪಾಂಡವಪುರದಿಂದ ತಮ್ಮ ಚಿಕಿತ್ಸಾಲಯವನ್ನು ಸ್ಥಳಾಂತರಿಸಿ 1944 ರಲ್ಲಿ ಶ್ರೀರಂಗಪಟ್ಟಣದಲ್ಲಿ ಪುನರಾಂಭಿಸಿದರು. ತಮ್ಮ ಅಜ್ಜಿ ಕಲ್ಯಾಣಮ್ಮನವರ ಸವಿನೆನಪಿನಲ್ಲಿ ಚಿಕಿತ್ಸಾಲಯಕ್ಕೆ 'ಕಲ್ಯಾಣ ಚಿಕಿತ್ಸಾಲಯ' ಎಂದು ಹೆಸರಿಟ್ಟರು.[6] ಹೆಸರಿಗೆ ತಕ್ಕಂತೆ ಲೋಕ ಕಲ್ಯಾಣ ಬಯಸುವುದೇ ಇವರ ಉದ್ದೇಶವಾಗಿತ್ತು. ವೈದ್ಯ ವೃತ್ತಿಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡ ಇವರು ಬಂದ ರೋಗಿಗಳಲ್ಲಿ ಜಾತಿ-ಮತ, ಬಡವ-ಬಲ್ಲಿದ, ಎಂಬುದನ್ನು ಪರಿಗಣಿಸದೇ ಎಲ್ಲರನ್ನೂ ಸಮಾನವಾಗಿ ಕಂಡು ತಮ್ಮ ಚಿಕಿತ್ಸೆಯನ್ನು ನೀಡುತ್ತಿದ್ದರು. ಮೊದಲು ಯಾರು ಬರುವರೋ ಅವರಿಗೆ ಚಿಕಿತ್ಸೆ ನೀಡುತ್ತಿದ್ದರು. ಎಲ್ಲರೂ ಸರದಿಯಲ್ಲೇ ನಿಂತು ತಮ್ಮ ಸರದಿ ಬರುವವರೆಗೆ ಕಾಯ್ದು ಚಿಕಿತ್ಸೆ ಪಡೆಯಬೇಕಾಗಿತ್ತು. ಒಬ್ಬ ಶ್ರೀಮಂತ ಜಮೀನ್ದಾರ ಬಂದರೂ ಆತ ಬಡವರೊಂದಿಗೆ ನಿಂತು ತನ್ನ ಸರದಿ ಬರುವವರೆಗೆ ಕಾಯ್ದು ಚಿಕಿತ್ಸೆಗಾಗಿ ಕಾಯಬೇಕಾಗಿತ್ತು.[7] ಕೆಲವೊಮ್ಮೆ ಈ ರೀತಿ ನಿಲ್ಲಲು ಆಗದ ಎಷ್ಟೋ ಶ್ರೀಮಂತರು ಮೈಸೂರಿಗೆ ತೆರಳಿದರೆ ಬಡವರಿಗೆ ಅನಿವಾರ್ಯವಾಗಿ ಕಾಯಲೇಬೇಕಾದಂತಹ ಪರಿಸ್ಥಿತಿ ಅಲ್ಲಿ ಇತ್ತು.

ಮೇಲ್ಕಂಡ ಕಾರಣದಿಂದಾಗಿ ಹಾಗೂ ಬಂದೀಗೌಡರ ಮಾತೃ ಹೃದಯದ ಚಿಕತ್ಸೆಯಿಂದಾಗಿ ಹಾಗೂ ಕೈಗೆಟಕುವ ದರದಿಂದಾಗಿ ಇವರ ಚಿಕಿತ್ಸಾಲಯ ಯಾವಾಗಲೂ ಜನಸಂದಣಿಯಿಂದ ಕಿಕ್ಕಿರಿದು ತುಂಬಿರುತ್ತಿತ್ತು. ಇದಕ್ಕೂ ಒಂದು ಕಾರಣವಿದೆ. ಗೌಡರು ಏನೇ ಚಿಕಿತ್ಸೆ ನೀಡಿದರೂ ಅವರು ಅದಕ್ಕೆ ಪಡೆಯುತ್ತಿದ್ದ ಶುಲ್ಕ ಕೇವಲ ಒಂದಾಣೆ ಮಾತ್ರ. ಈ ದರ ಪ್ರತಿಯೊಬ್ಬ ಬಡವನಿಗೆ ಕೈಗೆ ಎಟಕುವಂತೆ ಇತ್ತು. ಒಂದಾಣೆ ಪಡೆಯುವುದರಿಂದಾಗಿ ಇವರು 'ಒಂದಾಣೆ ಡಾಕ್ಟರ್' ಎಂದೇ ಪ್ರಸಿದ್ದಿಯಾದರು. ಇವರು ಎಂತಹ ಚಿಕಿತ್ಸೆ ನೀಡಿದರೂ ಹೆಚ್ಚಿಗೆ ದುಡ್ಡಿಗೆ ಅಪೇಕ್ಷೆ ಪಡದೇ ಕೇವಲ ಒಂದಾಣೆ ಪಡೆದು, ನಾನು ಮಾಡುತ್ತಿರುವ ಸೇವೆ ದುಡ್ಡಿಗಾಗಿ ಅಲ್ಲ, ಜನಸೇವೆಗಾಗಿ ಎಂಬುದು ಸಾರಿ ಹೇಳುವಂತಿತ್ತು. ಅಂದು ಇಂದಿನಂತೆ ಔಷಧಿ ಅಂಗಡಿಗಳು ಇರಲಿಲ್ಲ. ಹೀಗಾಗಿ ತಮ್ಮ ಬಳಿ ಇರುವ ರೋಗಿಗಳ ರೋಗಕ್ಕೆ ಅನುಗುಣವಾಗಿ ವೈದ್ಯರೇ ಹಲವಾರು ರಾಸಾಯನಿಕ ವಸ್ತುಗಳನ್ನು ಬಳಸಿ ತಮ್ಮ ಕೈಯಾರೆ ಔಷಧಿಯನ್ನು ಸಿದ್ದಪಡಿಸಿ ರೋಗಿಗಳಿಗೆ ನೀಡುತ್ತಿದ್ದರು. ಇವರು ಎಂದಿಗೂ ರೋಗಿಗಳಿಗೆ ಹಣಕ್ಕಾಗಿ ಶೋಷಣೆ ಮಾಡಲಿಲ್ಲ. ಹಲವಾರು ಹಳ್ಳಿಗಳಿಂದ ಶ್ರೀರಂಗಪಟ್ಟಣಕ್ಕೆ ಬಂದು ಚಿಕಿತ್ಸೆ ಪಡೆಯದ, ತೀವ್ರ

ಕಾಯಿಲೆ ಇದ್ದವರಿಗೆ ಬಂಧೀಗೌಡರು ಎತ್ತಿನಗಾಡಿ ಇಲ್ಲವೇ ಸೈಕಲ್ ಮೂಲಕ ಅವರಿದ್ದಲ್ಲಿಗೇ ತೆರಳಿ ಚಿಕಿತ್ಸೆ ನೀಡಿದ ಎಷ್ಟೋ ಉದಾಹರಣೆಗಳುಂಟು.

ಇವರ ಇನ್ನೊಂದು ವಿಷಯವನ್ನು ಇಲ್ಲಿ ಹೇಳುವುದು ಅತ್ಯಂತ ಸೂಕ್ತ ಎಂದೆನಿಸುತ್ತದೆ. ವೈದ್ಯರು ತಮ್ಮಲ್ಲಿ ಬರುವ ರೋಗಿಗಳ ಹೆಸರು, ಅವರಿಗೆ ಇರುವ ಕಾಯಿಲೆ, ನೀಡಿದ ಚಿಕಿತ್ಸೆ, ಮುಂತಾದ ವಿವರಗಳನ್ನು ತಮ್ಮ ಒಂದು ರಿಜಿಸ್ಟರ್‌ನಲ್ಲಿ ದಿನಾಂಕವಾರು ನಮೂದಿಸಿದ್ದಾರೆ. ರಿಜಿಸ್ಟರ್‌ನಲ್ಲಿ ವೈದ್ಯರ ಅಕ್ಷರಗಳಂತೂ ಮುತ್ತು ಪೋಣಿಸಿದಂತೆ ತುಂಬಾ ಸುಂದರವಾಗಿ, ಸ್ಪಷ್ಟವಾಗಿ ಕಾಣುತ್ತವೆ.[8] ಆ ರಿಜಿಸ್ಟರ್‌ನ್ನು ಇಂದಿಗೂ ನಾವು ನೋಡಬಹುದು. ಅವರ 2ನೇ ಮಗ ಡಾ॥ಸುಜಯ್‌ಕುಮಾರ್ ತಂದೆ ಯಂತೆ ಎಂ.ಬಿ.ಬಿ.ಎಸ್. ಪದವಿ ಮುಗಿಸಿ ಗಾಂಧೀ ಜಯಂತಿಯಂದೇ ಅಂದರೆ ಅಕ್ಟೋಬರ್–2, 1979 ರಂದು ತಮ್ಮ ವೃತ್ತಿ ಜೀವನವನ್ನು ತಂದೆಯೊಂದಿಗೆ ಪ್ರಾರಂಭಿಸಿದರು. ಅವರೊಂದಿಗೆ ಕೈ ಜೋಡಿಸಿ ತಂದೆಯಂತೆ ಸರಳ ಸಜ್ಜನಿಕೆ ಹೊಂದಿದವರು ಇವರಾಗಿದ್ದಾರೆ. ಇಂದಿಗೂ ಚಿಕಿತ್ಸಾಲಯವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಬಂದೀಗೌಡರು ತಮ್ಮ ಚಿಕಿತ್ಸೆಯನ್ನು 1996 ನೇ ಇಸವಿವರೆಗೆ ನಿರಂತರವಾಗಿ 1944 ರಿಂದ ನೀಡುತ್ತಾ ಬಂದರು. ಸರಿಸುಮಾರಾಗಿ 52 ವರ್ಷಗಳ ಕಾಲ ಶ್ರೀರಂಗಪಟ್ಟಣ ಹಾಗೂ ಅದರ ಸುತ್ತಮುತ್ತಲಿನ ಹಳ್ಳಿಗಳ ಹಲವಾರು ರೋಗಿಗಳ ಆಶಾಕಿರಣವಾಗಿ ಮಾತೃಹೃದಯದ ಯಾವುದೇ ಹೆಚ್ಚಿನ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿದವರು. ಇವರ ಪ್ರಾಮಾಣಿಕ ಸೇವೆಯಿಂದಾಗಿ ಇವರ ಹೆಸರು ಜನಮಾನಸದಲ್ಲಿ ಇಂದಿಗೂ ಹಚ್ಚ ಹಸಿರಾಗಿದೆ.

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರಾಗಿ ಸಿ.ಬಂದೀಗೌಡರು

ಸಕ್ಕರೆ ಜಿಲ್ಲೆ ಎಂದು ಗುರುತಿಸಲ್ಪಟ್ಟಿರುವ ಮಂಡ್ಯ ಜಿಲ್ಲೆಯು ಮೈಸೂರು ಜಿಲ್ಲೆಯ ಪರಿಧಿಯಿಂದ ಪ್ರತ್ಯೇಕವಾಗಿ ಸ್ವತಂತ್ರ್ಯ ಜಿಲ್ಲೆಯಾಗಿ 1939 ರ ಜುಲೈ 1 ರಂದು ಅಸ್ತಿತ್ವಕ್ಕೆ ಬಂದಿತು. ಈ ಜಿಲ್ಲೆಯ ಜೀವನಾಡಿಗಳಾದ ಮೈಸೂರಿನ ಮಹಾರಾಜರಾದ ಶ್ರೀಮಾನ್ ನಾಲ್ವಡಿ ಕೃಷ್ಣರಾಜ ಒಡೆಯರ್, ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಶ್ರಮ, ಸಾರ್ಥಕಸೇವೆಯ ಫಲವಾಗಿ ವಿಶ್ವ ವಿಖ್ಯಾತ ಕೃಷ್ಣರಾಜಸಾಗರ ನಿರ್ಮಾಣಗೊಂಡು ಮಂಡ್ಯ ಜಿಲ್ಲೆಯನ್ನು ಹಸಿರು ಜಿಲ್ಲೆ ಹಾಗೂ ಸಕ್ಕರೆ ನಾಡಾಗಿಸಿದ್ದರು.

ಈ ಜಿಲ್ಲೆಯ ರೈತರ ಅವಶ್ಯಕತೆಗಳನ್ನು ಪೂರ್ಣಗೊಳಿಸಲು, ನಿಧಿ ಸಂಗ್ರಹಣೆ, ಎಲ್ಲಾ ವರ್ಗದ ಗ್ರಾಹಕರುಗಳೊಂದಿಗೆ, ಠೇವಣಾತಿ, ಸಾಲಗಳು ಹಣಕಾಸು ವ್ಯವಹಾರ ನಡೆಸಲು ನಿತ್ಯ ಸಚಿವರೆಂದು ಖ್ಯಾತರಾಗಿದ್ದ ಕೆ.ವಿ. ಶಂಕರಗೌಡರು ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸ್ಥಾಪಿಸಿದರು. ಈ ಬ್ಯಾಂಕು ರಿಜಿಸ್ಟರ್ ಎ.ಆ.ಎಂ.ಡಿ:

268:26-10-1953 ಯಾಗಿದ್ದ 28-02-1954 ರಂದು ಆರಂಭವಾಯಿತು. ಈ ಬ್ಯಾಂಕಿನ ನಿರ್ದೇಶಕರಾಗಿ ಅಜೀವ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಹಲವರು ಸೇವೆ ಸಲ್ಲಿಸಿದ್ದಾರೆ. ಇಂತಹ ಬ್ಯಾಂಕ್ ಏಳಿಗೆಗೆ ಶ್ರಮಿಸಿದವವರಲ್ಲಿ ಸಿ.ಬಂದೀಗೌಡರು ಒಬ್ಬರು.[9] ಇವರು 15-06-1954 ರಿಂದ ಸೆಪ್ಟಂಬರ್ 1972 ರವರೆಗೆ ನಿರ್ದೇಶಕರಾಗಿ, ಸದಸ್ಯರಾಗಿ, ಕಾರ್ಯನಿರ್ವಹಿಸಿದ್ದಾರೆ. ಬ್ಯಾಂಕ್‌ನ ಒಂದೆರಡು ಸಭೆ ಗಳನ್ನು ಹೊರತುಪಡಿಸಿದರೆ ಉಳಿದು ಎಲ್ಲಾ ಸಭೆಗಳಲ್ಲಿ ಭಾಗವಹಿಸಿ ಬ್ಯಾಂಕ್ ಏಳಿಗೆ ತಮ್ಮ ಜೀವನವನ್ನು ಅರ್ಪಿಸಿಕೊಂಡಿದ್ದಾರೆಂದು ಹೇಳಬಹುದು. ಇವರು 1964 ರಿಂದ 1970 ರವರೆಗೆ ವಿಧಾನ ಪರಿಷತ್ತು ಸದಸ್ಯರಾಗಿದ್ದು, ಸಂದರ್ಭದಲ್ಲಿಯೂ ಸಹ ಬ್ಯಾಂಕ್ ಸಂಪರ್ಕವನ್ನು ಕಳೆದುಕೊಂಡಿಲ್ಲವೆಂದು ಹೇಳಬಹುದು. ಎರಡು ದಶಕವರೆಗೂ ಬ್ಯಾಂಕ್ ಸಭೆಗೆ ಹಾಜರಾಗಿದ್ದು, ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ತಿಳಿಸಿದ್ದಾರೆ. ಅಲ್ಲದೇ ಬ್ಯಾಂಕ್ ಉನ್ನತಗಾಗಿ, ಏಳಿಗೆಗಾಗಿ ಶ್ರಮಿಸಿದ್ದಾರೆ.

ಕೋಮುಸೌಹಾರ್ದತೆ : ಸಿ.ಬಂದೀಗೌಡರು :-

ಬಂದೀಗೌಡರು ಕೇವಲ ಸ್ವಾತಂತ್ರ್ಯ ಹೋರಾಟದ ಮೂಲಕ ರಾಷ್ಟ್ರ ಸೇವೆ, ವೈದ್ಯಕೀಯ ವೃತ್ತಿಯ ಮೂಲಕ ಸಮಾಜ ಸೇವೆಗೆ ಮಾತ್ರ ಸೀಮಿತವಾಗಿರದೆ ಇನ್ನೂ ಹಲವಾರು ಕ್ಷೇತ್ರಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇಂದಿನ ಈ ಯುಗದಲ್ಲಿ ಸಮಾಜ ಹೇಗೆ ಬೆಳೆಯುತ್ತಾ ಹೋಯಿತೋ ಅದೇ ರೀತಿ ಧರ್ಮ, ಜಾತಿಗಳ ಮಧ್ಯೆ ಕಂದಕ ಹೆಚ್ಚಾಗುತ್ತಾ ಹೊರಟಿದೆಯೇ ಹೊರತು, ಬಾಂಧವ್ಯ -ಸಾಮರಸ್ಯದ ಮಧುರ ಭಾವನೆ ಇಂದು ನಮಗೆ ಕಾಣಸಿಗುತ್ತಿಲ್ಲ. ಇದರ ಪರಿಣಾಮ ಎಲ್ಲೆಂದರಲ್ಲಿ ಕೋಮು-ಗಲಭೆ, ಕೋಮು ಸಂಘರ್ಷಗಳು ನಡೆಯುತ್ತಲೇ ಇವೆ. ಇದಕ್ಕೆ ಕಾರಣಗಳನ್ನು ನೋಡುತ್ತಾ ಹೋದಾಗ ಕೆಲವೊಂದು ಕಣ್ಣಿಗೆ ಕಾಣದ ಸಮಾಜಘಾತುಕ ಶಕ್ತಿಗಳು ಕೆಲಸ ಮಾಡುತ್ತಿವೆ. ಕೋಮು-ಗಲಭೆ, ಕೋಮು-ಸಂಘರ್ಷದ ಬೆಂಕಿಯಲ್ಲಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವ ಕೆಲಸವನ್ನು ಮಾಡುತ್ತಿವೆ, ಇಂತಹ ಕೋಮು-ಗಲಭೆಗಳನ್ನು ಹತ್ತಿಕ್ಕುವ, ಜನರಲ್ಲಿ ಕೋಮು, ಸಾಮರಸ್ಯದ ಕೆಲಸವನ್ನು ಬಂದೀಗೌಡರು ಮಾಡುತ್ತಿದ್ದಾರೆ.

ಒಮ್ಮೆ ಕೆಲವು ಸಂಘಟನೆಗಳು ಟಿಪ್ಪು ಧಮಾಂಧ ಟಿಪ್ಪು ದೇಶದ್ರೋಹಿ, ಟಿಪ್ಪು ಕನ್ನಡ ವಿರೋಧಿ ಎಂಬಿತ್ಯಾದಿ ಮಾತುಗಳಿಂದ ರಾಷ್ಟ್ರಭಕ್ತಿ, ಬ್ರಿಟೀಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಸ್ವಾತಂತ್ರ್ಯ -ಹೋರಾಟಗಾರ ಟಿಪ್ಪು ಸುಲ್ತಾನರ ಚಾರಿತ್ಯ ವಧೆ ನಡೆಯತೊಡಗಿತು. ಇದಕ್ಕೆ ಕೆಲವು ಮಾಧ್ಯಮಗಳು ಪ್ರಚಾರವನ್ನು ಮಾಡಿದವು. ಇದು ಬಂದೀಗೌಡರ ಕಿವಿಗೂ ಬಿದ್ದಿತು. ಗಾಂಧೀವಾದಿಗಳು, ಗಾಂಧೀತತ್ವಗಳನ್ನು ಅನುಸರಿಸುತ್ತಿರುವ ಬಂದೀಗೌಡರ ಮನಸ್ಸು ತಳಮಳಗೊಂಡಿತು. ಮಾನವಧರ್ಮ ಒಂದೇ ಎಂದು ನಂಬಿದ ಬಂದೀಗೌಡರ ಜೀವ ನರಳಿತು. ಇದಕ್ಕೆಲ್ಲಾ ಅಂತ್ಯ ಹಾಡಬೇಕು. ನಿಜವಾದ ಸಂಗತಿ ಜನರಿಗೆ ತಲುಪಬೇಕು. ಟಿಪ್ಪು ಏನು, ಟಿಪ್ಪು ಯಾರು;

ಟಿಪ್ಪುವಿನ ಕನಸುಗಳು ಏನಾಗಿದ್ದವು ಎಂಬುದರ ನಿಜವಾದ ಟಿಪ್ಪುವನ್ನು ಜನರಿಗೆ ತಿಳಿಯಪಡಿಸಬೇಕೆಂದು ಬಂದೀಗೌಡರು ನಿರ್ಧರಿಸಿದರು. ಇದಕ್ಕಾಗಿ ತಮ್ಮ ಸಮಾನಮನಸ್ಕ ರೊಡನೆ ಈ ವಿಷಯದ ಕುರಿತಾಗಿ ಚರ್ಚಿಸಿದರು. ಅವರಿಂದ ಬೆಂಬಲವೂ ದೊರಕಿತು. ಇದಕ್ಕಾಗಿ ಅವರು ಟಿಪ್ಪುವಿನ ಕಾರ್ಯಕ್ಷೇತ್ರ, ಟಿಪ್ಪುವಿನ ರಾಜಧಾನಿ ಶ್ರೀರಂಗಪಟ್ಟಣವನ್ನೇ ಆರಿಸಿಕೊಂಡರು. ಜೊತೆಗೆ ಶ್ರೀರಂಗಪಟ್ಟಣ ಬಂದೀಗೌಡರ ಕಾರ್ಯಕ್ಷೇತ್ರವೂ ಹೌದು. ಇದಕ್ಕಾಗಿ ಅವರು ನಿರ್ಧರಿಸಿದ ಕಾರ್ಯಕ್ರಮದ ಹೆಸರು : "ಟಿಪ್ಪು ಸಂಸ್ಮರಣೆ : ಕೋಮು ಸೌಹಾರ್ದತೆ ಸಮಾವೇಶ" ಎಂದು ಇದನ್ನು ಶ್ರೀರಂಗಪಟ್ಟಣದಲ್ಲಿ ಅದ್ಧೂರಿಯಾಗಿ ನಡೆಸಲು ನಿರ್ಧರಿಸಿದರು.[10]

ಕಾರ್ಯಕ್ರಮದ ರೂಪುರೇಖೆ ಸಿದ್ದವಾಯಿತು. ಅದಕ್ಕಾಗಿ ಒಂದು ದಿನಾಂಕವನ್ನು ನಿರ್ಧರಿಸಿದರು. ಅದು ಮೇ-4 ಇದೇ ದಿನಾಂಕ ಏಕೆ ಎಂದರೆ ಅಂದು ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಬ್ರಿಟೀಷರ ವಿರುದ್ದ ಹೋರಾಡಿ ಶ್ರೀರಂಗಪಟ್ಟಣದ ವಾಟರ್‌ಗೇಟ್ ಬಳಿಯಲ್ಲಿ 1799 ರ ಮೇ-4 ರಂದು ವೀರ ಮರಣವನ್ನಪ್ಪಿದ ಸುದಿನ ಅದಾಗಿತ್ತು. ಈ ಕಾರ್ಯಕ್ರಮ ಆಯೋಜಿಸುವ ಮುನ್ನ ಈ ದಿನದಂದು ಪ್ರತಿವರ್ಷ ತಪ್ಪದೇ ಬೆಳಗಿನ ಜಾವ ಟಿಪ್ಪು ಮರಣವನ್ನಪ್ಪಿದ ಸ್ಥಳಕ್ಕೆ ಹೋಗಿ ಗೌರವ ಸಮರ್ಪಿಸುವುದು. ತದನಂತರ ಸಾಯಂಕಾಲ ಟಿಪ್ಪುವಿನ ಸ್ಮರಣೆಯಲ್ಲಿ ಬಂದ ಸರಳ ಸಮಾರಂಭ ಏರ್ಪಡಿಸುತ್ತಾರೆ. ಬಂದೀಗೌಡರು ತಮ್ಮ ಬಾಲ್ಯದಲ್ಲಿ ತಮ್ಮ ಹಿರಿಯರಿಂದ ತಿಳಿದ ಟಿಪ್ಪುವಿನ ಸ್ವಾತಂತ್ರ್ಯ ಪ್ರೇಮ, ಜನಪರ ಆಡಳಿತ, ಧರ್ಮ ನಿರಪೇಕ್ಷತೆಯೇ ಕಾರಣವಾಗಿದೆ. ಇದಕ್ಕೂ ಹೆಚ್ಚಿಗೆ ಎಂದರೆ ಟಿಪ್ಪು ಜಮೀನ್ದಾರಿ ಪದ್ಧತಿ ಹೋಗಲಾಡಿಸಿದ್ದು, ಮುಂದೆ 1952 ರಲ್ಲಿ ಸರಕಾರವು 'ಗೇಣಿ ಶಾಸನ' ತರಲು ತನ್ನ ತಯಾರಿ ನಡೆಸಿಕೊಂಡಾಗ ಒಬ್ಬ ಜಮೀನ್ದಾರನ ಮಗನಾಗಿದ್ದ ಬಂದೀಗೌಡರು ಶಾಸನವನ್ನು ತಮ್ಮ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜಾರಿಗೆ ತರಲು ಮುಂದಾಗಿದ್ದು, ಇದಕ್ಕಾಗಿ ಹಳ್ಳಿ-ಹಳ್ಳಿಗಳನ್ನು ತಿರುಗಾಡಿ ಜನರಿಗೆ ಶಾಸನದ ಬಗ್ಗೆ ತಿಳುವಳಿಕೆ ನೀಡಿದ್ದು, ಇವೆಲ್ಲಾ ಟಿಪ್ಪುವಿನ ಪ್ರಭಾವವೇ ಇರಬೇಕು. ಈ ಎಲ್ಲಾ ಕಾರಣಗಳಿಂದಾಗಿ ಕೋಮು ಸೌಹಾರ್ದತಾ ಸಮಾವೇಶ ನಡೆಸುವುದಕ್ಕಾಗಿ ಶ್ರೀರಂಗಪಟ್ಟಣ ಮತ್ತು ಮೇ-4 ನ್ನೇ ಆರಿಸಿಕೊಂಡಿದ್ದು.[11]

ಸಮಾವೇಶದ ರೂಪುರೇಷೆ, ದಿನಾಂಕವೇನೋ ನಿರ್ಧರಿಸಲಾಯಿತು. ಆದರೆ ಸಮಾವೇಶ ಸಂಘಟಿಸಲು ಮುಖ್ಯವಾಗಿ ಬೇಕಾಗಿದ್ದು ಹಣ, ಒಂದು ಸಮಾವೇಶ ಸಂಘಟಿಸಬೇಕೆಂದರೆ ಸುಮಾರಾಗಿ ಒಂದು ಲಕ್ಷ ರೂಪಾಯಿಗಳಾದರೂ ಬೇಕು, ಇದಕ್ಕೆ ಹಣವನ್ನು ಎಲ್ಲಿಂದ ಸಂಗ್ರಹಿಸುವುದು. ಬಂದೀಗೌಡ್ರು ಅರ್ಧ ದಶಕಗಳ ಕಾಲ ವೈದ್ಯಕೀಯ ವೃತ್ತಿಯಲ್ಲಿದ್ದರು. ಅದು ನಿಜ ಆದರೆ ಮೊದಲೇ ಹೇಳಿದಂತೆ ಅವರು ಹಣಕ್ಕಾಗಿ ವೈದ್ಯಕೀಯ ಸೇವೆ ಸಲ್ಲಿಸದೇ ಸಮಾಜಸೇವೆಗಾಗಿ ವೈದ್ಯಕೀಯ ವೃತ್ತಿ

ಮಾಡಿದವರು. ಅದು ಮೇಲಾಗಿ ' ಒಂದಾಣೆ ಡಾಕ್ಟರು' ಒಂದಾಣೆಯಲ್ಲಿ ಏನು ತಾನೇ ಗಳಿಸಲು ಸಾಧ್ಯ? ತಮ್ಮ ಮಗನಿಗೆ ತಮ್ಮ ಜವಾಬ್ದಾರಿಯನ್ನು, ಕಲ್ಯಾಣಿ ಚಿಕಿತ್ಸಾಲಯವನ್ನು ವಹಿಸಿಕೊಟ್ಟಾಗ ಶುಲ್ಕ ಒಂದಾಣೆಯಿಂದ ಒಂದು ರೂಪಾಯಿಗೆ ಬಂದು ತಲುಪಿತ್ತು.

ವೈದ್ಯಕೀಯ ಸೇವೆಯ ಜೊತೆಯಲ್ಲಿ ರಾಜಕೀಯದ ಹಲವು ಸ್ತರಗಳಲ್ಲಿ ಅಧಿಕಾರ ಅನುಭವಿಸಿದವರು ಬಂದೀಗೌಡರು. ಮೊದಲಿಗೆ ಮೈಸೂರಿನ ರಾಜಪ್ರತಿನಿಧಿ ಸಭೆಯ ಸದಸ್ಯರು, ಶ್ರೀರಂಗಪಟ್ಟಣದ ಮುನ್ಸಿಪಾಲಿಟಿಯ ಪ್ರಥಮ ಅಧ್ಯಕ್ಷ, ಎಐಸಿಸಿ ಸದಸ್ಯ ಪಕ್ಷಗಳಲ್ಲಿ ಅಧ್ಯಕ್ಷ ಸ್ಥಾನ, ವಿವಿಧ ಸಂಸ್ಥೆಗಳ ನಿರ್ದೇಶಕ ಸ್ಥಾನವನ್ನು ನಿರ್ವಹಿಸಿದ್ದರೂ ಅವನ್ನು ಎಂದೂ ದುರುಪಯೋಗಪಡಿಸಿಕೊಳ್ಳದೇ ಜನರ ಸೇವೆ ಮಾಡಲು ಸಿಕ್ಕಿರುವ ವಿವಿಧ ರೀತಿಯ ಅವಕಾಶಗಳು ಎಂದೇ ಭಾವಿಸಿದ್ದರು. ಇದಕ್ಕೂ ಹೆಚ್ಚಾಗಿ ಗಾಂಧೀಜಿಯವರ ಮಾತು " ಅಗತ್ಯಕ್ಕಿಂತ ಹೆಚ್ಚಿನ ಹಣ ಸಂಗ್ರಹ ಪಾಪ" ಎಂಬುದನ್ನು ಚಾಚೂ ತಪ್ಪದೇ ಪಾಲಿಸಿದವರು. ಪಾಲಿಸುತ್ತಲೇ ಬಂದಿದ್ದಾರೆ.[12]

ಈ ಮೇಲಿನ ಎಲ್ಲಾ ಕಾರಣಗಳಿಂದ ಗೌಡರ ಬಳಿ ಜನಸಂಪತ್ತು ಇತ್ತೇ ವಿನಃ ಧನ ಸಂಪತ್ತು ಅಲ್ಲ. ಇವರ ಸಂಗಡಿಗರ ಪರಿಸ್ಥಿತಿಯು ಇದಕ್ಕಿಂತ ಏನೂ ಭಿನ್ನವಾಗಿರಲಿಲ್ಲ. ಇದಕ್ಕಾಗಿ ಅವರು ಚಿಂತಿಸಲಿಲ್ಲ. 'ಶುದ್ದ ಹಸ್ತರಿಗೆ ಒಳ್ಳೆಯ ಕೆಲಸಕ್ಕೆ ಎಂದಿಗೂ ಹಣಕ್ಕೆ ಬರವಿಲ್ಲ ಎಂಬುದು ಅವರ ನಿಲುವಾಗಿತ್ತು. ನನ್ನನ್ನು ಬೆಳೆಸಿದ ಜನರ ಬಳಿ ಹೋದರೆ ಖಂಡಿತಾ ಜನರು ಕೈಎತ್ತಿ ದಾನ ಮಾಡುತ್ತಾರೆ ಎನ್ನುವ ಭರವಸೆಯಿಂದ ಜನರ ಬಳಿ ಹೋಗಿ ಹಣ ಸಂಗ್ರಹ ಮಾಡಲು ನಿರ್ಧರಿಸಿದರು.

ಜನರ ಬಳಿ ಹೋಗುವುದರಿಂದ ಎರಡು ಲಾಭಗಳಿದ್ದವು. ಒಂದು ಸಮಾವೇಶಕ್ಕಾಗಿ ಹಣ ಸಂಗ್ರಹ, ಇದಕ್ಕಿಂತಲೂ ಹೆಚ್ಚಿನದು ಎಂದರೆ ಸಮಾವೇಶದ ಉದ್ದೇಶಗಳನ್ನು ಜನರಿಗೆ ತಿಳಿ ಹೇಳುವುದಾಗಿತ್ತು. ಒಟ್ಟಾರೆಯಾಗಿ ಹೇಳಬೇಕೆಂದರೆ ತಮ್ಮ ಇಳಿ ವಯಸ್ಸಿನಲ್ಲೂ ತಾವು ಕೈಗೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಎಲ್ಲರ ಮನ ಮುಟ್ಟುವಂತೆ ಮಾಡಬೇಕು ಎಂಬುದು. ಇದಕ್ಕಾಗಿ ಬಹಳಷ್ಟು ಜನ ತಮ್ಮ ಕೈಲಾದಷ್ಟು ಸಹಾಯವನ್ನು ಸಲ್ಲಿಸಿದರು. ಇದರ ಮಧ್ಯೆ ಒಂದು ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಅಂದಿನ ಒಬ್ಬ ಸಂಸದರು ಹಣ ಕೊಡುವುದಾಗಿ ಹೇಳಿದರು. ಅನಂತರ ಆ ಸಮಾವೇಶದಲ್ಲಿ ನನ್ನ ನೇತೃತ್ವದಲ್ಲಿ ನಡೆಯುವುದಿಲ್ಲವೆಂದು ಅರಿಕೆ ಯಾದಾಗ ಆಮೇಲೆ ಬನ್ನಿ, ನಾಳೇ ಬನ್ನಿ ಎಂದು ತನ್ನ ಸಹಾಯಕರ ಮೂಲಕ ಹೇಳಿಸಿ ಬಂದೀಗೌಡರು ಮತ್ತು ಅವರ ಸಂಘಟಕರ ಕೈಗೆ ಸಿಗದೇ ಓಡಾಡ ತೊಡಗಿದ ; ಇದನ್ನು ತಿಳಿದ ಗೌಡರು ಆತ ಸಂಸದ ಎಂಬುದನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳದೇ ಸಂಸದನಿಗೆ ತನ್ನ ತಪ್ಪಿನ ಅರಿವು ಆಗುವ ಹಾಗೆ ಪತ್ರವನ್ನು ಬರೆದರು. ಗೌಡರು ಎಷ್ಟು ಸೌಮ್ಯ ಸ್ವಭಾವದವರೋ ಅಷ್ಟೇ ಕೆಲವು ಪ್ರಸಂಗಗಳಲ್ಲಿ ತುಂಬಾ ಕಠಿಣವೂ ಆಗಿದ್ದರು.[13]

ಒಟ್ಟಾರೆಯಾಗಿ ಸಮಾವೇಶದ ಉದ್ದೇಶ ಜನರಲ್ಲಿ ನೆಲೆಯೂರಿದ್ದ ಕೋಮುಭಾವನೆ ಹೋಗಲಾಡಿಸಿ ಉತ್ತಮ ಸಮಾಜ ನಿರ್ಮಿಸುವುದಾಗಿತ್ತು. ಸಮಾವೇಶವು ಯಶಸ್ವಿಯಾಗಿಯೂ ಆಯಿತು. ಗೌಡರು ಅಂದುಕೊಂಡ ಹಾಗೆ ಶ್ರೀರಂಗಪಟ್ಟಣದಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು.

ಇದೊಂದೆ ಕಾರ್ಯಕ್ರಮ ಮಾಡಿ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಗೌಡರು ಕೈ ಕಟ್ಟಿ ಕುಳಿತುಕೊಳ್ಳಲಿಲ್ಲ ಮಂಡ್ಯ ಜಿಲ್ಲೆಯಲ್ಲಿ ಎಲ್ಲೇ ಆಗಲಿ ಕೋಮು-ಗಲಭೆ ನಡೆದ ವಿಷಯ ಕಿವಿಗೆ ಬಿದ್ದರೆ ಸಾಕು, ಅಲ್ಲಿಗೆ ಸ್ವತಃ ತೆರಳಿ ಜನರ ಮನಸ್ಸಿನಲ್ಲಿರುವ ಆತಂಕ, ಭಯ, ನಿವಾರಿಸಿ ಸಾಮರಸ್ಯದ ವಾತಾವರಣ ಮೂಡಿಸಿ ಬಂದಾಗಲೇ ಇವರಿಗೆ ತೃಪ್ತಿಯಾಗುವುದು. ಇದಕ್ಕೆಲ್ಲಾ ಕಾರಣ ಗಾಂಧೀಜಿಯವರ ಆದರ್ಶಗಳು.

ಬಂದೀಗೌಡರ ಸರ್ವೋದಯ ಸಮಾವೇಶ

ಇಂದಿನ ವೇಗದ ಯುಗದಲ್ಲಿ ಗುರು-ಹಿರಿಯರನ್ನು ಮಹಾನ್ ವ್ಯಕ್ತಿಗಳನ್ನು ಸ್ಮರಿಸಿಕೊಳ್ಳುವುದಕ್ಕಾಗಿ, ಅವರ ನೆನಪಿನಲ್ಲಿ ಒಂದು ದಿನ ಕಳೆಯಲು ಎಷ್ಟೋ ಜನಕ್ಕೆ ಆಗುತ್ತಿಲ್ಲ. ಮಹಾನ್ ವ್ಯಕ್ತಿಗಳ ಜನ್ಮದಿನವೋ ಅಥವಾ ಪುಣ್ಯತಿಥಿಗಾಗಿ ಸರ್ಕಾರ ರಜೆ ಘೋಷಿಸಿದರೆ ಆ ರಜಾದಿನವನ್ನು ತಮ್ಮ ಮೋಜು-ಮಸ್ತಿಗಾಗಿ ದಿನ ಕಳೆಯುವವರಿದ್ದಾರೆ. ಆದರೆ ಬಂದೀಗೌಡರು ಇದಕ್ಕೆಲ್ಲಾ ಅಪವಾದ.

ಗಾಂಧೀಜಿಯವರನ್ನು 1948 , ಜನವರಿ 30 ರಂದು ಗೋಡ್ಸೆ ಹತ್ಯೆಗೈಯ್ದ ನಂತರ ಅವರ ಚಿತಾಭಸ್ಮವನ್ನು ದೇಶದ ಪ್ರತಿಯೊಂದು ಮುಖ್ಯ ನದಿಗಳಲ್ಲಿ ವಿಸರ್ಜಿಸಲಾಯಿತು. ಅದೇ ರೀತಿ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲೂ ಗಾಂಧೀಜಿಯವರ ಚಿತಾಭಸ್ಮವನ್ನು ವಿಸರ್ಜಿಸಲಾಯಿತು. ಈ ದಿನವಂತೂ ಗೌಡರಿಗೆ ಸುದಿನವೆಂದೇ ಹೇಳಬೇಕು. ಆ ದಿನದಿಂದ ಇಲ್ಲಿಯವರೆಗೆ ಪ್ರತಿವರ್ಷ ತಪ್ಪದೇ ಆ ದಿನದಂದೇ ಸರ್ವೋದಯ ಸಮಾವೇಶ ಸಂಘಟಿಸಲಾಗುತ್ತಿದೆ. ಇದನ್ನು "ಪಶ್ಚಿಮ ವಾಹಿನಿ ಸಮಾವೇಶ" ಎಂದೂ ಕರೆಯಲಾಗುತ್ತದೆ. ಒಟ್ಟಾರೆಯಾಗಿ ಅದು 3 ದಿನಗಳ ಸಮಾವೇಶ ಆ ದಿನದಿಂದು ಗಾಂಧೀಜಿ ಅನುಯಾಯಿ ಗಳೆಲ್ಲರೂ ಅಲ್ಲಿ ಸೇರುತ್ತಾರೆ. ಆ ದಿನದಂದು ಗಾಂಧೀಜಿಯವರ ಆಚಾರ- ವಿಚಾರಗಳನ್ನು ನೆರೆದ ಜನರಿಗೆ, ಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಡೆಯುತ್ತವೆ. ಈ ಕಾರ್ಯಕ್ರಮಕ್ಕೆ ಗೌಡರೊಬ್ಬರೇ ಅಲ್ಲ, ಅವರ ಕುಟುಂಬದ ಪ್ರತಿಯೊಬ್ಬ ಸದಸ್ಯರು ಕಂಕಣ ಬದ್ದರಾಗಿ ಕೆಲಸ ಮಾಡುತ್ತಾರೆ. ಬಂದ ಅತಿಥಿಗಳಿಗೆ ಅದರ ಹಿಂದಿನ ದಿನದಿಂದಲೇ ಊಟ, ಚಹಾ, ಉಪಹಾರದ ವ್ಯವಸ್ಥೆ ಮಾಡಲಾಗುತ್ತದೆ. ಮೊದಲಿಗೆ ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮ ಇಂದು ಬೃಹತ್ ಪ್ರಮಾಣದ ಪಶ್ಚಿಮವಾಹಿನಿ ಸಮಾವೇಶವಾಗಿ ಪರಿವರ್ತಿತವಾಗಿದೆ. ಇದು ಆ ದಿನದಿಂದ ಇಲ್ಲಿಯವರೆಗೆ ಪ್ರತಿ ವರ್ಷ ತಪ್ಪದೇ ನಿಗದಿತ ದಿನ, ನಿಗದಿತವಾದ

ವೇಳೆ ನಡೆಯುತ್ತಾ ಬಂದಿದೆ. ಮುಂದೆಯೂ ನಡೆಯುತ್ತದೆ ಎಂಬ ವಿಶ್ವಾಸ ಗೌಡರದು. ಇದು ಗಾಂಧೀಜಿಯವರ ಬಗ್ಗೆ ಬಂದೀಗೌಡರ ಶ್ರದ್ದೆ, ಅಚಲ ವಿಶ್ವಾಸವನ್ನು ಎತ್ತಿ ತೋರಿಸುತ್ತದೆ.[14]

ಅಡಿ ಟಿಪ್ಪಣಿಗಳು.

1. ಪ್ರತಿಭಾವಂತ ಸಂಸದೀಯ ಪಟು- ಕಡಿದಾಳ್ ಮಂಜಪ್ಪ 1999–ಪು–06
2. ಸಿ.ಪಿ.ನಾಗರಾಜ–ಮೌನಸಾಧಕ ಡಾ.ಸಿ.ಬಂದೀಗೌಡ ಪುಟ–36
3. ರಾಜಶೇಖರ ಪಿ.ಕೆ., ಮಣ್ಣಿನ ಹಣತೆ, ಪು.ಸಂ550
4. Mysore Legislative council debates 27th March 1953
5. ಸಂದರ್ಶನ, ಸಂಶೋಧಕನಿಂದ 13/5/2012.
6. ಸಿ.ಪಿ.ನಾಗರಾಜ, ಮೌನ ಸಾಧಕ ಡಾ.ಸಿ.ಬಂದೀಗೌಡ, ಪು.ಸಂ.23
7. ರಾಜಶೇಖರ ಪಿ.ಕೆ., ಮಣ್ಣಿನ ಹಣತೆ, ಪು.ಸಂ.449
8. ಸಂದರ್ಶನ, ಸಂಶೋಧಕನಿಂದ, 13/5/2012.
9. ಸಂದರ್ಶನ, ಸಂಶೋಧಕನಿಂದ 13/5/2012.
10. ಪ್ರೊ.ಹೆಚ್.ಎಲ್. ಕೇಶವಮೂರ್ತಿ–ಸ್ವಾತಂತ್ರ್ಯದೆಡೆಗೆ ನಿಲ್ಲದ ನಡಿಗೆ, ಪು–25
11. ಸಂದರ್ಶನ, ಸಂಶೋಧಕನಿಂದ, ದಿನಾಂಕ : 13/5/2012
12. ಸಂದರ್ಶನ, ಸಂಶೋಧಕನಿಂದ, ದಿನಾಂಕ : 13/5/2012
13. ಪ್ರೊ.ಹೆಚ್.ಎಲ್. ಕೇಶವಮೂರ್ತಿ–ಪೂರ್ವೋಕ್ತ ಪುಟ–26
14. ಸಂದರ್ಶನ ಸಂಶೋಧಕನಿಂದ ದಿನಾಂಕ : 13/5/2012.

ಅಧ್ಯಾಯ : ಐದು

ಉಪಸಂಹಾರ

ಡಾ.ಸಿ.ಬಂದೀಗೌಡರು ತಮ್ಮ ಜೀವನದುದ್ದಕ್ಕೂ ಪರಿಶುದ್ಧ ಜೀವನ ನಡೆಸಿದವರು. ಸಾರ್ವಜನಿಕರ ಹಿತಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ದರಿದ್ದರು. ಜಮೀನ್ದಾರರಾಗಿ ಹುಟ್ಟಿದರೂ ಸ್ವತಃ ತಾವೇ ಗೇಣಿದಾರರಿಗೆ ಅನಾನುಕೂಲವಾಗಿದ್ದ ಗೇಣಿ ಶಾಸನವನ್ನು ಜಾರಿಗೊಳಿಸಲು ಒತ್ತಾಯಿಸಿದರು. ಇದರಿಂದ ಬಡಗೇಣಿದಾರರಿಗೆ ಅನುಕೂಲವಾಯಿತು. ಇದರಿಂದ ಬಂದೀಗೌಡರ 20 ಎಕರೆ ಜಮೀನು ಗೇಣಿದಾರರಿಗೆ ಹೋಯಿತು. ಇದು ಅವರು ಹೊಂದಿದ್ದ ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ಅಸಮಾನತೆ ತೊಡೆದು ಹಾಕಲು ಮಾಡಿದ ಪ್ರಯತ್ನವಾಯಿತು. ಪ್ರಸ್ತುತ ಕರ್ನಾಟಕದ ಆಥಿರ್ಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಹಲವು ಕಡೆ ನಾವು ಜಮೀನ್ದಾರರು ಮತ್ತು ಭೂರಹಿತರ ನಡುವೆ ನಿರಂತರ ಸಂಘರ್ಷವನ್ನು ನೋಡುತ್ತಿರುವಾಗ ಹಲವು ದಶಕಗಳ ಹಿಂದೆಯೇ ಗೇಣಿಶಾಸನದ ಮೂಲಕ ಈ ಅಸಮತೋಲನವನ್ನು ತೊಡೆದುಹಾಕಲು ಯತ್ನಿಸಿ ಸಫಲರಾಗಿದ್ದಾರೆ. ಅದರಲ್ಲೂ ಗೇಣಿಶಾಸನವನ್ನು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜಾರಿಗೊಳಿಸಿದ್ದು, ಒಂದು ಕ್ರಾಂತಿಕಾರಕ ಹೆಜ್ಜೆಯೇ ಆಗಿದೆ. ಈ ಕಾಂತ್ರಿಕಾರ ದಿಟ್ಟ ಕ್ರಮ ಹಲವು ಜನೋಪಯೋಗಿ ಕಾರ್ಯಗಳನ್ನು ಅವರು ಮೈಗೂಡಿಸಿಕೊಳ್ಳಲು ಸಹಕಾರಿಯಾಯಿತು.

ಬಂದೀಗೌಡರು ಗಾಂಧೀಯುಗದ ಸಂಕೇತ. ಗಾಂಧೀತತ್ವ ಆದರ್ಶಗಳಿಗೆ ಚಿಕ್ಕಂದಿನಿಂದಲೇ ಮಾರುಹೋಗಿ ಅವರ ಸರಳ ಜೀವನವನ್ನು ಜೀವನದುದ್ದಕ್ಕೂ ಮೈಗೂಡಿಸಿಕೊಂಡವರು. 1942 ರಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಯುತ್ತಿದ್ದಾಗ ಗೌಡರು ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದರು. ಗಾಂಧೀಜಿಯವರ 'ಮಾಡು ಇಲ್ಲವೇ ಮಡಿ' ಕರೆಗೆ ಓಗೊಟ್ಟು ವಿದ್ಯಾರ್ಥಿಗಳೊಡನೆ ಸಮಾಲೋಚಿಸಿ ಪಾಠಪ್ರವಚನಗಳನ್ನು ಬಹಿಷ್ಕರಿಸಿ ಹರತಾಳ ಆಚರಿಸಿದರು. ಮೈಸೂರಿನ ಮುಖ್ಯ ರಸ್ತೆಗಳಲ್ಲಿ ಬ್ರಿಟೀಷರ ವಿರುದ್ದ ಘೋಷಣೆಗಳನ್ನು ಕೂಗುತ್ತ ಶಿಸ್ತಿನಿಂದ ಮೆರವಣಿಗೆ ನಡೆಸಿದರು. ಅದು ವೈದ್ಯ ವಿದ್ಯಾರ್ಥಿಗಳ ಏಕಮತ್ಯ ಮತ್ತು ದೇಶಾಭಿಮಾನದ ಸಂಕೇತವಾಗಿತ್ತು. ಆಗಸ್ಟ್ 1942 ರ ಮೆಡಿಕಲ್ ಕಾಲೇಜ್ ಹಾಸ್ಟೆಲ್‌ನಲ್ಲಿ ಸಭೆ ಸೇರಿ ಪ್ರಾಂಶುಪಾಲರಾದ ಡಾ.ರಾಬಿನ್‌ಸನ್ ಎಂಬುವವರು ಗಾಂಧೀಜಿಯವರ ಬಗ್ಗೆ ಹಗುರುವಾಗಿ ಮಾತನ್ನಾಡಿದಾಗ ಅದನ್ನು ಪ್ರತಿಭಟಿಸಿದ್ದರು.

1948 ರಿಂದ 1950 ರವರೆಗೆ ಬಂದೀಗೌಡರು ಶ್ರೀರಂಗಪಟ್ಟಣದ ಪುರಸಭಾಧ್ಯಕ್ಷರಾಗಿದ್ದರು. ಇವರ ಅಧಿಕಾರಾವಧಿಯಲ್ಲಿ ಹಲವು ರಚನಾತ್ಮಕ ಕಾರ್ಯಗಳನ್ನು ಮಾಡಿದ್ದಾರೆ. ಪುರಸಭಾಧ್ಯಕ್ಷರ ಅವಧಿಯಲ್ಲಿ ಅಸ್ಪೃಶ್ಯರಿಗಾಗಿ

ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಹಂಚುವ ನಿರ್ಣಯಗಳನ್ನು ಕೈಗೊಂಡು ಅವರಿಗೆ ಸೂರು ಒದಗಿಸಲು ಶ್ರಮಿಸಿದ್ದಾರೆ.

1945 ರಿಂದ 1950 ರವರೆಗೆ ಬಂದೀಗೌಡರು ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ಗಣನೀಯ ಸೇವೆ ಗೈದಿದ್ದಾರೆ. ರೈತರ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಸದನದ ಗಮನಸೆಳೆದು ರೈತಾಪಿ ಸಮಸ್ಯೆಗಳು, ಆರೋಗ್ಯ ಮುಂತಾದ ಹಲವು ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪಿಸಿ ನ್ಯಾಯ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

1964 ರಿಂದ 1970 ರವರೆಗೆ ಉಪಾಧ್ಯಾಯ ಕ್ಷೇತ್ರದಿಂದ ಆಯ್ಕೆಗೊಂಡು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕೂಡ ಅವಿಸ್ಮರಣೀಯವಾದ ಸೇವೆಗೈದು ರಾಜ್ಯದ ಗೌರವ ಪ್ರತಿಷ್ಠೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿದ್ದಾರೆ. ಗಾಂಧೀಜಿಯವರ ಮಧ್ಯಪಾನ ವಿರೋಧಿ ನೀತಿ ಉನ್ನತ ಶಿಕ್ಷಣದ ಬಗ್ಗೆ, ಬೆಲ್ಲ ತಯಾರಿಕೆಯ ಬಗ್ಗೆ ಅವರು ಹೊಂದಿದ್ದ ನಿಲುವುಗಳನ್ನು ಸರ್ಕಾರಕ್ಕೆ ಸ್ಪಷ್ಟಪಡಿಸಿ ಅವುಗಳ ಪರಿಹಾರಕ್ಕೆ ಒತ್ತಾಯಪಡಿಸಿದ್ದಾರೆ.

ಡಾ.ಸಿ.ಬಂದೀಗೌಡರು ಮರೆಯಾಗದೇ ಜನಮಾನಸದಲ್ಲಿ ಉಳಿದಿರುವುದು ಅವರು ವೈದ್ಯರಾಗಿ ಸಲ್ಲಿಸಿರುವ ಸೇವೆಯಿಂದ, ಗೌಡರು ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಜನರಿಗೆ ಕೈಗಟುಕುವ ದರದಲ್ಲಿ ಚಿಕಿತ್ಸೆ ನೀಡುತ್ತಾ " ಒಂದಾಣೆ ವೈದ್ಯ ಮತ್ತು ಜನತಾ ವೈದ್ಯ" ಎಂಬ ಹೆಗ್ಗಳಿಕೆಗೆ ಕಾರಣರಾದರು. ಡಾ. ಬಂದೀಗೌಡರು ಪ್ರತಿಯೊಬ್ಬ ರೋಗಿಗೆ ತಾವು ನೀಡುತ್ತಿದ್ದ ಔಷಧಕ್ಕೆ ತಗಲುತ್ತಿದ್ದ ಖರ್ಚಿನ ಮೇಲೆ ಒಂದಾಣೆಯನ್ನು ವೈದ್ಯರ ಶುಲ್ಕವಾಗಿ ತೆಗೆದುಕೊಳ್ಳುತ್ತಿದ್ದರು. ರೋಗಿಗಳಿಗೆ ಇಷ್ಟು ಕಡಿಮೆ ವೆಚ್ಚದಲ್ಲಿ ಮತ್ತೆಲ್ಲೂ ವೈದ್ಯಕೀಯ ಸೌಲಭ್ಯ ದೊರೆಯುತ್ತಿರಲಿಲ್ಲ. ಅಲ್ಲದೇ ತಮ್ಮ ವೃತ್ತಿ ಜೀವನದಲ್ಲಿ ಎಂದೂ ರೋಗಿಗಳನ್ನು ಹಣಕ್ಕಾಗಿ ಶೋಷಣೆ ಮಾಡಿದವರಲ್ಲ. ಇವರು ಸುತ್ತ ಮುತ್ತಲ ಹಳ್ಳಿಗಳಲ್ಲಿ ತೀವ್ರವಾದ ಕಾಯಿಲೆಗೆ ಗುರಿಯಾಗಿ ಚಿಕಿತ್ಸಾಲಯಕ್ಕೆ ಬರಲಾಗದ ರೋಗಿಗಳ ಬಳಿಗೆ ಎತ್ತಿನಗಾಡಿ, ಜಟಕಾ ಬಂಡಿ ಅಥವಾ ಸೈಕಲ್‌ನಲ್ಲಿ ತೆರಳಿ ಅವರುಗಳನ್ನು ಉಪಚರಿಸುತ್ತಿದ್ದರು. 1944 ರಿಂದ 1996 ರವರೆಗೆ ನಿಸ್ವಾರ್ಥದಿಂದ ಅಹರ್ನಿಶಿ ದುಡಿದು ಜನಸೇವೆಗೈದಿದ್ದಾರೆ. ಇಂದು ಅವರಿಗೆ 95 ವರ್ಷ ಮೀರಿರುವುದರಿಂದ ಅವರ ವಯಸ್ಸು ಅವರಿಗೆ ಸ್ಪಂದಿಸದೇ ಇರುವುದರಿಂದ ವೈದ್ಯ ವೃತ್ತಿಗೆ ಪೂರ್ಣ ವಿರಾಮ ಹಾಕಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಬಂದೀಗೌಡರದ್ದು ನೇರ ನಡೆತೆಯುಳ್ಳ ಸ್ವಭಾವ ತನಗೆ ಸರಿಕಾಣದನ್ನು ಸಹಿಸಿಕೊಳ್ಳದೇ, ರಾಜೀ ಮಾಡಿಕೊಳ್ಳದೇ ಅದನ್ನು ಬಹಿರಂಗವಾಗಿಯೇ ಟೀಕಿಸುವ ಸ್ವಭಾವ. ಆ ವ್ಯಕ್ತಿ ಅಥವಾ ವ್ಯವಸ್ಥೆ ಎಷ್ಟೇ ಪ್ರಬಲವಾಗಿರಲಿ ಅದನ್ನು ಸರಿಪಡಿಸದೇ ಬಿಡುತ್ತಿರಲಿಲ್ಲ. ಇಲ್ಲವೇ ಅದರೊಂದಿಗಿನ ಸಂಬಂಧವನ್ನು ಅವರು ಕಳೆದುಕೊಳ್ಳಲು ಹಿಂಜರಿಯುತ್ತಿರಲಿಲ್ಲ. 1944 ರಿಂದ 1985 ರವರೆಗೆ ರಾಜಕೀಯ ರಂಗದ ಹಲವು

ಮಜಲುಗಳನ್ನು ಚನ್ನಾಗಿ ಅರಿತವರಾಗಿದ್ದರು. 1975 ರ ಸಂದರ್ಭದಲ್ಲಿ ಬಂದೀಗೌಡರು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿ ರಾಷ್ಟ್ರ ಮಟ್ಟದ ರಾಜಕಾರಣದಲ್ಲೂ ಅನುಭಗಳಿಸಿಕೊಂಡವರು. 1975 ರಲ್ಲಿ ಆಗಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾದ ನಿರಂಕುಶ ವ್ಯವಸ್ಥೆಯನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷದಿಂದ ಹೊರ ಬಂದು 1979 ರಿಂದ 1985 ರವರೆಗೆ ಮಂಡ್ಯ ಜಿಲ್ಲೆಯ ಜನತಾ ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಜನತಾ ಪಕ್ಷದಲ್ಲಿನ ಕೆಲವು ವ್ಯಕ್ತಿಗಳ ಉಳಿಗ ಮಾನ್ಯ ವ್ಯವಸ್ಥೆಯ ಮನೋ ಪ್ರವೃತ್ತಿಯನ್ನು, ನಡೆ–ನುಡಿಗಳನ್ನು ಪ್ರತಿಭಟಿಸಿ 1985 ರಲ್ಲಿ ಜನತಾ ಪಕ್ಷವನ್ನು ತೊರೆದು ಸಕ್ರಿಯರಾಜಕಾರಣದಿಂದ ದೂರಸರಿದರು.

ಬಂದೀಗೌಡರ ಜನಪ್ರಿಯತೆ, ಪ್ರಾಮಾಣಿಕ ನಡೆ–ನುಡಿಯಿಂದ ಹಲವು ಪದವಿಗಳು ಅವರನ್ನು ಅರಿಸಿ ಬಂದಿವೆ. ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜಿನ ಪ್ರವೇಶ ಸಮಿತಿಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರಾಗಿ, ಮಂಡ್ಯ ಜಿಲ್ಲೆಯ ಡಿ.ಸಿ.ಸಿ.ಬ್ಯಾಂಕ್, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ, ಶ್ರೀರಂಗಪಟ್ಟಣ ತಾಲ್ಲೂಕಿನ ಟಿ.ಎ.ಪಿ.ಸಿ.ಎಂ.ಎಸ್.ನ ಅಧ್ಯಕ್ಷರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ. ತಾವು ಕಾರ್ಯನಿರ್ವಹಿಸಿದ ಎಲ್ಲಾ ರಂಗದಲ್ಲೂ ನಿಸ್ವಾರ್ಥ ಸೇವೆ, ಶ್ರೀಸಾಮಾನ್ಯರ ಹಿತಕ್ಕಾಗಿ ಅಗತ್ಯವಾದ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದಿದ್ದಾರೆ.

ಅಂದು ಕ್ರಿಯಾಶೀಲರಾಗಿ ಸದಾಚಟುವಟಿಕೆಯಿಂದ ಕೆಲಸ ನಿರ್ವಹಿಸಿದ್ದ ಸಿ.ಬಂದೀಗೌಡರು ಇಂದು ಅವರ ವಯಸ್ಸು ಅವರೊಂದಿಗೆ ಕೈಜೋಡಿಸದೇ ಇದ್ದ ಕಾರಣ ವಿಶ್ರಾಂತ ಜೀವನವನ್ನು ತಮ್ಮ ಶ್ರೀರಂಗಪಟ್ಟಣದ ಸ್ವಗೃಹದಲ್ಲಿ ಕಳೆಯುತ್ತಿದ್ದಾರೆ. 1945 ರಿಂದ 1996 ರವರೆಗೆ ಜನಮಾನಸದಲ್ಲಿ ಉಳಿಯುವಂತೆ ವೈದ್ಯಕೀಯ ಸೇವೆಯನ್ನು ಸಮಾಜದ ಕಲ್ಯಾಣಕ್ಕಾಗಿ ಸತತವಾಗಿ 50 ವರ್ಷಗಳಿಗಿಂತಲೂ ಹೆಚ್ಚಾಗಿ ಕಲ್ಯಾಣಿ ಚಿಕಿತ್ಸಾಲಯದ ಮೂಲಕ ಸೇವೆ ಸಲ್ಲಿಸಿ, ಅದರ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಎರಡನೆಯ ಮಗ ಡಾ. ಸೃಜಯ್‌ಕುಮಾರ್‌ರವರಿಗೆ ವಹಿಸಿ ವೈದ್ಯಕೀಯ ಸೇವೆ ಇನ್ನೂ ಸಲ್ಲಿಸಬೇಕು ಎಂಬ ಅಭಿಲಾಷೆ ಇದ್ದರೂ ತುಂಬು ವಯಸ್ಸಿನ ಕಾರಣದಿಂದಾಗಿ ಸೇವೆ ಸಲ್ಲಿಸಲು ಆಗುತ್ತಿಲ್ಲವೆಂಬ ಕೊರಗು ಅವರನ್ನು ಇನ್ನೂ ಕಾಡುತ್ತಿದೆ. ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ ಬಳಿಕ ಇಂದಿನ ರಾಜಕೀಯ ಸ್ಥಿತಿಯಂತೂ ಸಂಪೂರ್ಣ ಹದಗೆಟ್ಟು ಹೋದ ಕಾರಣ ಅದರಿಂದ ಸಂಪೂರ್ಣ ದೂರ ಉಳಿದರು. ಗಾಂಧೀವಾದಿಗಳಾಗಿ ಗಾಂಧೀತತ್ವಗಳಿಗೆ ಸಂಪೂರ್ಣ ಬೆಲೆ ಕೊಟ್ಟು ಅದರಂತೆ ನಡೆದುಕೊಳ್ಳುತ್ತಿರುವ ಅವರು ಇಂದಿನ ರಾಜಕೀಯ ನಮಗೆ ತಕ್ಕದ್ದಲ್ಲ ಎಂದು ಹೇಳುತ್ತಾರೆ.

ಇಷ್ಟು ಮಾತುಗಳನ್ನು ಹೇಳುವಾಗ ಅವರ ಆಶಾವಾದವು ಎದ್ದುಕಾಣುತ್ತಿತ್ತು. ಕಂಗಳು ಹೊಳಪಾಗಿದ್ದು, ಯುವಕರು ಬದಲಾವಣೆ ತರಬಲ್ಲರು ಎಂಬ ಆಶಾವಾದ ಹೊಂದಿದ್ದಾರೆ.

ಹೀಗೆ ಹತ್ತು ಹಲವು ಜನಪರ ಕಾರ್ಯಗಳನ್ನು ಮಾಡುತ್ತಾ ಜನತೆಯ ಹಲವು ಕಷ್ಟ–ಸುಖಗಳಿಗೆ ಸ್ಪಂದಿಸುವ ಹಿರಿಯ ಚೇತನ ನಮ್ಮೊಂದಿಗಿರುವುದೇ ನಮ್ಮ ಸೌಭಾಗ್ಯ. ರಾಜಕಾರಣಿಯಾಗಿ ಶುದ್ಧ ಹಸ್ತದ ಜೀವನ ನಡೆಸಿದವರು. ಅಧಿಕಾರದ ದುರುಪಯೋಗ ಮಾಡಿಕೊಂಡವರಲ್ಲ, ಹಣ ಗಳಿಕೆಗೆ ಅನ್ಯಮಾರ್ಗ ಅನುಸರಿಸಿದವರಲ್ಲ. ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ, ಹಣಗಳಿಕೆಗೆ ವಾಮಮಾರ್ಗ, ಇವೆಲ್ಲವೂ ಬಂದೀಗೌಡರ ಬದುಕಿನಲ್ಲಿ ಸುಳಿಯಲೇ ಇಲ್ಲ. ಮಂಡ್ಯ ಜಿಲ್ಲೆಯನ್ನು ಕೇಂದ್ರವಾಗಿರಿಸಿಕೊಂಡು ಸಮಾಜದ ಉನ್ನತೀಕರಣಕ್ಕಾಗಿ ದುಡಿಯುತ್ತಿರುವವರು ಗಾಂಧೀಜಿಯ ಆಶಯದಂತೆ ಬದುಕನ್ನು ಸರಳೀಕರಣಗೊಳಿಸಿಕೊಂಡು ತನ್ನ ಸುತ್ತಲಿನ ಪರಿಸರವನ್ನು ಸತ್ಯ, ಅಹಿಂಸೆ, ಪ್ರಾಮಾಣಿಕತೆಗಳಿಂದ ಕೂಡಿರುವಂತೆ ಶ್ರಮಿಸುತ್ತಿರುವವರು. ಮಂಡ್ಯ ಜಿಲ್ಲೆಯಲ್ಲಿ ಬದುಕುಳಿದಿರುವ ಕೆಲವೇ ಕೆಲವು ಗಾಂಧೀವಾದಿಗಳಲ್ಲಿ ಬಂದೀಗೌಡರು ಒಬ್ಬರು. ಈ ಇಳಿ ವಯಸ್ಸಿನಲ್ಲೂ ವ್ಯಕ್ತಿತ್ವವನ್ನು ಪರಿಶುದ್ಧವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಇವತ್ತಿಗೂ ಆದರ್ಶಪ್ರಾಯರಾಗಿ ಬಾಳುತ್ತಿರುವ ಗೌಡರ ಸ್ವಚ್ಛ ಬದುಕು, ಆದರ್ಶ ಹಾಗೂ ಅನುಕರಣೀಯವಾಗಿದೆ.

****

ಪರಮಾರ್ಶನ ಗ್ರಂಥಗಳು

I. PRIMARY SOURCES

1. Proceedings of Mysore Representative Assembly, Debates (PMRA. 1945-1950)
2. Srirangapatna Town Municipal council Proceedings-1948-1950.
3. Mysore legislative council Debates, 1964-1970
4. A Review of working of Mysore Legislative Assembly 1964-1970.
5. Who 's who Mysore legislative year Book-1966.

II. ಸಂದರ್ಶನದ ಮಾಹಿತಿ

1) ಡಾ.ಸಿ.ಬಂದೀಗೌಡ ಡಾ.ಸುಜಯ್‌ಕುಮಾರ್ ಮತ್ತು ಪ್ರೇಮ್ ಕುಮಾರ್. ಜೋತ್ಸ್ನಾ

III. ಅನುಷಂಗಿಕ ಆಕರಗಳು

ಕನ್ನಡ ಆಧಾರ ಗ್ರಂಥಗಳು

1. **ಅಭಿಶಂಕರ್ ಕೆ. (ಸಂ.)** – ***ಮಂಡ್ಯ ಜಿಲ್ಲಾ ಗ್ಯಾಸೆಟ್‌ಯರ್,*** ಬೆಂಗಳೂರು–2003.

2. **ಕಾಳೇಗೌಡ ನಾಗವಾರ & ನಟರಾಜ್ ಹುಳಿಯಾರ್** – ***ಸ್ವಾತಂತ್ರ್ಯದ ಅಂತರ್ಜಲ,*** ಕರ್ನಾಟಕ ಸರ್ಕಾರ, ಬೆಂಗಳೂರು–1996.

3. **ಕಾಳೇಗೌಡ ನಾಗವಾರ & ಆನಂದಮೂರ್ತಿ ಜಿ.ವಿ** – ***ಶಾಂತವೇರಿ ಗೋಪಾಲಗೌಡ*** ನೆನಪಿನ ಸಂಪುಟ ಕನ್ನಡ ವಿಶ್ವವಿದ್ಯಾನಿಲಯ. ಹಂಪಿ–1997.

4. **ಕೇಶವಮೂರ್ತಿ ಹೆಚ್.ಎಲ್. (ಸಂ.)** – ***ಮಂಡ್ಯ ಜಿಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ,*** ಮಂಡ್ಯ ಬೆಳ್ಳಿ ಹಬ್ಬ ಸಂಸ್ಮರಣ ಸಂಚಿಕೆ –1979.

5. **ಗೋಪಾಲ್ ಆರ್**.(ಸಂ.)– *ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–2008.

6. **ಜವರೇಗೌಡ.ದೇ** – **ಸಿರಿಯೊಡಲು**, 63ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ–1994

7. **ಜವರೇಗೌಡ ದೇ** – *ಸುವರ್ಣ ಮಂಡ್ಯ* 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ–1994.

8. **ಜಯಪ್ರಕಾಶ್ ಗೌಡ ಬಿ.ಲಿಂಗಣ್ಣ ಬಂಧೂಕಾರ್** (ಸಂ.) – *ಮಂಡ್ಯ ಜಿಲ್ಲಾ ಸ್ವಾತಂತ್ರ್ಯ ವೀರರು,* ಪರಂಪರಾವ ಲೋಕನಾ ಸಮಿತಿ, ಮಂಡ್ಯ–2006.

9. **ದೊರೆಸ್ವಾಮಿ ಹೆಚ್.ಎಸ್**.– *ಸ್ವಾತಂತ್ರ್ಯಸಂಗ್ರಾಮ, ಕರ್ನಾಟಕ,* ಸಾಹಿತ್ಯ ಮಂದಿರ, ಬೆಂಗಳೂರು–2000

10. **ನಾಗರಾಜು ಸಿ.ಪಿ** – *ಮೌನಸಾಧಕ ಡಾ.ಸಿ.ಬಂದೀಗೌಡ,* ಬಂಧುಮಿತ್ರ ಪ್ರಕಾಶನ, ಮಂಡ್ಯ–2005.

11. **ನಾರಾಯಣ್‌ರಾವ್‌ವಿ.ಎಸ್**.– *ಸ್ವಾತಂತ್ರ್ಯ ಚಳುವಳಿಯಲ್ಲಿ ಶ್ರೀಸಾಮಾನ್ಯ* ಬೆಂಗಳೂರು 1978.

12. **ಮೊಹಮ್ಮದ್ ಜೆ.ಇಮಾಮ್** – *ಮೈಸೂರು ಆಗ ಮತ್ತು ಈಗ,* ತ.ವೆಂ.ಸ್ಮಾರಕ ಗ್ರಂಥಮಾಲೆ ಮೈಸೂರು 1966.

13. **ರಾಜೇಗೌಡ ಹ.ಕ**.(ಸಂ.) – *ಸಿಂಗಾರ* (ಕೆ.ಸಿಂಗಾರಿಗೌಡ ಅಭಿನಂದನ ಗ್ರಂಥ) ಮಂಡ್ಯ –1988

14. **ರಾಜಶೇಖರ ಪಿ.ಕೆ**. – *ಮಣ್ಣಿನ ಹಣತೆ* (ಶಿವರುದ್ರಪ್ಪ ಸಂಸ್ಮರಣ ಗ್ರಂಥ) ಹೊನ್ನಾರು ಜಾನಪದ ಗಾಯಕರು ಮೈಸೂರು.

15. **ರಂಗಪ್ಪ ಕೆ.ಎಸ್**. (ಪ್ರ.ಸಂ.)– *ಮೈಸೂರು ದರ್ಶನ* (ಸಂಪುಟ–1) ಕ.ರಾ.ಮು.ವಿ. ಮೈಸೂರು–2011.

16. **ಲಿಂಗಯ್ಯ ಡಿ**. – *ಶಿವಪುರ ಧ್ವಜಸತ್ಯಾಗ್ರಹ, ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ,* ಗೋಧೂಳಿ ಪ್ರಕಾಶನ ಬೆಂಗಳೂರು–2011.

17. ಲಿಂಗಯ್ಯ ಡಿ. – ***ಹೆಚ್.ಕೆ.ವೀರಣ್ಣಗೌಡ*** (ಸಂಕ್ಷಿಪ್ತ ಜೀವನ ಚರಿತ್ರೆ) ಎಚ್.ಕೆ.ವೀರಣ್ಣಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು –1999.

18. ಲಿಂಗಯ್ಯ. ಡಿ. – ***ರಾಷ್ಟ್ರ ರತ್ನ ಕೆಂಗಲ್ ಹನುಮಂತಯ್ಯ ಸಮಗ್ರ ಜೀವನ ಚರಿತ್ರೆ*** ಗೋಧೂಳಿ ಪ್ರಕಾಶನ, ಬೆಂಗಳೂರು–2010.

19. ವೆಂಕಟಪ್ಪಗೌಡ, ಕೋಣಂದೂರು – ***ಜೀವಂತಜ್ವಾಲೆ*** (ಶಾಂತ ವೇರಿ ಗೋಪಾಲಗೌಡ ಸ್ಮಾರಕ ಗ್ರಂಥ, ಯಶಸ್ವಿ ಪ್ರಕಾಶನ, ಬೆಂಗಳೂರು–1981.

20. ವೆಂಕಟಪ್ಪಗೌಡ ಕೋಣಂದೂರು – ***ನವಮೈಸೂರು ಶಿಲ್ಪಿ ಕೆಂಗಲ್ ಹನುಮಂತಯ್ಯ*** ಯಶಸ್ವಿ ಪ್ರಕಾಶನ, ಬೆಂಗಳೂರು 1985.

21. ವೀರಣ್ಣಗೌಡ ಎಚ್.ಕೆ.– ***ಬದುಕು–ಮೆಲುಕು*** (ಆತ್ಮಕಥನ) ಪ್ರಬುದ್ಧ ಪ್ರಕಾಶನ ಮೈಸೂರು–1974.

22. ವೀರತ್ತಪ್ಪ ಕೆ. – ***ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ,*** ವಿಜಯರವಿ ಪ್ರಕಾಶನ, ಬೆಂಗಳೂರು–1977.

23. ಶಂಕರಗೌಡ ಕೆ.ವಿ. (ಪ್ರ.ಸಂ.) – ***ಸಾಹಸ ಯಾತ್ರಿ*** (ಪಿ.ಎನ್.ಜವರಪ್ಪಗೌಡ ಅಭಿನಂದನ ಗ್ರಂಥ) ಮಂಡ್ಯ–1989..

24. ಸೂರ್ಯನಾಥ್ ಕಾಮತ್ (ಸಂ.) – ***ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು*** ಸಂ.1,2,3 ಗೀತಾಬುಕ್ ಹೌಸ್, ಮೈಸೂರು–1977.

25. ಸೂರ್ಯನಾಥ್ ಕಾಮತ್ (ಸಂ.) – ***ಕರ್ನಾಟಕ ರಾಜ್ಯ ಗೆಜೆಟಿಯರ್*** ಸಂ. 1,2 ಕರ್ನಾಟಕ ಸರ್ಕಾರ, ಬೆಂಗಳೂರು–1982.

26. **ಸೂರ್ಯನಾಥ ಕಾಮತ್** - *ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ* , ಲೋಕಶಿಕ್ಷಣ ಟ್ರಸ್ಟ್ ಗ್ರಂಥ ಮಾಲೆ, ಹುಬ್ಬಳ್ಳಿ ಬೆಂಗಳೂರು-1992.

27. **ಸಿದ್ದನಹಳ್ಳಿ ಕೃಷ್ಣ ಶರ್ಮ** - *ಗಾಂಧೀ ಮತ್ತು ಕರ್ನಾಟಕ* -ಗಾಂಧೀಸ್ಮಾರಕ ನಿಧಿ ಬೆಂಗಳೂರು-1970.

28. **ಷೇಕ್‌ಅಲಿ (ಪ್ರ.ಸಂ.)** - *ಕರ್ನಾಟಕ ಚರಿತ್ರೆ* -ಸಂ.7, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 1997.

IV. ಪತ್ರಿಕೆಗಳು

1. ಪ್ರಜಾವಾಣಿ
2. ಸಾದ್ವಿ ಪತ್ರಿಕೆ
3. ಸಂಯುಕ್ತ ಕರ್ನಾಟಕ.

V. WORKS IN ENGLISH

1. **Abhi Shankar K. (Ed.)** -*Gazetteer of India – Mysore State Mandya District,* Govt. of Mysore. 1967.

2 **Diwakar R.R. (Ed)** - *Karnataka Through the Ages* Govt. of Mysore -1968.

3. **Handa R.L.** - *History of Freedom struggle in princely states*. Central NewsAgency, Delhi-1968.

4. **Hallappa G.S.** - *From princely Autocraey to people's Government,* Sahithya Mandira, Bangaloree -1993.

5. **Krishna Rao M.V. (Ed)** - *The Freedom Movement in Mysore and our Popular Ministry,* Newdelhi-1985.

6. **Ramaiah P.R.** - *Mysore's Political Evolution* – Bangalore-1961.

7. **Srinivasa Murhy H.V. - & R.Ramakrishna** - *History of Karnataka* S.Chand, & Company Newdelhil-1977.

8. **Veerathappa K.** - *Readings in Modren History of Mysore*, New Delhi-1985.

****

ವಂಶವೃಕ್ಷ

ಬಂದೀಗೌಡ (ಮೃತರು)
ಪತ್ನಿ ಕಲ್ಯಾಣಮ್ಮ (ಮೃತರು)

ಚಿಕ್ಕಣ್ಣೇಗೌಡ (ಮೃತರು)
ಪತ್ನಿ ದೇವಮ್ಮ (ಮೃತರು)

ಡಾ.ಸಿ.ಬಂದೀಗೌಡ
ಪತ್ನಿ ರುಕ್ಮಿಣಮ್ಮ (ಮೃತರು)

ಜವರೇಗೌಡ (ಮೃತರು)

ಪ್ರೇಮ್‌ಕುಮಾರ್

ಡಾ. ಸುಜಯ್‌ಕುಮಾರ್

ಜ್ಯೋತ್ಸ್ನಾ



ಡಾ॥ಸಿ.ಬಂದೀಗೌಡ